ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಸಂಪುಟ 2 ಸಂಚಿಕೆ 16

ಏಪ್ರಿಲ್ 20, 2008

ಕನ್ನಡ ವಾರಪತ್ರಿಕೆ

ರೂ. 5/-




ಎಣೆ ಇಲ್ಲದ ಬೆಲೆ ಏರಿಕೆ
ಹೊಣೆ ಇಲ್ಲದ ಸರ್ಕಾರ



ಓಟಿನ ಕಾಳಜಿಯ ಪ್ರಣಾಳಿಕೆ
ಪಾಠ ಕಲಿಯದ ಕಾಂಗ್ರೆಸ್

ದಲಿತರ ಮೇಲೆ ಹೆಚ್ಚಿದ ಧಾಳಿ



ಸಾಮಾಜಿಕ ನ್ಯಾಯ ಎತ್ತಿಹಿಡಿದ ನ್ಯಾಯಾಲಯ

ಹಿಂದುತ್ವ ಶಕ್ತಿಗಳಿಂದ ಅಂಬೇಡ್ಕರ್ ಅಪಹರಣ ಯತ್ನ!

ಇದ್ದದ್ದು ಇದ್ದಾಂಗ....

ರಾಜೀನಾಮೆ

ತುಮಕೂರು ಜಿಲ್ಲೆಯ ಗುಬ್ಬಿ ಕ್ಷೇತ್ರದಲ್ಲಿ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿ, ಜನತೆಗೆ ಪರಿಚಯ ಇಲ್ಲದವರಿಗೆ ಟಿಕೆಟ್ ನೀಡಿರುವುದರಿಂದ ನಾನು ಈ ಕ್ರಮವನ್ನು ಖಂಡಿಸಿ ಸಂಸದ ಸ್ಥಾನಕ್ಕೆ ಹಾಗೂ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆ.

ಬಿಜೆಪಿ ಸಂಸದ ಎಸ್.ಮಲ್ಲಿಕಾರ್ಜುನಯ್ಯ

★

'ಮೀಸಲಾತಿ ಇದ್ದಾಗ ಗೆಲ್ಲಲು ನಾವು (ಪರಿಶಿಷ್ಟರು) ಬೇಕು. ಈಗೇಕೆ ಬೇಡ'

ಶಿರಸಿ ಸಿದ್ದಾಪುರ ಕ್ಷೇತ್ರ ಬಿಜೆಪಿಯ ಮಾಜಿ ಶಾಸಕ ವಿವೇಕಾನಂದ ವೈದ್ಯ

★

ಹೆಂಚು - ಹಂಚು - ಹೊಂಚು

ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವಂತೆಯೇ ಮಾಜಿ ಸಚಿವ ಬಿ.ನಾಗರಾಜಶೆಟ್ಟಿ ಅವರು ಬಂಟ್ವಾಳ ವಿಧಾನಸಭಾ ಕ್ಷೇತ್ರದಲ್ಲಿ ಜನರಿಗೆ ಹಂಚುಗಳನ್ನು ವಿತರಿಸುವ ಮೂಲಕ ಗೆಲ್ಲಲು ಅಡ್ಡದಾರಿಗಳನ್ನು ಅನುಸರಿಸುತ್ತಿದ್ದಾರೆ. ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡದ ಕಾರಣ ಅವರಿಗೆ ಈಗ ಚುನಾವಣೆಯನ್ನು ಎದುರಿಸುವ ಧೈರ್ಯವಿಲ್ಲ.

ಬಿ.ಉಮಾನಾಥ ರೈ
ಮಾಜಿ ಸಚಿವರು, ಕಾಂಗ್ರೆಸ್ ಮುಖಂಡರು

★

ಸುಳ್ಳು, ಭ್ರಮೆ

"ಭೂತ ಪ್ರೇತ ಎಂಬುದು ಸುಳ್ಳು. ಮನುಷ್ಯ ಸತ್ತ ಮೇಲೆ ದೇಹ ಪಂಚಭೂತಗಳಲ್ಲಿ ವಿಲೀನವಾಗುತ್ತದೆ. ಆದರಾಚೆ ಏನೂ ಇಲ್ಲ. ಸ್ವರ್ಗ ನರಕ ಎಂಬುದು ನಮ್ಮ ಕಲ್ಪನೆ. ಸ್ಮಶಾನದ ಮಣ್ಣು ದೇವಾಲಯಗಳನ್ನು ನಿರ್ಮಿಸಿದ ಮಣ್ಣೂ ಒಂದೇ. ಆಕಾಶದ ಮೇಲೆ ಬೇರೊಂದು ಲೋಕ ಇದೆ. ಅಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಇದ್ದಾರೆ ಎಂಬುದೆಲ್ಲಾ ಭ್ರಮೆ."

ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು
ಅಮಾವಾಸ್ಯೆಯ ನಡುರಾತ್ರಿ ದಾವಣಗೆರೆಯ ಸ್ಮಶಾನದಲ್ಲಿ ಸಂಘಟಿಸಿದ ಚಿಂತನಾಗೋಷ್ಠಿಯಲ್ಲಿ.

★

ಮಾತುಕತೆ

ಹಿಂದೂಸ್ತಾನ್ ಸೇನಾ ವತಿಯಿಂದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 26 ಕ್ಷೇತ್ರಗಳ ಅಭ್ಯರ್ಥಿಗಳನ್ನು ಪ್ರಕಟಿಸುತ್ತಿದ್ದೇವೆ. ಚುನಾವಣೆಯಲ್ಲಿ ಸ್ಪರ್ಧಿಸಲು ಚಿಹ್ನೆ ನೀಡಲು ರಾಜ್ಯ ಚುನಾವಣಾ ಆಯೋಗವನ್ನು ಕೋರಲಾಗಿದೆ. ತ್ರಿಶೂಲ ಗಂಟೆ, ಬಿಲ್ಲು ಬಾಣ, ಸೂರ್ಯನ ಚಿಹ್ನೆ ನೀಡುವಂತೆ ಮನವಿ ಸಲ್ಲಿಸಲಾಗಿದೆ. ಮಹಿಮಾ ಪಟೇಲ್ ಅವರ ಸ್ವರ್ಣಯುಗ ಪಕ್ಷದೊಂದಿಗೆ ವಿಧಾನಸಭೆ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ ಮಾತುಕತೆ ನಡೆಯುತ್ತಿದೆ.

ಪ್ರಮೋದ್ ಮುತಾಲಿಕ್
ರಾಷ್ಟ್ರೀಯ ಹಿಂದೂಸ್ಥಾನ್ ಸೇನಾ ಅಧ್ಯಕ್ಷ

★

ಭಾರತ ಬರೀ ನಗರಗಳಲ್ಲಿ ಇಲ್ಲ. ಆದರಲ್ಲೂ ನಗರಗಳಲ್ಲಿನ ಮೇಲ್ವರ್ಗದವರಿಗಾಗಿ ಮಾತ್ರ ಭಾರತ ಇಲ್ಲ. ಈ ಭಾರತ - ದುಡಿಯುವ ವರ್ಗ ಹಾಗೂ ರೈತರದ್ದೂ ಹೌದು. ಈ ವರ್ಗದವರಲ್ಲಿ ಮಾರ್ಕ್ಸ್‌ವಾದದ ಬಗ್ಗೆ ಸರಿಯಾದ ಜಾಗೃತಿ ಮೂಡಿಸಿದಲ್ಲಿ ಮುಂದೆ ಅದು ಅಪಾರ ಪ್ರಭಾವ ಬೀರುತ್ತದೆ ಎಂಬುದು ನನ್ನ ಅನಿಸಿದೆ.

– ನಂದನ್ ಮಣಿರತ್ನಂ, ನಿರ್ದೇಶಕ ಮಣಿರತ್ನಂ ಹಾಗೂ ಸುಹಾಸಿನಿಯವರ 16ವರ್ಷದ ಪುತ್ರ

STATEMENT OF THE OWNERSHIP ETC
The Weekly Newspaper "JANASHAKTHI KANNADA VARA PATRIKE"
Form IV
(See Rule 8)

1. Place of Publication	:	# 12, 18th Cross, S.R.Nagar, Bangalore -560 027 (Karnataka)
2. Periodicity of Publication	:	Weekly
3. Printer's Name	:	G.N.Nagaraj
(Whether Citizen of India? If Foreigner, State the Country of Origin)	:	Indian
4. Address	:	# 12, 18th Cross, S.R.Nagar, Bangalore -560 027, (Karnataka)
5. Editor's Name	:	S.Y. Gurushanth
(Whether Citizen of India? If Foreigner, State the Country of Origin)	:	Indian
Address	:	# 12, 18th Cross, S.R.Nagar, Bangalore -560 027, (Karnataka)
6. Name and address of Individuals who own the Newspaper and partners or Shareholders holding more than one percent of the Notal capital :		Communist Party of India(Marxist) Karnataka State Committee, # 12, 18th Cross, S.R.Nagar, Bangalore -560 027, (Karnataka)

I G.N. Nagaraj, hereby declare that the particulars given above are true to the best of my knowledge and belief.

Date : 31 March 2008
Bangalore

Sd/-
G.N.Nagaraj
Publisher

ಚುಚ್ಚು ಮದ್ದು

ಕನಿಕರ? ಅಹಂಕಾರ?

■ "ಪ್ರಸ್ತುತ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ (ಎಸ್)ನ ಸ್ಥಿತಿ ನೋಡಿದರೆ ಕನಿಕರ ಬರುತ್ತದೆ."

ಅನಂತಕುಮಾರ್, ಬಿಜೆಪಿ ಮುಖಂಡರು

► ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲೂ ಇಂತದ್ದೇ ಏನೋ ಹೇಳಿದ ಹಾಗಿತ್ತಲ್ಲ.

●

ಪಾಠವಾ?

■ "ಐಟಿ, ಬಿಟಿ ಕೆಲಸ ಪೂರ್ಣಗೊಂಡಿದೆ. ಇನ್ನೇನಿದ್ದರೂ ಗ್ರಾಮೀಣಾಭಿವೃದ್ಧಿಗೆ ಒತ್ತು."

ಎಸ್.ಎಂ.ಕೃಷ್ಣ ಮಾಜಿ ಮುಖ್ಯಮಂತ್ರಿ

► ಕಳೆದ ಚುನಾವಣೆಯಿಂದ ಕಲಿತ ಪಾಠವಾ?

●

ಹಾಗೇನೂ ಇಲ್ವಲ್ಲಾ

■ 'ಕೇಂದ್ರವನ್ನು ಬೆಚ್ಚಿ ಬೀಳಿಸಿರುವ ಬೆಲೆ ಏರಿಕೆ'

ಪ್ರಜಾವಾಣಿಯ ಕುಲದೀಪ್ ನಯ್ಯರ್ ಅಂಕಣಕ್ಕೆ ತಲೆಬರಹ

► ಇಲ್ವಲ್ಲಾ? ಹಾಗೇನೂ ಕಾಣ್ತಾ ಇಲ್ವಲ್ಲಾ.

●

ಸರಿಹೋಗುತ್ತೆ

■ ಪಂಜಾಬ್ ಮತ್ತು ಹರಿಯಾಣ ಮಾರುಕಟ್ಟೆಗಳಲ್ಲಿ ಗೋಧಿ ದಾಸ್ತಾನಿನಲ್ಲಿ ಗಮನಾರ್ಹ ಪ್ರಮಾಣದಲ್ಲಿ ಇಳಿಕೆಯಾಗಿದೆ. ವ್ಯಾಪಾರಸ್ಥರು ನೇರವಾಗಿ ರೈತರ ಬಳಿಗೆ ಹೋಗಿ ಗೋಧಿಯನ್ನು ಸರ್ಕಾರ ನಿಗದಿಪಡಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ 5 ರಿಂದ 10 ರೂ ಹೆಚ್ಚು ಬೆಲೆ ನೀಡಿ ಖರೀದಿ ಮಾಡಿ ಸಂಗ್ರಹಿಸುತ್ತಿದ್ದಾರೆ. ವ್ಯಾಪಾರಸ್ಥರು ಸುಲಭವಾಗಿ ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿದ್ದಾರೆ.

ಶರದ್ ಪವಾರ್, ಕೇಂದ್ರ ಕೃಷಿ ಮಂತ್ರಿ

► ನೀವು ಕೈ ಕಟ್ಟಿಕೊಂಡು ಕ್ರಿಕೆಟ್ ನೋಡ್ತೀರಿ. ಎಲ್ಲಾ ಸರಿಹೋಗುತ್ತೆ.

●

ವಿವೇಕ

■ ಕಾಶ್ಮೀರ ಬಿಕ್ಕಟ್ಟನ್ನು ಮುಂದಿಟ್ಟುಕೊಂಡು ವಿವಿಧ ಕ್ಷೇತ್ರಗಳಲ್ಲಿ ಭಾರತದೊಂದಿಗೆ ಬೆಳೆಯುತ್ತಿರುವ ಮೈತ್ರಿಗೆ ಅಡ್ಡಗಾಲು ಹಾಕುವುದಿಲ್ಲ. ಈ ಭಾಗ ಹಾಗೂ ಇಲ್ಲಿನ ಜನರ ಲಾಭಕ್ಕಾಗಿ ಪ್ರಾದೇಶಿಕ ಸ್ಥಿರತೆ, ಶಾಂತಿ ಹಾಗೂ ಭಾರತದೊಂದಿಗೆ ಅರ್ಥಪೂರ್ಣ ಸಂಬಂಧ ಹೊಂದಲು ಪಾಕಿಸ್ತಾನ ಬಯಸಿದೆ.

ಶಾಮೆ ಹಮೀದ್ ಖುರೇಶಿ ಪಾಕ್ ವಿದೇಶಾಂಗ ಸಚಿವ

► ಎರಡೂ ದೇಶದ ಜನ ಅದನ್ನೇ ಬಯಸಿದ್ದಾರೆ.

●

ಕುರುಡು ವಿಶ್ವಾಸ

■ ಜಾಗತಿಕ ಹವಾಮಾನ ವೈಪರಿತ್ಯ ತಡೆ ಒಪ್ಪಂದಕ್ಕೆ ಅಮೇರಿಕಾ 2009ರಲ್ಲಿ ಸಹಿ ಹಾಕಲಿದೆ. ನವೆಂಬರ್‌ನಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆ ನಂತರ ರಾಜಕೀಯ ಸಮೀಕರಣ ಬದಲಾಗಲಿದೆ. ಮುಂದಿನ ಒಪ್ಪಂದಕ್ಕೆ ಅಮೇರಿಕ ಖಂಡಿತವಾಗಿಯೂ ಸಹಿ ಹಾಕಲಿದೆ.

ಅಲ್‌ಗೋರ್ ಅಮೇರಿಕಾದ ಮಾಜಿ ಉಪಾಧ್ಯಕ್ಷ.

► ನಿಮ್ಮ ಅಂಧ ವಿಶ್ವಾಸಕ್ಕೆ ವಂದನೆ

●

ಎ. ಟೀಮ್ ಬಿ ಟೀಮ್ ಸಾಕು

■ ಸಿಪಿಐ(ಎಂ) ಪ್ರಯತ್ನಿಸುತ್ತಿರುವ 'ಮೂರನೇ ರಂಗ' ಒಂದು ಅಸಂಗತ ರಂಗ. ಸಿಪಿಐ(ಎಂ) ಯಾವುದೇ ಜವಾಬ್ದಾರಿಯನ್ನು ಹೊರದೆ ಯುಪಿಎ ಜೊತೆಗೆ ಕೈ ಜೋಡಿಸಿ ನಾಲ್ಕು ವರ್ಷಗಳಿಂದ ಅಧಿಕಾರ ಅನುಭವಿಸುತ್ತಿದೆ.

ಅರುಣ್ ಜೇಟ್ಲಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ

► ಉದಾರೀಕರಣ, ಜಾಗತೀಕರಣ ನೀತಿಗಳ ಎ ಟೀಮ್ ಬಿ ಟೀಮ್‌ಗಳಷ್ಟೇ ಸಾಕು ಭಾರತಕ್ಕೆ ಅಂತಿದೀರಲ್ವಾ?

●

ತೈಲಕ್ಕಾಗಿ ಆಹಾರ!

■ ವಿಶ್ವಾದ್ಯಂತ ಏರಿರುವ ಆಹಾರ ಸಾಮಗ್ರಿಗಳ ಬೆಲೆ ಸದ್ಯಕ್ಕಂತೂ ಇಳಿಯುವ ಸಾಧ್ಯತೆ ಇಲ್ಲ. ಏಕೆಂದರೆ ಜಾಗತಿಕ ಆಹಾರ ಸಾಮಗ್ರಿಗಳ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ ಅತ್ಯಂತ ಗಂಭೀರವಿದೆ. ಆಹಾರ ಕೊರತೆಯಿಂದಾಗಿ ವಿಶ್ವದ ವಿವಿದೆಡೆಗಳಲ್ಲಿ ದೊಂಬಿ, ಲೂಟಿಗಳು ನಡೆಯಬಹುದು. ಮುಂದುವರಿದ ರಾಷ್ಟ್ರಗಳು ಜೈವಿಕ ತೈಲಕ್ಕಾಗಿ ದವಸಧಾನ್ಯಗಳನ್ನು ಬಳಸುತ್ತಿವೆ. ಇದರಿಂದಾಗಿ ವಿಶ್ವಾದ್ಯಂತ ಆಹಾರ ಸಾಮಗ್ರಿಗಳ ಬೆಲೆ ಯದ್ವಾತದ್ವಾ ಏರುತ್ತಿದೆ.

► ಮನಮೋಹನರೇ ಈ ಹೇಳಿಕೆ ತೋರಿಸಿ ಬೆಲೆ ಏರಿಕೆ ಕಡಿಮೆ ಮಾಡೋ ಹೊಣೆಯಿಂದ ಜಾರಿಕೊಳ್ಳಬಹುದು ನೋಡಿ.

ತತ್ವ(?) ಬದ್ಧತೆ!?

■ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವವರಿಗೆ ಹಾಗೂ ಯುವಕರಿಗೆ ಆದ್ಯತೆ ನೀಡಿ ಟಿಕೆಟ್ ನೀಡಲಾಗುವುದು.

ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಮುಖಂಡರು

► ಟಿಕೆಟ್ ನೀಡುವಾಗ ಸ್ಥಳೀಯರನ್ನು ಪರಿಗಣಿಸಲಾಗುವುದು ಎಂದು ಮುಖಂಡರು ಹಲವು ಬಾರಿ ಭರಸೆ ನೀಡಿದ್ದರು. ಈಗ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿ ರಿಯಲ್ ಎಸ್ಟೇಟ್ ಉದ್ಯಮಿಗಳು ಹಾಗೂ ಹೊರಗಿನವರಿಗೆ ಟಿಕೆಟ್ ನೀಡಲಾಗಿದೆ.

ಬಿಜೆಪಿ ಪಕ್ಷದ ಕಾರ್ಯಕರ್ತರು.

ಸಂಪಾದಕೀಯ

ದಲಿತ, ಅಲ್ಪಸಂಖ್ಯಾತರ ಮೇಲೆ ಹೆಚ್ಚಿದ ದೌರ್ಜನ್ಯಗಳು

ಚುನಾಯಿತ ಸರ್ಕಾರವೊಂದನ್ನು ಆಯ್ಕೆ ಮಾಡುವ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಕಾವು ಹೆಚ್ಚುತ್ತಿರುವಾಗಲೇ ದಲಿತರು, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು, ಕೋಮು ಭಾವನೆ ಕೆರಳಿಸುವ ಪ್ರಯತ್ನಗಳು ಹೆಚ್ಚುತ್ತಿರುವುದು ಆತಂಕದ ಸಂಗತಿಯಾಗಿದೆ..

ಈ ವಾರವೊಂದರಲ್ಲೇ ಮಂಡ್ಯದ ಶ್ರೀರಂಗಪಟ್ಟಣದಲ್ಲಿ ಯುಗಾದಿ ಹಬ್ಬದಂದು ಪೂಜೆ ಸಲ್ಲಿಸಲು ದೇವಸ್ಥಾನ ಪ್ರವೇಶಿಸಲು ಪ್ರಯತ್ನಿಸಿದ ದಲಿತರ ಮೇಲೆ ತೀವ್ರವಾದ ಧಾಳಿ ನಡೆದಿದೆ. ಈ ದೇವಸ್ಥಾನವನ್ನು ದಲಿತರು ಸಾಮೂಹಿಕವಾಗಿ ಪ್ರವೇಶಿಸಲು ನ್ಯಾಯಾಲಯದ ಆದೇಶವಿದ್ದರೂ, ಅವರು ತಮ್ಮ ಮೂಲಭೂತ ಹಕ್ಕನ್ನು ಚಲಾಯಿಸಲು ಮುಂದಾದಾಗ ಇಂತಹ ದೌರ್ಜನ್ಯ ನಡೆದಿದೆ. ಇಲ್ಲಿ ಜಿಲ್ಲಾಧಿಕಾರಿಗಳ ಮಧ್ಯಪ್ರವೇಶವೂ ಪರಿಣಾಮ ಬೀರಲಿಲ್ಲ. ಹಾಗೆಯೇ ಉಚ್ಚ ನ್ಯಾಯಾಲಯ ಹಾಗೂ ವಿಧಾನಸೌಧದಿಂದ ಕೂಗಳತೆಯ ದೂರದಲ್ಲಿರುವ ಕನಕಪುರದ ಅರಳಾಳುವಿನಲ್ಲಿ ಗ್ರಾಮದ ಉತ್ಸವದ ಮೆರವಣಿಗೆಯಲ್ಲಿ ಕುಣಿಯುತ್ತಿದ್ದ ದಲಿತರ ಮೇಲೆ ಗುಂಡು ಹಾರಿಸಿ ಒಬ್ಬ ಯುವಕನನ್ನು ಕೊಂದು ಹಾಕಲಾಗಿದೆ. ಜೊತೆಗಿದ್ದ ಕೆಲವರಿಗೂ ಗುಂಡು ಹೊಡೆಯಲಾಗಿದೆ.

ಅಲ್ಲದೆ ಚಿತ್ರದುರ್ಗದ ಚೋಳಗುಡ್ಡದ ಪ್ರದೇಶದಲ್ಲಿ ಮುರಿದುಬಿದ್ದ ಧ್ವಜಸ್ತಂಭವನ್ನು ಪುನರ್ ಸ್ಥಾಪಿಸಲು ಹೋದ ಅಲ್ಪಸಂಖ್ಯಾತರ ಮೇಲೆ ಧರ್ಮ ರಕ್ಷಿಸುವ 'ಗುತ್ತಿಗೆದಾರರು' ಹಲ್ಲೆ ನಡೆಸಿ, ದಾಂಧಲೆ ಎಬ್ಬಿಸಿ, ಪೊಲೀಸರು ಗುಂಡು ಹಾರಿಸಬೇಕಾಗಿ ಬಂದಿದೆ. ವಿವಾದವಿನ್ನೂ ಲಂಬಿಸುತ್ತಿದ್ದು ಅದಕ್ಕೆ ತಕ್ಷಣ ಪರಿಹಾರದ ಕ್ರಮವಹಿಸಲು ಆಡಳಿತವೂ ಸಿದ್ಧವಿಲ್ಲದಂತೆ ಕಾಣುತ್ತಿದೆ. ಜೇವರ್ಗಿಯಲ್ಲಿಯೂ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಕಳವು ನಡೆದಿದೆಯೆಂದು ಅಲ್ಲಿಯೂ ಇಂತಹುದೇ ದಾಂಧಲೆ ಸಾರ್ವಜನಿಕರ ಮೇಲೆ ನಡೆದಿದೆ. ಈ ಕಾವಿನಲ್ಲಿ ಓಟನ್ನು ಕಸಿಯುವ ಇರಾದೆಯೂ ಇಲ್ಲದಿಲ್ಲ...

ಈ ಹೊರಗೆ ನಾಲಿಗೆ ಚಾಚಿರುವ ದಾವಾನಲದ ನಡುವೆಯೇ ಯಥಾಪ್ರಕಾರ ರೈತರ ಆತ್ಮಹತ್ಯೆಗಳು ಪ್ರತಿದಿನದ ಘಟನೆಗಳಾಗುತ್ತಿವೆ. ಇಲ್ಲಿ 'ಕೊಲೆಗಾರ' ಅದೃಶ್ಯ ಅಡಗುದಾಣಗಳಲ್ಲಿರುವುದರಿಂದ ಕಾನೂನಿನ ಕೈಗೆ ಸಿಗುವುದಿಲ್ಲ. ಆದ್ದರಿಂದ ಯಾರ ಮೇಲೂ ಮೊಕದ್ದಮೆ ಹೂಡಲಾಗುವುದಿಲ್ಲ!

ಈ ಘಟನೆಗಳು ಬಿಡಿ ಬಿಡಿಯಂತೆ ಕಂಡರೂ ಒಂದು ಧಾರುಣ ಸತ್ಯವನ್ನು ಸಾರುತ್ತಿವೆ. ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿರುವಲ್ಲಿ... ಮಾತನಾಡಿಕೊಳ್ಳಲು ನೆಪವೊಂದು ಬಿಟ್ಟರೆ ಇದರಲ್ಲಿ ಅಡಗಿರುವುದು ತುಳಿತಕ್ಕೊಳಗಾದ ದಲಿತರ ಮೇಲೆ ಅಸಹನೆ, ಜಾತಿಯ ತಾರತಮ್ಯದ ದ್ವೇಷ, ಧ್ವನಿಯೇ ಇಲ್ಲದ ಶೋಷಿತ ಸಮುದಾಯದೊಳಗೆ ಜಾಗೃತಿ ಮೂಡುತ್ತಿರುವಂತೆ ಶಿಕ್ಷಣ, ಕೆಲವೊಂದು ಉದ್ಯೋಗಗಳು ದೊರೆಯುತ್ತಿರುವಂತೆ ತಾವೂ ನಾಗರೀಕರು, ದೇಶದ ಪ್ರಜೆಗಳು ತಮಗೂ ಹಕ್ಕುಗಳಿವೆಯೆಂಬ ಅರಿವಾಗುತ್ತಾ ಸ್ವಾಭಿಮಾನಿಗಳಾಗಿ ಮನುಷ್ಯರಂತೆ ಬದುಕಬೇಕೆಂಬ ಪ್ರಜಾಸತ್ತಾತ್ಮಕ ಎಚ್ಚರ ದಲಿತರಲ್ಲಿ ಮೂಡುತ್ತಿರುವುದೇ ಮೇಲ್ಜಾತಿ, ಮೇಲ್ವರ್ಗಗಳಿಗೆ, ಅಲ್ಲಿರುವ ಪಟ್ಟಭದ್ರ, ಪಾಳೇಗಾರಿ ಶಕ್ತಿಗಳಿಗೆ ಸಿಡಿಮಿಡಿ ತಂದಿದೆ. ಇಲ್ಲವಾದರೆ ದೇವರ ಕಣ್ಣಲ್ಲಿ ಎಲ್ಲರೂ ಸಮಾನರು ಎಂದು ನಿತ್ಯವೂ ಕ್ಯಾಸೆಟ್ ಹಾಕುವವರು ಅದನ್ನೇ ಪಾಲಿಸಿದ್ದರೆ ಇಂತಹ ಕ್ರೌರ್ಯವನ್ನು ಎಸಗುತ್ತಿದ್ದರೇ? ಅರಳಾಳುವಿನ ಘಟನೆಯಂತೂ ಎಂತಹ ಹೀನ ಮಟ್ಟಕ್ಕೆ ಈ ಜಾತಿ ದ್ವೇಷ ಹೋಗುವುದು ಎಂಬುದನ್ನು ತೋರಿಸುತ್ತದೆ. ಜೇವರ್ಗಿ, ಚೋಳನಗುಡ್ಡದಂತಹ ಎಂತಹುದೇ ಸಂದರ್ಭ ಸಿಕ್ಕರೂ ಕೂಡಲೇ ಅದನ್ನು ಬಳಸಿಕೊಳ್ಳಲು ಅಥವಾ ಅಂತಹ ಸನ್ನಿವೇಶ ಸೃಷ್ಟಿಸಲು ಸಂಘಪರಿವಾರ ಸಿದ್ಧವಾಗಿರುವುದನ್ನು ಮತ್ತೊಮ್ಮೆ ತೆರೆದಿಡುತ್ತದೆ.


ಇಂತಹ ಘಟನೆಗಳು ಒಂದೆರಡೇನಲ್ಲ. ಒಂದೆಡೆ 'ಹಿಂದು ಒಂದು ಬಂಧು' ಎಂದೆಲ್ಲಾ ಘೋಷಿಸುತ್ತಲೇ ಇರುವಾಗ ಕೋಮುದ್ವೇಷ ಹೆಚ್ಚುತ್ತಾ ಸಾಗಿದೆ. ಕೋಮುವಾದದ ಬೆಳವಣಿಗೆ ಹೆಚ್ಚುತ್ತಿದೆ ಮಾತ್ರವಲ್ಲ . ಜಾತಿವಾದದ ನೆಲೆಯಲ್ಲಿ ಕ್ರೋಢೀಕರಣಗೊಳ್ಳಲು ಪ್ರಚೋದಿಸುತ್ತಿದೆ.

ಹಿಂದು ಧರ್ಮದ ಗುತ್ತಿಗೆ ಹಿಡಿದಿರುವಂತೆ ಆಡುವ ಮುತಾಲಿಕ್‌ನಾಗಲಿ, ರಾಘವೇಶ್ವರ ಸ್ವಾಮಿಯವರಾಗಲಿ ಗೋಸಂರಕ್ಷಣೆಯ ಹೆಸರಿನಲ್ಲಿ ಗೋವು ಕೊಂದವರನ್ನು ಕೊಲ್ಲುವುದಾಗಿ ಫರ್ಮಾನು ಹೊರಡಿಸುತ್ತಿರುವುದು ಕೇವಲ ಅಲ್ಪಸಂಖ್ಯಾತರನ್ನು ಉದ್ದೇಶಿಸಿರದೇ ಗೋಮಾಂಸ ತಿನ್ನುವ ದಲಿತರ ವಿರುದ್ಧವೂ ಆಗಿದೆ. ಹೀಗಾಗಿ ಬೆಸೆದು ಕೊಂಡಿರುವ ಕೋಮುವಾದ ಜಾತಿವಾದಗಳನ್ನು ಎದುರಿಸುವುದು ಜೊತೆಜೊತೆಗೆ ಆಗಬೇಕಿದೆ.

ಕರ್ನಾಟಕ ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯಗಳ ಉತ್ತರ ಭಾರತದ ಯಾವುದೇ ರಾಜ್ಯಗಳಿಗಿಂತ ಕಡಿಮೆಯಿಲ್ಲ. ಅವು ಹೆಚ್ಚುತ್ತಿವೆ. ಇಂತಹವುಗಳಲ್ಲಿ ತೊಡಗಿದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂಬುದು ಕೇವಲ ಒಂದು ಪುನರುಚ್ಚಾರವಾದೀತು. ಈಗೀಗಲಂತೂ ದೌರ್ಜನ್ಯಗಳ ತಡೆಗೆ ಸರ್ಕಾರ ಅಷ್ಟು ಕ್ರಮ ವಹಿಸುತ್ತಿಲ್ಲ. ತೋರಿಕೆಯ ಕ್ರಮಗಳನ್ನು ಬಿಟ್ಟರೆ ವಾಸ್ತವದಲ್ಲಿ ಜಾತಿಯ ಕೋಮುವಾದಿಗಳ ಧಾಳಿಗೆ ಈಡಾದವರಿಗೆ ಸಾಂತ್ವನ, ಪರಿಹಾರವಾಗಲೀ ರಕ್ಷಣೆಯಾಗಲಿ ಸಿಗುವುದಿಲ್ಲ. ಹೀಗಾದಲ್ಲಿ ಹೆಪ್ಪುಗಟ್ಟುವ ಹತಾಶೆಯು ಬೇರೆ ಹಾದಿಗೆ ತಿರುಗುವ ಅಪಾಯವೂ ಇದೆ.

ದಲಿತರ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಕಟಿಬದ್ಧರಾಗುತ್ತಲೇ ಭೂಮಿ ಹಂಚಿಕೆ, ಉದ್ಯೋಗದ ಅವಕಾಶಗಳ ಹೆಚ್ಚಳ, ಸಾಮಾಜಿಕ ನ್ಯಾಯ ಸಿಗುವಂತಾಗಬೇಕು. ಆದ್ದರಿಂದ ಚುನಾವಣಾ ಹಿನ್ನೆಲೆಯಲ್ಲಿ ಇಂತಹ ಘಟನೆಗಳು ಹೆಚ್ಚು ಸ್ಫೋಟಿಸದಂತೆ ಕಟ್ಟೆಚ್ಚರ ಅಗತ್ಯ. ಚುನಾವಣೆಯ ಭರಾಟೆಯಲ್ಲಿ ನ್ಯಾಯದ ಕೂಗು ಮರೆಯಾಗದಿರಲಿ.

ಓಟಿನ ಕಾಳಜಿಯ ಪ್ರಣಾಳಿಕೆ ಪಾಠ ಕಲಿಯದ ಕಾಂಗ್ರೆಸ್



ಎಸ್.ವೈ.ಗುರುಶಾಂತ್

ತನ್ನ ಜನವಿರೋಧಿ ಆರ್ಥಿಕ ನೀತಿಗಳ ಜಾಡು ಬದಲಿಸಿಕೊಳ್ಳಲು ಸಿದ್ಧವಿಲ್ಲದ ಕಾಂಗ್ರೆಸ್ ಪಕ್ಷ ಜನರ ಓಟು ಗಳಿಸುವ ಕಸರತ್ತಿನ ದ್ವಂದ್ವತೆಗಳನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಕಾಣಬಹುದು. ಈಗಲಾದರೂ ಅನುಭವದಿಂದ ಕಾಂಗ್ರೆಸ್ ಪಾಠ ಕಲಿತೀತೆ?

ವಿಧಾನಸಭೆಗೆ ನಡೆಯಲಿರುವ ಮಧ್ಯಂತರ ಚುನಾವಣೆಯ ಮಧ್ಯಂತರ ಪ್ರಣಾಳಿಕೆಯನ್ನು ಕಾಂಗ್ರೆಸ್ ಪಕ್ಷ ಪ್ರಕಟಿಸಿದೆ. ಪ್ರಕಟಿತ ಅಂಶಗಳು ಮತ್ತು ಆದಕ್ಕಿರುವ ಬದ್ಧತೆಯನ್ನು ಅವಲೋಕಿಸುವುದು ಅಗತ್ಯವಾಗಿದೆ. ಇನ್ನೂ ಪ್ರಮುಖ ರಾಜಕೀಯ ಪಕ್ಷಗಳು ಪ್ರಣಾಳಿಕೆಯೆಂಬ ಕಾಟಾಚಾರದ ಕರಪತ್ರದ ಸಿದ್ಧತೆಯಲ್ಲಿರುವಾಗಲೇ ದಿಡೀರನೆ ಪ್ರಣಾಳಿಕೆಯ ಅಂಶಗಳನ್ನು ಕಾಂಗ್ರೆಸ್ ಯಾಕೆ ಪ್ರಕಟಿಸಿತು ಎಂಬ ಪ್ರಶ್ನೆ ಸಹಜವಾಗಿದೆ. ಕಾರ್ಯ ಸಾಧನೆಯಲ್ಲಿ ಸ್ಪರ್ಧೆ ಇಲ್ಲದಿದ್ದರೂ ಬಾಯಿ ಮಾತಿನ ಭರವಸೆಯಲ್ಲಿಯಾದರೂ ಇಂತಹ ಮುನ್ನುಗ್ಗುವಿಕೆಗೆ ಖಂಡಿತ ಒಂದು ರಾಜಕೀಯ ಅರ್ಥವಿದೆ.

ಗತ್ಯಂತರವಿಲ್ಲ

ಕಾಂಗ್ರೆಸ್ ಪ್ರಕಟಿಸಿರುವ ಏಳು ಅಂಶಗಳು ಜನರ ನಡುವಿನ ಮುಖ್ಯ ಪ್ರಶ್ನೆಗಳಾಗಿವೆ ಎಂಬುದರಲ್ಲಿ ಅನುಮಾನವಿಲ್ಲ. ಇದಕ್ಕೆ ತದ್ವಿರುದ್ಧ ನೀತಿಗಳನ್ನು ಅನುಸರಿಸಿದರೂ ಅನಿವಾರ್ಯವಾಗಿ ಜನತೆಯ ಧ್ವನಿಗೆ ಸ್ಪಂದಿಸದೇ ಗತ್ಯಂತರವೂ ಇಲ್ಲ ಎಂಬ ಸತ್ಯ ಕಾಂಗ್ರೆಸ್‌ಗೆ ಅರ್ಥವಾದಂತಿದೆ. ಅಷ್ಟರಮಟ್ಟಿಗೆ ಈ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಅಂತಹ ಒತ್ತಡವನ್ನು ಸೃಷ್ಟಿಸುತ್ತದೆ. ಆದರೆ ಕಾಂಗ್ರೆಸ್ ಪಕ್ಷವು ಸಮಸ್ಯೆಗಳ ಮೂಲಕ್ಕೆ ಹೋಗಿ ಪರಿಹಾರ ನೀಡದೇ ಕೇವಲ ಸಮಸ್ಯೆಗಳ ಅಂಚನ್ನಷ್ಟೇ ಮುಟ್ಟಿ ಇಡೀ ಸಮಸ್ಯೆಯನ್ನೇ ಪರಿಹರಿಸುವಂತಹ ಭ್ರಮೆಯನ್ನು ಸೃಷ್ಟಿಸಲು ಯತ್ನಿಸಿದೆ. ಯಾವುದೇ ಸಮಸ್ಯೆಗೆ ಮೂಲ ಪರಿಹಾರ ನೀಡಲಾಗದೇ ಅದಕ್ಕೆ ಬದ್ಧತೆಯೂ ಇಲ್ಲದಿರುವಾಗ ಮತ ಸೆಳೆಯುವ ಒಂದು ಚುನಾವಣಾ ಸ್ಟಂಟ್ ಆಗಿಬಿಡುತ್ತದೆ.

ಕಾಳಜಿ ಎಷ್ಟು?

ಇಂದು ಹಿಂದೆ ಕಂಡಿರದಷ್ಟು ಅಂದರೆ ಶೇ.7.41ರಷ್ಟು ಹಣದುಬ್ಬರವಿದೆ. ಅಕ್ಕಿ, ಬೇಳೆ, ಎಣ್ಣೆಯಂತಹ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ದುಡಿವ ಜನರ ಆದಾಯ ಕುಸಿಯುತ್ತಿದೆ. ಹೀಗಾಗಿ ದೇಶದಲ್ಲಿ ಬಡಜನ ಹಾಗೂ ಗ್ರಾಮಾಂತರದ ಜನಸಾಮಾನ್ಯರ ಅಗತ್ಯ ಆಹಾರವಸ್ತುಗಳ ಬಳಕೆಯ ಪ್ರಮಾಣವೂ ಕಡಿಮೆಯಾಗಿದೆ. ಇಂತಹ ಸ್ಥಿತಿಯಲ್ಲಿ 25 ಕಿ.ಲೋವರೆಗೆ 2 ರೂ.ಗಳಿಗೆ ಒಂದು ಕಿಲೋದಂತೆ ಅಕ್ಕಿ ಎಂಬುದು ಜನರ ನೆರವಿಗೆ ಬರಲಿದೆ. ಆದರೆ ಉಳಿದ ವಸ್ತುಗಳ ಗತಿಯೇನು ಎಂಬುದಕ್ಕೆ ಪ್ರಣಾಳಿಕೆಯಲ್ಲಿ ಯಾವುದೇ ಕಾಳಜಿಯಿಲ್ಲ. ಅಂದರೆ ಜನರ ಮೂಲಭೂತ ಆಹಾರ ಅಗತ್ಯಗಳ ಪೂರೈಕೆಗೆ ಗಮನ ನೀಡಬೇಕು. ಇಂದು ಸುಮಾರು 14 ವಸ್ತುಗಳನ್ನು ಸಬ್ಸಿಡಿ ದರಗಳಲ್ಲಿ ಪಡಿತರ ಹಂಚಿಕೆ ಮೂಲಕ ಒದಗಿಸಬೇಕು. ಆದರೆ ಹಲವು ಮಿತಿಗಳನ್ನು ಹೊಂದಿದ್ದ ಪಡಿತರ ವ್ಯವಸ್ಥೆಯ ನಾಶಕ್ಕೆ ಉದಾರೀಕರಣ ನಾಂದಿ ಹಾಡಿ ಅದನ್ನೇ ಬಲವಾಗಿ ಸಮರ್ಥಿಸುತ್ತಾ, ಪಡಿತರ ವ್ಯವಸ್ಥೆ ಬಲಪಡಿಸುವ ಬೇಡಿಕೆಯನ್ನು ತಿರಸ್ಕರಿಸುತ್ತಾ ಹೊರಟಿರುವಾಗ ಕಾಂಗ್ರೆಸ್‌ನ ಜನಕಾಳಜಿ ಎಷ್ಟು ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಮರೆತ ಭರವಸೆಗಳು

ಈ ಹಿಂದೆ ಮೊಟ್ಟಮೊದಲ ಬಾರಿಗೆ ಆಂಧ್ರದಲ್ಲಿ ಎನ್.ಟಿ.ರಾಮರಾವ್ ನೇತೃತ್ವದ ತೆಲುಗುದೇಶಂ ಪಕ್ಷ 2 ರೂ.ಗಳಿಗೆ ಒಂದು ಕಿಲೋ ಅಕ್ಕಿ ನೀಡುವುದನ್ನು ಮಾಧ್ಯಮ ಪಂಡಿತರೂ, ಕಾಂಗ್ರೆಸ್ ಪಕ್ಷವೂ ಅಗ್ಗದ ಜನಪ್ರಿಯತೆಯೆಂದು ಬಡವರ ಹಸಿವೆಯನ್ನು ಮೂದಲಿಸಿದ್ದರು. ತೆಲುವುದೇಶಂ ಸರ್ಕಾರದ ಬಳಿಕ ಬಂದ ಕಾಂಗ್ರೆಸ್ ಪಕ್ಷವು ದರಗಳನ್ನು ಹೆಚ್ಚಿಸಿ (3.50ಕ್ಕೆ) ಆ ಯೋಜನೆಯನ್ನೇ ಗೇಲಿಮಾಡಿತು. ಉದಾರೀಕರಣ ಅಪ್ಪಿಕೊಂಡಿದ್ದ ತೆಲುಗುದೇಶಂನ ಚಂದ್ರಬಾಬುನಾಯ್ಡು ಸರ್ಕಾರ ಸಹ ಇನ್ನಷ್ಟು ದರ ಹೆಚ್ಚಿಸಿ ಅರ್ಥಹೀನಗೊಳಿಸಿತು. ಬಡತನದ ರೇಖೆಯ ನಿಗದಿ ಅದರ ಮಾನದಂಡವನ್ನು ಒಳಗೊಂಡು ಹಂತಹಂತವಾಗಿ ಪಡಿತರ ವ್ಯವಸ್ಥೆಯನ್ನು ಹಾಳು ಮಾಡಲಾಗಿದೆ. ಸಬ್ಸಿಡಿ ಕಡಿತ, ಮುಂಗಡ ವ್ಯಾಪಾರ, ಲೇವಿ ಧಾನ್ಯ ಸಂಗ್ರಹ ನಿಲುಗಡೆಯಂತಹ ಧಾಳಿಗಳನ್ನು ರದ್ದುಪಡಿಸದೇ ಪಡಿತರ ಸಿಗುವುದಾದರೂ ಹೇಗೆ? ಆದ್ದರಿಂದ ಕಾಂಗ್ರೆಸ್‌ನ ಪ್ರಕಟಣೆ ನಿಜ ಪ್ರಶ್ನೆಗೆ ಇಳಿಯದೇ ಬರೀ ಒಣ ಕಾಳಜಿಯಾಗುವುದಷ್ಟೇ. ಅದರಂತೆಯೇ ದುಡಿಯುವ ಅವಕಾಶಗಳು, ಆದಾಯ ಹೆಚ್ಚಳವಿಲ್ಲದೇ ಕೇವಲ ಬಣ್ಣದ ಟಿ.ವಿ. ಕೊಡುವ, ಆರೋಗ್ಯಕ್ಷೇತ್ರವನ್ನು ತೀರಾ ದುರ್ಬಲಗೊಳಿಸಿ ಖಾಸಗೀಕರಣಕ್ಕೆ ನೂಕುತ್ತಾ ಯಶಸ್ವಿನಿ-ಯೋಜನೆ ವಿಸ್ತರಣೆ, ನೇಕಾರಿಕೆಯಂತಹ ಸಣ್ಣ ಉದ್ದಿಮೆಗಳ ನಾಶವಾಗುವಂತಹ ನೀತಿ ಅನುಸರಿಸುತ್ತಾ ಸಾವಿನಂಚಿಕೆ ದೂಡಿ ಶೇ.3ರ ಬಡ್ಡಿಯಲ್ಲಿ ಸಾಲ ನೀಡುವೆಂಬಂತಹ ಭರವಸೆಗಳು ಅರ್ಥಹೀನವಾಗುತ್ತವೆ. 15 ಲಕ್ಷ ಜನರಿಗೆ ಮನೆ, ನಿರುದ್ಯೋಗಿ ಯುವಜನರಿಗೆ 1500 ರೂ. ಸ್ಟೈಫಂಡ್ ಮೂಗಿಗೆ ತುಪ್ಪ ಸವರಿದಂತೆ. ಯಾಕೆಂದರೆ ಹಿಂದಿನ ಚುನಾವಣೆಯಲ್ಲಿ ನೀಡಿದ್ದ ನಿರುದ್ಯೋಗದ ಭತ್ಯೆ ಭರವಸೆಯನ್ನು ನಂತರ ಅಧಿಕಾರ ನಡೆಸಿದ ಈ ನಾಯಕರಾರೂ ನೆನಪಿಸಿಕೊಳ್ಳಲೇ ಇಲ್ಲ. ನೆನಪಿಸಿದರೂ ಕಿವಿಗೆ ಹಾಕಿಕೊಳ್ಳಲಿಲ್ಲ.

ದ್ವಂದ್ವತೆ

ಇದು ಕಾಂಗ್ರೆಸ್‌ನ ದ್ವಂದ್ವತೆ. 'ನೆಂಟರ ಮೇಲೆ ಪ್ರೀತಿ, ಅಕ್ಕಿ ಮೇಲೆ ಇಷ್ಟ" ನಿಜಕ್ಕೂ ಜನರ ಬಗ್ಗೆ ಕಾಳಜಿ ಇದ್ದರೆ ಈ ನೀತಿಗಳನ್ನು ಬದಲಾಯಿಸಿಕೊಳ್ಳಲು ಕಾಂಗ್ರೆಸ್ ಮುಂದಾಗಬೇಕು.

ಇದರೊಟ್ಟಿಗೆ ಈ ಜನಪ್ರಿಯ ಪ್ರಣಾಳಿಕೆಯಲ್ಲಿ ರೈತರ ಆತ್ಮಹತ್ಯೆಗೆ ಕಾರಣವಾಗಿರುವ ಭೀಕರ ಕೃಷಿ ಬಿಕ್ಕಟ್ಟು, ಕೈಗಾರಿಕಾ ನಾಶ, ದುಡಿಯುವವರ ಸಮಸ್ಯೆ ಸಂಕಟಗಳ ಬಗ್ಗೆ ಮಾತುಗಳೇನೂ ಹೊರಬಂದಿಲ್ಲ. ಅಂತಹ ಮಾತುಗಳು ಬರುವ ಸಂಭವವೂ ಕಡಿಮೆಯೇ. ಯಾಕೆಂದರೆ ಮೂಲ ನೀತಿಗಳನ್ನು ಬದಲಾಯಿಸಿಕೊಳ್ಳಲು ಬಂಡವಾಳಶಾಹಿ ಪಕ್ಷಗಳು ಪ್ರಯತ್ನಿಸುವುದೇ ಇಲ್ಲ. ಜನರ ಮತಗಳಿಗೆ ಗಾಳಹಾಕಿ ಗೆದ್ದುಬಿಟ್ಟರೆ ಉಳಿದಂತೆ ಅವರ ಅಧಿಕಾರದ ಸೇವೆ ಉಳ್ಳವರಿಗೇ ಮೀಸಲು.

ಹಿಂದೆ ಆಂದ್ರ ಮತ್ತು ತಮಿಳುನಾಡುಗಳಲ್ಲಿ ಗೆಲುವಿಗೆ ಸಹಾಯಕವಾದ ತೆಲುಗು ದೇಶಂ, ಡಿಎಂಕೆ ಪಕ್ಷಗಳು ನೀಡಿದ್ದ ಭರವಸೆಯನ್ನೇ ಕಾಂಗ್ರೆಸ್ ಇಲ್ಲಿ ಪುನರುಚ್ಚರಿಸಿದೆ. ಆದರೆ ತಮಿಳುನಾಡಿನಲ್ಲಿ ಗ್ರಾಮಾಂತರ ಬಡಜನರಿಗೆ ಎರಡು ಎಕರೆ ಭೂಮಿ ನೀಡುವುದಾಗಿ ಭರವಸೆ ನೀಡಲಾಗಿತ್ತು. ಇದು ಬಹಳಷ್ಟು ಪ್ರತಿಸ್ಪಂದನವನ್ನು ಪಡೆದಿತ್ತು. ಆದರೆ ಇಲ್ಲಿ ಈ ಅಂಶವನ್ನು ಕಾಂಗ್ರೆಸ್ ಕೈಬಿಟ್ಟಿದೆ. ಇದರೊಂದಿಗೆ ನಗರವಾಸಿ ಮನೆರಹಿತರಿಗೆ ಒಂದು ವಸತಿ ನಿವೇಶನದ ನೀಡಿಕೆಯ ಪ್ರಶ್ನೆಯೂ ಅತ್ಯಂತ ಜ್ವಲಂತವಾಗಿದೆ. ಇಂತಹ ಮಹತ್ವದ ಅಂಶಗಳನ್ನು ಪರಿಗಣಿಸಿಲ್ಲ. ಮೇಲಾಗಿ ಅಸಂಘಟಿತ ಕಾರ್ಮಿಕರ ವೇತನ ಹೆಚ್ಚಳ, ಕೆಲಸದ ಭದ್ರತೆ, ಗ್ರಾಮೀಣ

ಪುಟ 10ಕ್ಕೆ

ಮಂಡ್ಯ : ಜಾತಿವಾದಿಗಳಿಂದ ದಲಿತರ ಮೇಲೆ ರಾಕ್ಷಸಿ ಧಾಳಿ

ಸ್ವಾತಂತ್ರ್ಯ ಬಂದು 60 ವರ್ಷಗಳು ಕಳೆದರೂ ಜಾತಿ ಆಧಾರದ ತಾರತಮ್ಯಗಳು ಮುಂದುವರೆಯುತ್ತಿವೆ. ದಲಿತರೇನಾದರೂ ಸಂವಿಧಾನಬದ್ಧ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಚಲಾಯಿಸ ಹೊರಟರೆ ಪಾಳೇಗಾರಿ ಶಕ್ತಿಗಳ ರಾಕ್ಷಸೀ ದೌರ್ಜನ್ಯಕ್ಕೆ, ಮಾರಣಾಂತಿಕ ಹೊಡೆತ, ಬಡಿತ, ಮನೆ ನಾಶ, ಲೂಟಿಗೆ ಒಳಗಾಗಬೇಕಿರುತ್ತದೆ. ಇಂತಹುದೇ ಇನ್ನೊಂದು ಪ್ರಕರಣ ಮಂಡ್ಯ ಜಿಲ್ಲೆಯಲ್ಲಿ ವರದಿಯಾಗಿದೆ.

ಜಾತಿ ಆಧಾರಿತ ತಾರತಮ್ಯವನ್ನು ದಲಿತರು ಪ್ರಶ್ನೆ ಮಾಡಿದ್ದರಿಂದಲೇ ಜಿಲ್ಲೆಯಲ್ಲಿ ಮೇಲಿಂದ ಮೇಲೆ ದೌರ್ಜನ್ಯಗಳು ಘಟಿಸುತ್ತಲೇ ಬಂದಿವೆ. ಕೆರೆ ನೀರು ಬಳಸಿದ್ದಕ್ಕೆ ಪಾಂಡವಪುರದ ಗುಮ್ಮನಹಳ್ಳಿಯಲ್ಲಿ ನಡೆದ ಘಟನೆ, ಹುಡುಗಿ ಚುಡಾಯಿಸಿದ ಎಂದು ಆರೋಪಿಸಿ ಮರಕ್ಕೆ ಕಟ್ಟಿ ದಲಿತ ಯುವಕನನ್ನು ಥಳಿಸಿದ ಮಂಡ್ಯ ತಾಲ್ಲೂಕಿನ ಸಬ್ಬನಹಳ್ಳಿ ಘಟನೆ, 'ಗ್ರ್ಯಾಂಡಾಗಿ' ಅಂಬೇಡ್ಕರ್ ಜಯಂತಿ ಆಚರಣೆ ಮಾಡುತ್ತಾರೆ ಎನ್ನುವ ನೆಪ ಒಡ್ಡಿ ನಡೆದ ಶ್ರೀರಂಗಪಟ್ಟಣದ ಶೆಟ್ಟ ಹಳ್ಳಿ ಘಟನೆ, ಹಬ್ಬದ ದಿನ ಸವರ್ಣೀಯರಿಗೆ ಸರಿ ಸಮನಾಗಿ ಆರ್ಕೇಸ್ಟ್ರಾ ಆಯೋಜಿಸಿದ ನೆಪ ತೆಗೆದು ನಡೆದ ಕೊಮ್ಮೇರಹಳ್ಳಿ ಘಟನೆ. ಇವುಗಳು ಜನರ ಬಾಯಲ್ಲಿ ಇರುವಾಗಲೇ ಇಂತಹುದೇ ಇನ್ನೊಂದು ಘಟನೆ, ಶ್ರೀರಂಗಪಟ್ಟಣ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಜಕ್ಕನಹಳ್ಳಿಯಲ್ಲಿ ನಡೆದಿದೆ.

ಈ ಎಲ್ಲಾ ಘಟನೆಗಳು ನಡೆದಾಗಲೂ ಯಾವ ರೀತಿ ಜಿಲ್ಲಾಡಳಿತ-ಸರ್ಕಾರ, ರಾಜಕೀಯ ಪಕ್ಷಗಳು ವರ್ತಿಸಿದ್ದವೋ ಅದೇ ಇಲ್ಲೂ ಪುನರಾವರ್ತನೆಯಾಗಿದೆ. ದೌರ್ಜನ್ಯಕ್ಕೆ ಒಳಗಾದವರನ್ನೇ ಘಟನೆಗೆ ಹೊಣೆ ಮಾಡಲಾಗುತ್ತಿದೆ.

ಘಟನೆ ವಿವರ : ಜಕ್ಕನಹಳ್ಳಿ ಗ್ರಾಮದಲ್ಲಿ ದಲಿತ ಕುಟುಂಬಗಳ ಸಂಖ್ಯೆ 30. ಒಕ್ಕಲಿಗ ಜಾತಿ ಕುಟುಂಬಗಳ ಸಂಖ್ಯೆ:270. ಇನ್ನೂ ಮಿಕ್ಕಿದಂತೆ ಇರುವ 30. ಕುಟುಂಬಗಳು ದಲಿತೇತರ ಹಿಂದುಳಿದ ವರ್ಗಗಳ ಕುಟುಂಬಗಳು. ಘಟನೆಗೆ ತತ್‌ಕ್ಷಣದ ಕಾರಣವಾಗಿ ಊರಿನಲ್ಲಿರುವ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ದಲಿತರು ಪೂಜೆ ಮಾಡಿದರು ಎಂಬುದಾಗಿದೆ.

ದಲಿತರಿಗೆ ಪೂಜೆ ಮಾಡಲು ಅವಕಾಶ ನೀಡಬೇಕು ಎಂಬ ವಿಷಯದಲ್ಲಿ ಕಳೆದ 4 ವರ್ಷಗಳಿಂದ ವಿವಾದ ಇದ್ದು, ಯುಗಾದಿ ಹಬ್ಬದ ದಿನ ನಡೆಯುವ ಮೆರವಣಿಗೆಯನ್ನು 4 ವರ್ಷಗಳಿಂದ ರದ್ದುಗೊಳಿಸಲಾಗಿತ್ತು. ಈ ವರ್ಷ ಉತ್ಸವ ಮಾಡಲೇಬೇಕು ಎನ್ನುವ ಹಠದಿಂದ ಉತ್ಸವ ಮಾಡಲು ಊರಿನ ಜಾತ್ಯಾತೀತ ಜನತಾದಳದ ಮುಖಂಡ ಹಾಗೂ ಕ್ವಾರೆ ಮತ್ತು ಲಾರಿ ಮಾಲೀಕ ಎಂ.ಎಂ.ಮಹದೇವ ನೇತೃತ್ವದಲ್ಲಿ ತಾಲ್ಲೂಕು ಆಡಳಿತವನ್ನು ಕೋರಿ ಉತ್ಸವ ಮಾಡಲು ಅನುಮತಿ ಪಡೆದರು. ಈ ಸಂಬಂಧ ತಾಲ್ಲೂಕು ಆಡಳಿತ ಮತ್ತು ಜಿಲ್ಲಾಡಳಿತ ಸಭೆ ನಡೆಸಿವೆ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಂಡ್ಯದಲ್ಲಿ ನಡೆದ ಸಭೆಯಲ್ಲಿ ದಲಿತರ ಎಲ್ಲಾ ಕುಟುಂಬದಿಂದ ತಲಾ ಒಬ್ಬರಂತೆ ಹಾಗೂ ಸವರ್ಣೀಯ ಗುಂಪಿನಿಂದ ಎಂ.ಎಂ.ಮಹದೇವು ಭಾಗವಹಿಸಿದ್ದರು. ಆ ಸಭೆಯಲ್ಲಿ 4 ವರ್ಷಗಳಿಂದ ನೆನಗುದಿಗೆ ಬಿದ್ದಿರುವ ಬೇಡಿಕೆಗಳನ್ನು ದಲಿತರು ಮತ್ತೆ ಜಿಲ್ಲಾಡಳಿತಕ್ಕೆ ನೆನಪು ಮಾಡಿದರು.

ದಲಿತರಿಗೆ ದೇವರಪ್ರಸಾದ ಮುಂತಾದ ವಿತರಣೆಯಲ್ಲಿ ಸಹ ಪಂಕ್ತಿಗೆ ಅವಕಾಶ ಇರಬೇಕು. ದೇವಸ್ಥಾನದಲ್ಲಿ ಪೂಜೆಗೆ ಎಲ್ಲರಂತೆ ಮುಕ್ತ ಪ್ರವೇಶ ಕೊಡಬೇಕು ಹಾಗೂ ಮೆರವಣಿಗೆಯು ಊರಿನ ಎಲ್ಲಾ ಮನೆಗಳ ಹತ್ತಿರ ಹೋಗಿ ಪೂಜೆ ಮಾಡಿಸಿಕೊಳ್ಳುವಂತೆಯೇ ದಲಿತರು ವಾಸ ಮಾಡುವ ಕಾಲೋನಿಗೆ ಬರಬೇಕು ಎಂಬುದು ಈ ಬೇಡಿಕೆಗೆ ಸಂಬಂಧಪಟ್ಟಂತೆ ಚರ್ಚೆಯಲ್ಲಿ ಭಾಗವಹಿಸಿ ಎಂ.ಎಂ.ಮಹದೇವು ನಮಗೆ ಆ ದೇವರೇ ಬೇಡ, ಬೇಕಿದ್ದರೆ ಅವರೇ ಆ ದೇವರನ್ನು ಇಟ್ಟುಕೊಳ್ಳಲಿ, ಈ ರೀತಿಯಲ್ಲಿ ಊರಿನಲ್ಲಿ ನಾವ್ಯಾರೂ ಒಪ್ಪುವುದಿಲ್ಲ ಎಂದು ಹಠ ಹಿಡಿದನು. ಆಗ ಜಿಲ್ಲಾಧಿಕಾರಿ ಮಂಜುನಾಥ್ ಪ್ರಸಾದ್ ಇದು ಮುಜರಾಯಿ ಇಲಾಖೆ ದೇವಸ್ಥಾನ ಎಂದು ತಿಳಿಸಿ ದಲಿತರ ಎರಡು ಬೇಡಿಕೆಗಳಿಗೆ ಅವಕಾಶ ಕಲ್ಪಿಸಲಾಗುವುದು, ಪೂಜೆ ಕಾಲೋನಿಗೆ ಬರಬೇಕು ಎನ್ನುವ ಬೇಡಿಕೆಯನ್ನು ಈ ಉತ್ಸವ ಮುಗಿದ ಮೇಲೆ ಪೂಜಾ ಮಂಡಳಿ ರಚಿಸಿ ಚರ್ಚೆ ನಡೆಸೋಣ ಎಂದು ತೀರ್ಮಾನವನ್ನು ಪ್ರಕಟಿಸಿದರು. ಆಗ ಸುಮ್ಮನಿದ್ದು ಎದ್ದುಬಂದ ಮಹದೇವ್ ಊರಿನಲ್ಲಿ ಹಬ್ಬದ ದಿನ ದೇವರ ವಿಧಿ ವಿಧಾನಗಳನ್ನು ಪೂರೈಸಲು ಕಾವೇರಿ ಬೋರೆ ದೇವರ ಗುಡಿಗೆ ಹೋದಾಗ ಈ ಕಡೆ ದಲಿತರು ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿದ್ದಾರೆ. ದೇವಸ್ಥಾನದ ಒಳಕ್ಕೆ ಹೋಗುವುದನ್ನು ಕಾದು ಕುಳಿತಿದ್ದ ಎಂ.ಎಂ.ಮಹದೇವು ಈತನ ಸಹೋದರ ಮಂಜುನಾಥ್‌ನ ಕುಮ್ಮಕ್ಕಿನಿಂದ ಪ್ರೇರಿತಗೊಂಡ ಗುಂಪು ಮುಂಜಾಗ್ರತೆ ಕ್ರಮಕ್ಕಾಗಿ ರಕ್ಷಣೆಗೆ ಬಂದಿದ್ದ ಪೋಲೀಸರನ್ನು ನಿಂದಿಸುತ್ತಾ ದೇವಸ್ಥಾನದಿಂದ ಹೊರಗಡೆ ಬಂದ ದಲಿತರ ಮೇಲೆ ಏಕಾಏಕಿ ದೈಹಿಕ ಹಲ್ಲೆ ನಡೆಸಿ ದಲಿತರ ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿ 20ಕ್ಕೂ ಹೆಚ್ಚು ಮನೆಗಳನ್ನು ಜಖಂ ಮಾಡಿದ್ದಾರೆ.

ಚಿಕ್ಕಯ್ಯ- ಸಿದ್ದಮ್ಮ, ದಂಪತಿಗಳಿಗೆ ಸೇರಿದ ಗುಡಿಸಲಿನಲ್ಲಿದ್ದ ಎಲ್ಲಾ ವಸ್ತುಗಳನ್ನು ಲೂಟಿ ಮಾಡಲಾಗಿದೆ. ಈ ಸಂಬಂಧ ಗಾಯಾಳುಗಳಾಗಿ ಸಣ್ಣಯ್ಯ, ಪಾಪಣ್ಣ, ವೆಂಕಟೇಶ್, ಚಿಕ್ಕಯ್ಯ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಪೋಲೀಸಿನವರು ಜಾಗೃತರಾಗಿ ಅಶ್ರುವಾಯು ಸಿಡಿಸಿ ಲಾಠಿ ಪ್ರಹಾರ ನಡೆಸಿದ್ದರಿಂದ ಹೆಚ್ಚಿನ ಅನಾಹುತವನ್ನು ತಡೆಯಲು ಸಾಧ್ಯವಾಗಿದೆ. ಇದರಿಂದಾಗಿ ಮನೆಗೆ ಬೆಂಕಿ ಹಚ್ಚುವ ಯತ್ನವನ್ನೂ ವಿಫಲಗೊಳಿಸಲಾಗಿದೆ. ನಂತರ ಚದುರಿದ ಗುಂಪು ದಲಿತರ ಗದ್ದೆಗಳಿಗೆ ಹೋಗಿ ನೀರಾವರಿ ಪಂಪ್‌ಸೆಟ್‌ಗಳನ್ನು ನಾಶಪಡಿಸಿ ಮಾವಿನ ಫಸಲನ್ನು ಹಾಳುಗೆಡವಿದೆ.

ನಿಂತಿದ್ದ ಉತ್ಸವವನ್ನು ಮರು ಚಾಲನೆಗೊಳಿಸಿದ್ದರಲ್ಲಿ ದಲಿತ ಕೃಷಿ ಅಧಿಕಾರಿಯಾಗಿರುವ ಚಿಕ್ಕದೇವಯ್ಯ ಸವರ್ಣೀಯರ ಪರ ಪಾತ್ರ ವಹಿಸಿದ್ದಾನೆಂದು ಊರಿನ ದಲಿತರು ಆರೋಪಿಸುತ್ತಾರೆ.

ಘಟನೆ ನಡೆದ ಸುದ್ದಿ ತಿಳಿದ ತಕ್ಷಣವೇ ಈ ವರದಿಗಾರ ಹೋದಾಗ ದೌರ್ಜನ್ಯಕ್ಕೆ ಒಳಗಾದ ಎಲ್ಲಾ ದಲಿತ ಕುಟುಂಬಗಳು ಘಟನೆ ನಡೆದ ರಾತ್ರಿ ಭಯಭೀತರಾಗಿ ಮನೆಯಲ್ಲಿ ಎಚ್ಚರವಾಗಿ ಇದ್ದ ಸ್ಥಿತಿಯನ್ನು ಮಹಿಳೆಯರು, ಮಕ್ಕಳು ವಿವರಿಸಿದರು. ಎಲ್ಲರೂ ಈಗ ಚುನಾವಣಾ ಕೆಲಸದಲ್ಲಿ ನಿರತರಾಗಿ ದಲಿತರಿಗೆ ಸಾಂತ್ವನ ಹೇಳುವವರು ಯಾರೂ ಇಲ್ಲವಾಗಿದೆ. ಯಾವ ರಾಜಕೀಯ ಪಕ್ಷವು ಈ ಘಟನೆಯನ್ನು ಖಂಡಿಸಿಲ್ಲ.

ಇಂತಹ ಸಂದರ್ಭದಲ್ಲಿ ಸಿಗಬೇಕಾದ ತುರ್ತು ನೆರವು ಕೂಡ ಈ ಜನರಿಗೆ ಲಭ್ಯವಾಗಿಲ್ಲ. ಮಂಡ್ಯ ಜಿಲ್ಲೆಯ ಯಾವ ಹಳ್ಳಿಯಲ್ಲೂ ದಲಿತರಿಗೆ ದೇವಸ್ಥಾನ ಪ್ರವೇಶ ಇಲ್ಲ. ಅಲ್ಲಿ-ಇಲ್ಲಿ ಈ ರೀತಿಯ ಪ್ರಯತ್ನ ನಡೆದಾಗ ಉದ್ಭವಿಸುವ ಜಾತಿವಾದಿಗಳ ದೌರ್ಜನ್ಯಕ್ಕೆ ಸರಿಯಾದ ಕಾನೂನು ಕ್ರಮ ಆಗಬೇಕು. ಜಕ್ಕನಹಳ್ಳಿ ಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಎಂ.ಎಂ.ಮಹದೇವು ಮಂಜುನಾಥ್ ಮತ್ತಿತರ ಬೆಂಬಲಿಗರನ್ನು ಕೂಡಲೇ ಅಟ್ರಾಸಿಟಿ ಕಾಯಿದೆಯಡಿಯಲ್ಲಿ ಬಂಧಿಸಿ ವಿಚಾರಣೆ ನಡೆಸಿ ದಲಿತರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ಜಿಲ್ಲಾಡಳಿತ ಹಾಗೂ ಪ್ರಗತಿಪರ ಶಕ್ತಿಗಳು ನಿಲ್ಲಬೇಕಾಗಿದೆ.

- ಟಿ.ಯಶವಂತ


ಸರ್ವಧಾರಿ ಸಂವತ್ಸರದ ಫಲ ವಿಚಾರ

ಗ್ರಹಗಳ ಗ್ರಹಚಾರ ಚೆನ್ನಾಗಿದೆ. ಮೊನ್ನೆ ಯುಗಾದಿಯಂದು ಯಾವ ತೊಂದರೆ ತಾಪತ್ರಯಗಳಿಲ್ಲದೆ, ಅಧಿಕಾರ ಹಸ್ತಾಂತರ ನೆರವೇರಿದೆ. ಗ್ರಹಗಳ ಪರ್ಯಾಯ ವ್ಯವಸ್ಥೆಗೆ ಏನೂ ಗ್ರಹಚಾರ ವಕ್ಕರಿಸದೇ, ಎಲ್ಲಾ ಸುಗಮವಾಗಿ ಮಂತ್ರಿಮಂಡಲ ಪುನರಚನೆಯಾಗಿದೆ. ಚಂದ್ರನೇ ರಾಜನಾಗಿ ಮುಂದುವರೆದಿದ್ದರೂ, ಇತರ ಗ್ರಹಗಳ ಭಿನ್ನಮತೀಯ ಚಟುವಟಿಕೆಗಳ ವರದಿಯೇನೂ ಬಂದಿಲ್ಲ! ಹಾಗಾಗಿ ಗ್ರಹಗಳಿಗೆಲ್ಲ ಸರ್ವಧಾರಿ ಸಂವತ್ಸರದ ಶುಭಾಶಯಗಳು !

ಗ್ರಹಗಳಲ್ಲಿ ಬೇರೆ ಬೇರೆ ಪಾರ್ಟಿಗಳಿಲ್ಲ. ಅವರೆಲ್ಲ ಸರ್ವಾಧಿಕಾರಿಗಳು ಅದಕ್ಕೆ ಭಿನ್ನಮತೀಯ/ಬಂಡಾಯ ಚಟುವಟಿಕೆ ಇಲ್ಲ ಅಂತ ನಿಮ್ಮ ಅಭಿಪ್ರಾಯ ಅಲ್ಲವೇ? ಉಡುಪಿ ಮಠಗಳಲ್ಲಿ ಪಾರ್ಟಿಗಳಿವೆಯೇ? ಅಲ್ಲಿ ಪರ್ಯಾಯದ ಗತಿ ಏನಾಯಿತು? ಯಾಕೆ ಹಾಗಾಯಿತು? ನೀವೇ ಹೇಳಿ.

ಮನುಷ್ಯರ ಅವಿವೇಕಗಳನ್ನೆಲ್ಲಾ ಗ್ರಹಗಳಿಗೆ ಯಾಕ್ರೀ ಆರೋಪಿಸುತ್ತೀರಿ? ಅಂತ ನಿಮ್ಮ ಆಕ್ಷೇಪಣೆ ತಾನೆ? ಗ್ರಹಗಳ ಮಂತ್ರಿಮಂಡಲ ರಚಿಸಿ. ರಾಜಮಂತ್ರಿ, ಸಸ್ಯಾಧಿಪ, ರಸಾಧಿಪ, ನೀರಸಾಧಿಪ ಇತ್ಯಾದಿ ಮಂತ್ರಿಮಂಡಲ/ಗ್ರಹಮಂಡಲ ರಚಿಸಿದ್ದು ನಾನಲ್ಲವಲ್ಲ! ವೃಥಾ ನನ್ನ ಮೇಲೇಕೆ ಆರೋಪ? ಇರಲಿ ಇಂಥ ಅನಾವಶ್ಯಕ ವಿಚಾರದ ಚರ್ಚೆ ಬಿಟ್ಟು ಸರ್ವಧಾರಿ ಸಂವತ್ಸರದ ಫಲಾಫಲಗಳ ವಿಚಾರ ನೋಡೋಣ.

ಶನಿ ಚುನಾವಣಾಧಿಪನಾಗಿರುವುದರಿಂದ ರಾಜ್ಯದಲ್ಲಿ ಒಂದು ವರ್ಷ ಮೊದಲೇ ವಿಧಾನಸಭಾ ಚುನಾವಣೆ ಬಂದಿದೆ. ಅಕ್ಟೋಬರ್ ನಂತರ ಶನಿಯು ರಾಹುವಿನ ಮನೆ ಪ್ರವೇಶಿಸುವುದರಿಂದ ಮುಂದಿನ ಮಾರ್ಚ್ ಒಳಗೆ ಅಥವಾ ಮಾರ್ಚ್ ನಂತರ ಲೋಕಸಭಾ ಚುನಾವಣೆಗಳು ನಡೆಯುವ ಸಾಧ್ಯತೆಗಳು ಇವೆ.



ಶ್ರೀ

ರಾಹುವೂ, ಕೇತುವೂ ಒಟ್ಟಿಗೆ ಶುಕ್ರನ ಮನೆಯಲ್ಲಿ ವಾಸ್ತವ್ಯ ಮಾಡುವುದರಿಂದ ಬೆಲೆಗಳು ಏರಿಕೆಯಾಗುವುದು. ಬಂಡವಾಳಿಗರಿಗೆ ಶುಕ್ರದೆಸೆ ಅಧಿಕವಾಗಿರುವುದು.

ಮಳೆಗಾಲದಲ್ಲಿ ಕೆಲವು ಕಡೆ ಹೆಚ್ಚು ಮಳೆಯಾಗಿ ಪ್ರವಾಹ ಉಂಟಾಗುವುದು. ಇನ್ನು ಕೆಲವು ಕಡೆ ಮೋಡ ಕಟ್ಟಿದರೂ ಮಳೆ ಸರಿಯಾಗಿ ಬಾರದೆ ಬರಗಾಲ ಒಂದು ಜನ ಸಾಮಾನ್ಯರು ತೊಂದರೆಗೊಳಗಾಗುವರು. ಮಳೆ ಹೆಚ್ಚೂ ಆಗದೆ ಕಡಿಮೆಯೂ ಆಗದೆ ಕೆಲವು ಪ್ರದೇಶಗಳಲ್ಲಿ ಹದವಾದ ಮಳೆಯಾಗಿ ಕೃಷಿಗೆ, ಕುಡಿಯುವ ನೀರಿಗೆ ದನಕರುಗಳ ಮೇವಿಗೆ ಅನುಕೂಲವುಂಟಾಗುವುದು. ಪ್ರವಾಹ ಮತ್ತು ಬರಗಾಲಗಳಿಂದ ಪುಡಾರಿಗಳಿಗೆ ಹೆಚ್ಚಿನ ಅನುಕೂಲ!

ಬುಧನು ಗುರುವಿನ ಮನೆಯನ್ನು ಒತ್ತುವರಿ ಮಾಡಿಕೊಳ್ಳಲಿರುವುದರಿಂದ, ಬೇಸಿಗೆ ಕಾಲದಲ್ಲಿ ಸೆಖೆಯೂ ಚಳಿಗಾಲದಲ್ಲಿ ಚಳಿಯೂ ಉಂಟಾಗುವುದು. ಸರ್ವಧಾರಿ ಚುನಾವಣಾ ಸಂವತ್ಸರವಾದ್ದರಿಂದ ಅಭ್ಯರ್ಥಿಗಳು ಕೂಡಿಟ್ಟ ಸಂಪತ್ತು ಸ್ವಲ್ಪ ಕರಗುವುದು. ಚುನಾವಣೋದ್ಯೋಗಿಗಳಿಗೆ ಶುಭಕಾಲ ಹೇರಳ ಧನಲಾಭ.

ಗುರುವು ಶನಿಯ ಮನೆಯಲ್ಲಿ ಬಿಡಾರ ಹೂಡಲಿರುವುದರಿಂದ ಕ್ರೀಡೆಗಳಲ್ಲಿ ಶೂನ್ಯ ಸಾಧನೆ (ಗುರು ಶನಿ ಮನೆಗೆ ಹೋದ್ರು ಅಷ್ಟೇ ರಾಹುಕೇತು ಸೂರ್ಯ. ಚಂದ್ರ ಆಕಾಶ ಭೂಮಿ ಒಂದಾದ್ರೂ ನಮ್ಮ ದೇಶದ್ದು ಅಷ್ಟೇ ಕತೆ, ಕ್ರೀಡೆಗಳಲ್ಲಿ ಶೂನ್ಯ ಸಾಧನೆಗೆ ಏನೂ ಬಾಧಕವಿಲ್ಲ ಅಂತ ಮಧ್ಯದಲ್ಲಿ ರಾಗ ತೆಗೆಯಬೇಡಿ)

ಸರ್ವಧಾರಿ ಸಂವತ್ಸರದಲ್ಲಿ ಉರುವಲು ಕೊರತೆ ಉಂಟಾಗಲಿದೆ. ಮಾರಾಟವಾಗದ ಪುಸ್ತಕಗಳನ್ನು ತೂಕಕ್ಕೆ ಕೊಂಡು ಅದನ್ನು ನೀರು ಕಾಯಿಸಲು ಉರುವಲಾಗಿ ಬಳಸುವ ಸಂಭವವಿರುವುದರಿಂದ 'ತೂಕ'ದ ಸಾಹಿತ್ಯಕ್ಕೆ ಶುಕ್ರದೆಸೆ ಉಂಟಾಗಲಿದೆ.

ಬುಧನು ಕೇತು, ರಾಹು ಗುರು ಮಂಗಳ ಮುಂತಾದ ಮನೆಗಳಿಗೆ ಪ್ರವಾಸ ಮಾಡಲಿರುವುದರಿಂದ ಕೆಲವೇ ಸಿನಿಮಾಗಳು ಹಿಟ್ಟಾಗಿ, ಹೆಚ್ಚಿನ ಸಿನಿಮಾಗಳು ಪಟ್ಟಾಗಿ ಮಲಗಲಿವೆ.

ಸರ್ವಧಾರಿ ಸಂವತ್ಸರದ ಫಲಾಫಲಗಳನ್ನು ಕೇಳಿದವರಿಗೂ ಕೇಳ ದವರಿಗೂ, ಓದಿದವರಿಗೂ, ಓದದವರಿಗೂ ಸಕಲ ಸನ್ಮಂಗಳವುಂಟಾಗುವುದು.

ಈ ಸಂವತ್ಸರದಲ್ಲಿ ನಿಮ್ಮ ವೈಯಕ್ತಿಕ ಭವಿಷ್ಯ ತಿಳಿಯಲು, ಹಾಗೂ ಮೇಲೆ ಹೇಳಿದ ಫಲಾಫಲಗಳ ವಿಚಾರದಲ್ಲಿ ಹೆಚ್ಚಿನ ಮಾಹಿತಿಗಾಗಿ 420840 ಸಂಖ್ಯೆಗೆ ಕರೆ ಮಾಡಿ....

○

ಮೊನ್ನೆ ಮೊನ್ನೆ ಕೊಯಮತ್ತೂರಿನಲ್ಲಿ ನಡೆದ ಸಿಪಿಐ(ಎಂ) ಮಹಾಧಿವೇಶನದಲ್ಲಿ ಕಂಡ ಕೆಲವು ವಿಶೇಷ ಸಂಗತಿಗಳು ನಿಮಗಾಗಿ....

ಅಸಮಾನ್ಯ ಸಂಗತಿಗಳ ಸುತ್ತ ಒಂದು ಸಾಮಾನ್ಯ ಸುತ್ತು...

ಲಿಂಗರಾಜು, ವೆಂಕಟೇಶ್ ಕೆ.ಆರ್.ಪುರಂ

ಕೊಯಮತ್ತೂರು ಜನತೆಯ ಆದರದ ಪ್ರೀತಿ!

ಕೊಯಮತ್ತೂರು ಜಿಲ್ಲೆ ಶ್ರಮ ಜೀವಿ ವರ್ಗದ ಕೇಂದ್ರ. ಕಾರ್ಮಿಕರೇ, ಬಹು ಸಂಖ್ಯಾತರು. ಇಂಥ ಪ್ರದೇಶದಲ್ಲಿ ಸಿಪಿಐ(ಎಂ) ಮಹಾಧಿವೇಶನ ಮಾಡಲು ತೀರ್ಮಾನಿಸಿದಾಗ ಇಲ್ಲಿನ ಜನ ತೋರಿಸಿದ ಆದರ ಪ್ರೀತಿ ಊಹೆಗೆ ನಿಲುಕದ್ದು, ಕೇವಲ ಈ ಜಿಲ್ಲೆಯಲ್ಲೇ 2 1/2 ಕೋಟಿ ರೂ. ಸಂಗ್ರಹವಾಗಿತ್ತು. ಈ ಹಣ ಯಾರೋ ಶ್ರೀಮಂತರು ಕೊಟ್ಟ ಹಣವಾಗಿರಲಿಲ್ಲ, ಸಾಮಾನ್ಯ ಜನ ತಮ್ಮ ಬೆವರಿನ ಪಾಲನ್ನು ಪ್ರೀತಿಯಿಂದ ಇಡಿಯಾಗಿ ನೀಡಿದ್ದರು.

"ನಿಮ್ಮ ಪಕ್ಷದವರು ಹೀಗೆಂತ ಗೊತ್ತಿರಲಿಲ್ಲ ಸಾರ್"

ಪ್ರತಿನಿಧಿಗಳಿಗೆ ವಾಸ್ತವ್ಯದ ವ್ಯವಸ್ಥೆ ಮಾಡುವ ಸಂದರ್ಭದಲ್ಲಿ ಹೋಟೇಲ್ ಮಾಲೀಕರನ್ನು ಸಂಪರ್ಕಿಸಿದಾಗ ಅವರು ರಾಜಕೀಯ ನಾಯಕರಿಗೆ ಹೋಟೆಲ್ ಕೊಡಲು ನಿರಾಕರಿಸಿದ್ದರು. ಕೊನೆಗೂ ಅವರನ್ನು ಮನವೊಲಿಸಿ ಹೋಟೆಲ್ ಬುಕ್ ಮಾಡಲಾಯಿತು. ಅವರಿಗಿದ್ದ ಆತಂಕವಿಷ್ಟೆ ರಾಜಕೀಯದೋರು ಕಿರಿಕಿರಿ ಮಾಡುತ್ತಾರೆ. ಕುಡಿತ, ಗುಂಪುಗೂಡುವುದು, ಗಲಾಟೆ, ಅನೈತಿಕ ಚಟುವಟಿಕೆಗಳು ಇನ್ನೂ ಏನೇನನ್ನೋ ಅವರು [illegible]ಕೊಂಡಿದ್ದಿರ ಬಹುದು? ಸಿಪಿಎಂ ಪಕ್ಷದ ನಾಯಕರ ವಿನಯ, ನಡವಳಿಕೆ ಕಂಡು, 'ನಿಮ್ಮ ಪಕ್ಷದೋರು ಹೀಗೆಂದು ಗೊತ್ತಿರಲಿಲ್ಲ ಸಾರ್ ನಿಜವಾಗಿಯೂ ಗ್ರೇಟ್' ಅಂದರಂತೆ. ಈ ಮಾತಿಗೆ ಇನ್ನೂ ಒಂದು ಕಾರಣವಿತ್ತು. ಎರಡು ಬೆಡ್‌ಗಳ ರೂಂನಲ್ಲಿ ಮೂರು ಮಂದಿ ಉಳಿಯುವ ವ್ಯವಸ್ಥೆ ಮಾಡಲಾಗಿತ್ತು. ಎಕ್ಸ್‌ಟ್ರಾ ಬೆಡ್‌ನಲ್ಲಿ ಕೆಳಗೆ ಒಬ್ಬರಿಗೆ ವ್ಯವಸ್ಥೆಯಾಗಿತ್ತು. ಕೇರಳ ಬಂಗಾಳ ತ್ರಿಪುರ ರಾಜ್ಯಗಳ ಕೆಲವು ಮಂತ್ರಿಗಳು ಕೆಳಗೆ ಮಲಗಿದ್ದನ್ನು ನೋಡಿ ಹೌಹಾರಿದ್ದರು ಹೋಟೆಲ್ ಮಾಲೀಕರು.

ಅದ್ದೂರಿತನವಿಲ್ಲದ ಆರೋಗ್ಯಕರ ಆಹಾರ....

ಪ್ರತಿನಿಧಿಗಳಿಗೆ ಊಟದ ವ್ಯವಸ್ಥೆ ಮಾಡುವಾಗ ಸ್ವತಃ ಕೇಂದ್ರ ಸಮಿತಿಯೇ ಮಧ್ಯ ಪ್ರವೇಶಿಸಿದ್ದರಿಂದ ತಮ್ಮ ಪ್ರೀತಿಯನ್ನು ಅದಿಮಿಟ್ಟುಕೊಂಡು ಸಾಧಾರಣ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವಿಷಯದಲ್ಲಿ ಅಲ್ಲಿನ ಸಂಗಾತಿಗಳಿಗೆ ನಾವು ಒಳ್ಳೆಯ ಊಟ ಹಾಕಲು ಸಾಧ್ಯವಾಗಲಿಲ್ಲ ಎಂಬ ನೋವು ಕಾಡುತ್ತಿತ್ತು. ಆದರೆ ಅತ್ಯಂತ ಆರೋಗ್ಯಕರವಾದ ಆಹಾರವಾಗಿತ್ತು ಅವರು ಕೊಟ್ಟಿದ್ದು.

ಸಾಲಾಗಿ ನಿಂತ ನಾಯಕರು...

ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರೂ ಸೇರಿದಂತೆ ಕೇಂದ್ರ ಸಮಿತಿ ಸದಸ್ಯರು, ಮಂತ್ರಿಗಳು, ಮುಖ್ಯಮಂತ್ರಿಗಳು, ಸೇರಿದಂತೆ ಎಲ್ಲರೂ ಊಟಕ್ಕೆ ಸಾಲಾಗಿ ನಿಂತು ಊಟ ತೆಗೆದುಕೊಳ್ಳುತ್ತಿದ್ದುದೂ ನಿಜವಾಗಿಯೂ ನೋಡುಗರನ್ನು ವಿಸ್ಮಯಗೊಳಿಸಿತು.

ಹಳ್ಳಿ ತಿನಿಸಿಗೆ ಮುಗಿಬಿದ್ದ ಸಂಗಾತಿಗಳು... :

ತಮಿಳುನಾಡಿನ ಸಾಂಪ್ರದಾಯಿಕ ತಿನಿಸುಗಳನ್ನು ಊಟದ ಪರಿಕರ ಇಡಲಾಗಿತ್ತು. ಇದು ಶ್ರೀಮಂತರು ತಿನ್ನುವ ಪೀಜ್ಜಾ ಅಲ್ಲಿರಲಿಲ್ಲ. ಬದಲಾಗಿ ಸಾಮಾನ್ಯ ಹಳ್ಳಿ ಜನರ ಬೆಲ್ಲ ಮತ್ತು ಕಡಲೆಯಿಂದ ಮಾಡುವ ತಿನಿಸು. ಇದರ ರುಚಿಗೆ ಮನಸೋತ ಸಂಗಾತಿಗಳು ಮುಗಿಬಿದ್ದು ತಿನ್ನುತ್ತಿದ್ದರು. ಇದರಲ್ಲಿ ಬಂಗಾಳದ ಸಂಗಾತಿಗಳು ಮುಂದಿದ್ದರು..

ಹುತಾತ್ಮ ಸಂಗಾತಿಗಳಿಗೊಂದು ಚಂದದ ಸ್ಮಾರಕ



ನಾದಸ್ವರದ ಮೂಲಕ ಉದ್ಘಾಟನೆ

ನಾದಸ್ವರ ತಮಿಳುನಾಡಿನ ಸಾಂಪ್ರದಾಯಿಕ ಕಲೆಗಳಲ್ಲೊಂದು. ಶುಭ ಕಾರ್ಯಗಳು ನಡೆಯುವಾಗ ಈ ವಾದ್ಯವನ್ನು ಬಳಸುತ್ತಾರೆ. ಮದುವೆ ಸಂದರ್ಭಗಳಿಗೆ ಕಡ್ಡಾಯವಾಗಿ ಬಳಸುತ್ತಾರೆ. ಈ ನಾದಸ್ವರವನ್ನು ಉದ್ಘಾಟನೆಗೂ ಮುನ್ನ ನುಡಿಸಲಾಗಿ ಇದರ ಸ್ವರ ಮಾಧುರ್ಯಕ್ಕೆ ಮನಸೋತ ಸಂಗಾತಿಗಳು ಒನ್ಸ್ ಮೋರ್ ಎನ್ನಬೇಕೇ..! ಇಂಪಾದ ಸ್ವರ ಎಲ್ಲರನ್ನು ಆಕರ್ಷಿಸಿತ್ತು. ಇದು ಜನಪದರು ಬಳಸುವ ವಾದ್ಯ.

ನವರತ್ನಗಳಿಲ್ಲದ ಮೊದಲ ಮಹಾಧಿವೇಶನ

ಎಲ್ಲರಲ್ಲೂ ದುಃಖದ ಛಾಯೆ ಮಡುಗಟ್ಟಿತ್ತು. ಜೀವ-ಜೀವನ ಮುಡುಪಿಟ್ಟು ಪಕ್ಷ ಕಟ್ಟಿದ ಸಿಪಿಐ(ಎಂ) ನವರತ್ನಗಳು ಈ ಮಹಾಧಿವೇಶನದಲ್ಲಿ ಭಾಗವಹಿಸಿರಲಿಲ್ಲ. ಅವಿಭಜಿತ ಸಿಪಿಐ ನಿಂದ ಹೊರ ಬಂದ ನಂತರ ರಚಿತವಾದ ಪ್ರಥಮ ಪಾಲಿಟ್‌ಬ್ಯೂರೋ ಸದಸ್ಯರ ಸಂಖ್ಯೆ 9. ಆ ನವರತ್ನಗಳಲ್ಲಿ ಎರಡು ರತ್ನಗಳು ಮಾತ್ರವೇ ನಮ್ಮ ಜೊತೆಗಿರುವುದು. ಅದು ಜ್ಯೋತಿಬಸು ಮತ್ತು ಹರಿಕಿಷನ್ ಸಿಂಗ್ ಸುರ್ಜಿತ್. ಆದರೆ ವಯಸ್ಸು, ಅನಾರೋಗ್ಯಗಳ ಕಾರಣದಿಂದಾಗಿ ಈ ಮಹಾಧಿವೇಶನದಲ್ಲಿ ಈ ಇಬ್ಬರು ಹಿರಿಯ ಸಂಗಾತಿಗಳು ಭಾಗವಹಿಸಲಾಗಲಿಲ್ಲ. ಈ ನೋವು ಎಲ್ಲ ಸಂಗಾತಿಗಳನ್ನು ಸಮಾನವಾಗಿ ಕಾಡುತ್ತಿತ್ತು.

ರೋಮಾಂಚನಗೊಳಿಸಿದ ಜ್ಯೋತಿಬಸು ಭೇಟಿ


ಸಮ್ಮೇಳನದಲ್ಲಿ ಜ್ಯೋತಿಬಸು ಅವರ ಭೇಟಿ ಪ್ರತಿನಿಧಿಗಳನ್ನು ರೋಮಾಂಚನ ಗೊಳಿಸಿತ್ತು. ಅದು ವಿಡಿಯೋ ಕಾನ್ಫರೆನ್ಸ್ ಮೂಲಕ. ಕಾಂ: ಜ್ಯೋತಿಬಸು ವಿಡಿಯೋ ಕಾನ್ಫರೆನ್ಸ್ ಮೂಲಕ ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು. 1958ರಿಂದೀಚಿನ ಎಲ್ಲಾ ಮಹಾಧಿವೇಶನಗಳಿಗೆ ಭಾಗವಹಿಸಿದ ನಾನು ಈ ಮಹಾಧಿವೇಶನದಲ್ಲಿ ಭಾಗವಹಿಸಲಾಗಲಿಲ್ಲ ಎಂಬ ನೋವು ನನ್ನನ್ನು ಕಾಡುತ್ತಿದೆ ಎಂದು ಜ್ಯೋತಿಬಸು ಹೇಳಿದಾಗ ಪ್ರತಿನಿಧಿಗಳಲ್ಲಿ ದುಃಖ ಉಮ್ಮಳಿಸಿತು. ಅಸಾಧಾರಣ ನಿಶ್ಯಬ್ದ... ನೀರಸ ಮೌನ..

ಇಕ್ಕಟ್ಟಿನ ಕಾಲಾವಧಿ

ಕೇವಲ 6 ದಿನಗಳಲ್ಲಿ ಎಲ್ಲಾ ಕಲಾಪಗಳನ್ನು ಮುಗಿಸಬೇಕಿರುವ ಹಿನ್ನೆಲೆಯಲ್ಲಿ ವೇಳಾಪಟ್ಟಿ ಅತ್ಯಂತ ಬಿಗುವಾಗಿತ್ತು. ಸಮಯ ಪಾಲನೆ ಅನಿವಾರ್ಯವಾಗಿತ್ತು. ಎಲ್ಲಾ ಹಿರಿಯ ಸಂಗಾತಿಗಳೂ ಸೇರಿದಂತೆ ಪ್ರತಿಯೊಬ್ಬರೂ ಸಮಯ ಪಾಲನೆಗೆ ಮಹತ್ವ ನೀಡಿದ್ದರು. 5 ನಿಮಿಷವೂ ಅಪವ್ಯಯವಾಗದಂತೆ ನೋಡಿ ಕೊಳ್ಳುತ್ತಿದ್ದುದು ಶಿಸ್ತುಬದ್ಧತೆಗೆ ಸಾಕ್ಷಿಯಾಗಿತ್ತು.

ಗಮನ ಸೆಳೆದ ಕರ್ನಾಟಕದ ಚರ್ಚೆ

ಕರ್ನಾಟಕದಿಂದ ಭಾಗವಹಿಸಿದ್ದ ಸಂಗಾತಿಗಳು ಗಮನ ಸೆಳೆದ ಚರ್ಚೆಯಲ್ಲಿ ಮುಂದಾಗಿದ್ದು ವಿಶೇಷವಾಗಿತ್ತು. ಪಕ್ಷದ ರಾಜಕೀಯ ಗೊತ್ತುವಳಿ ಕುರಿತು ಜಿ.ವಿ.ಶ್ರೀರಾಂರೆಡ್ಡಿ, ಪಕ್ಷದ ಸಂಘಟನಾತ್ಮಕ ವಿಷಯ ಕುರಿತು ವಿಜೆಕೆ ನಾಯರ್, ಪಕ್ಷದ ಸಂಘಟನಾತ್ಮಕ ರಾಜಕೀಯ ಭಾಗ-2 ಕುರಿತು ಜಿ.ಸಿ.ಬಯ್ಯಾರೆಡ್ಡಿಯವರು ಮಹತ್ವಪೂರ್ಣ ಚರ್ಚೆಯನ್ನು ಮಂಡಿಸಿದ್ದು ಇಡೀ ಸಮ್ಮೇಳನದ ಗಮನ ಸೆಳೆಯಿತು.



ಶ್ರದ್ಧಾವಂತ ವಿದ್ಯಾರ್ಥಿಗಳಾಗಿ ಮೂವರು ಮುಖ್ಯಮಂತ್ರಿಗಳು

ಕಲಾಪಗಳು.. ಉತ್ಸುಕ ಭಾಗವಹಿಸುವಿಕೆ

ಪ್ರತಿನಿಧಿಗಳು ಉತ್ಸುಕತೆಯಿಂದ ಪ್ರತಿ ಕಲಾಪಗಳಲ್ಲಿ ಭಾಗವಹಿಸಿದ್ದುದು ಪ್ರತಿ ನಿರ್ಣಯ ಕೈಗೊಂಡಾಗ ನಾಲ್ಕಾರಿಂದ 5 ಸಲಹೆ/ತಿದ್ದುಪಡಿಗಳು ಬರುತ್ತಿದ್ದುದು ಕ್ರಿಯಾಶೀಲತೆಗೆ ಸಾಕ್ಷಿಯಾಗಿತ್ತು. ಕಲಾಪಗಳ ನಡುವೆ ಎದ್ದು ಹೋಗುವುದು ಅತ್ಯಂತ ವಿರಳವಾಗಿತ್ತು.

ಮೊದಲ ಬೆಂಚಿನ ಮೂವರು ವಿದ್ಯಾರ್ಥಿಗಳು

ಪಶ್ಚಿಮಬಂಗಾಳ, ಕೇರಳ, ತ್ರಿಪುರಾದ ಮುಖ್ಯಮಂತ್ರಿಗಳಾದ ಬುದ್ಧದೇವ್ ಭಟ್ಟಾಚಾರ್ಯ, ವಿ.ಎಸ್. ಅಚ್ಯುತಾನಂದನ್ ಮತ್ತು ಮಾಣಿಕ್ ಸರ್ಕಾರ್ ವೇದಿಕೆಯ ಮೊದಲ ಸಾಲಿನಲ್ಲಿ ಕುಳಿತಿದ್ದುದು ಮೊದಲ ಬೆಂಚಿನಲ್ಲಿ ಕುಳಿತ ಶ್ರದ್ಧಾವಂತ ವಿದ್ಯಾರ್ಥಿಗಳಂತೆ ತೋರುತ್ತಿದ್ದರು. ಇಡೀ ಕಲಾಪಗಳಿಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ರೀತಿ ಎಲ್ಲರನ್ನು ಚಕಿತಗೊಳಿಸಿತ್ತು. 5 ನಿಮಿಷ ಕೂಡ ಆಚೀಚೆ ಕದಲುತ್ತಿರಲಿಲ್ಲ, ಮಾತ್ರವಲ್ಲ ಎಲ್ಲರ ಚರ್ಚೆಯನ್ನು ಗಮನವಿಟ್ಟು ಕೇಳುತ್ತಿದ್ದುದು ಇದು ಇತರೆ ರಾಜಕೀಯ ಪಕ್ಷಗಳ ಮುಖ್ಯಮಂತ್ರಿಗಳನ್ನು ಅಣಕಿಸುವಂತಿತ್ತು.

ನಿರಾತಂಕವಾಗಿದ್ದರು ವರದ ರಾಜನ್

ತಮಿಳುನಾಡು ರಾಜ್ಯ ಕಾರ್ಯದರ್ಶಿ ಕಾಂ: ವರದರಾಜನ್ ನಿರಾತಂಕವಾಗಿದ್ದರು ಎಂದರೆ ಆಶ್ಚರ್ಯವಾಗ ಬಹುದೇನೋ...? ಇಡೀ ಮಹಾಧಿವೇಶನದ ಯಶಸ್ಸಿನ ಮುಂದಾಳತ್ವ ವಹಿಸಿದ್ದವರು ಈ ಸಂಗಾತಿ. ಪ್ರತಿ ಭಾಷೆಗೂ ತರ್ಜುಮೆ.. ಕಲಾಪದಲ್ಲಿ ನಡೆದ ಪ್ರತಿಯೊಂದು ಚರ್ಚೆಗಳನ್ನು ಆಗಿಂದಾಗಲೇ ಅವರವರ ಮಾತೃಭಾಷೆಗೆ ತರ್ಜುಮೆ ಮಾಡಿ ಎಲ್ಲರಿಗೂ ಅರ್ಥವಾಗುವಂತೆ ಮಾಡುತ್ತಿದ್ದುದು ಈ ಮೂಲಕ ಎಲ್ಲರೂ ಎಲ್ಲಾ ವಿಷಯಗಳ ಚರ್ಚೆಯಲ್ಲಿ ಪಾಲ್ಗೊಳ್ಳಲು ಸಹಕಾರಿಯಾಗುತ್ತಿದ್ದುದು ಸಮ್ಮೇಳನದ ಮತ್ತೊಂದು ವಿಶೇಷ. ಆದರೂ ಈ ಸಂಗಾತಿ ನಿರಾತಂಕವಾಗಿದ್ದರು. ಕೆಲಸದ ಹಂಚಿಕೆ, ಹೊಂದಾಣಿಕೆಯಿಂದ ಕೂಡಿ ಮಾಡುವ ಕೆಲಸದ ಪರಿಣಾಮ ಕಾಮ್ರೇಡ್ ನಿರಾತಂಕವಾಗಿದ್ದರು. ತಮಿಳುನಾಡಿನ ಪ್ರತಿಯೊಬ್ಬ ಸಂಗಾತಿ ಹಗಲಿರುಳ ಸೇವೆಯ ಸೂಚ್ಯವಾಗಿತ್ತು ಹಿರಿಯ ಸಂಗಾತಿಯ ನಿರಾತಂಕ.

ಸ್ವಯಂ ಸೇವಕರ ದಣಿವರಿಯದ ದುಡಿಮೆ...:

ಎಲ್ಲರ ಮೆಚ್ಚುಗೆ, ಪ್ರಶಂಸೆಗೆ ಪಾತ್ರವಾಗಿದ್ದು ಸ್ವಯಂಸೇವಕರ ಅವಿಶ್ರಾಂತ ದುಡಿಮೆ. ಕಳೆದ ಆರು ತಿಂಗಳುಗಳಿಂದ ಹಗಲಿರುವ ನಿದ್ರೆ ಇಲ್ಲದೆ ಸುರಿಸಿದ ಬೆವರಿನ ಪ್ರತಿಫಲವೇ ಈ ಮಹಾಧಿವೇಶನದ ಯಶಸ್ಸಾಗಿತ್ತು. ಯಾವ ಕೆಲಸವನ್ನು ನಿರಾಕರಿಸದ, ಎಲ್ಲಕ್ಕೂ ಸೈ ಎನ್ನುವ ಅವರ ಬದ್ಧತೆ ನಿಜಕ್ಕೂ ಅಭಿನಂದನಾರ್ಹ. ಬಂದ ಅತಿಥಿಗಳ ಬಗ್ಗೆ ಅವರಿಗಿರುವ ಕಾಳಜಿ ಎಲ್ಲರನ್ನೂ ಮೂಕ ವಿಸ್ಮಿತರನ್ನಾಗಿಸಿತ್ತು. ಲಾಲ್‌ಸಲಾಂ ಹೇಳಲೇಬೇಕು ಇವರಿಗೆ.

How can Possible ....? ವಿದೇಶಿ ಪ್ರತಿನಿಧಿಗಳ ಕೌತುಕದ ಪ್ರಶ್ನೆ

ಸತತ 30 ವರ್ಷಗಳ ಸುದೀರ್ಘ ಆಡಳಿತ ನಡೆಸುತ್ತಿರುವ ಪಶ್ಚಿಮಬಂಗಾಳದ ಎಡರಂಗ ಸರ್ಕಾರದ ಬಗ್ಗೆ ಸಮ್ಮೇಳನದಲ್ಲಿ ಸೌಹಾರ್ದ ಪ್ರತಿನಿಧಿಗಳಾಗಿ ಭಾಗವಹಿಸಿದ ವಿದೇಶಿಯರು ಪದೇ ಪದೇ ಕೇಳುತ್ತಿದ್ದ ಪ್ರಶ್ನೆ How can Possible ....? ಬಂಡವಾಳ ಶಾಹಿ-ಭೂ ಮಾಲಿಕ ವ್ಯವಸ್ಥೆಯೊಳಗೆ ಸಮಾಜವಾದಿ ಕಣ್ನೋಟದ ಎಡಪಂಥೀಯ ಸರ್ಕಾರದಿಂದ ಇಷ್ಟು ದೀರ್ಘಕಾಲದ ಆಡಳಿತ ಹೇಗೆ ಸಾಧ್ಯ? ಎಲ್ಲ ವಿದೇಶಿಯರು ಎಡೆಬಿಡದೆ ಕೇಳುತ್ತಿದ್ದ ಈ ಕೌತುಕದ ಪ್ರಶ್ನೆಗೆ ಪಕ್ಷದ ನಾಯಕರು ಸಮಾಧಾನದಿಂದ ಉತ್ತರ ನೀಡುತ್ತಿದ್ದರು.

ವ್ಯಕ್ತಿವಾದ ನಿರ್ಮಾಮದ ದೃಢ ನಿರ್ಧಾರ:

ಕೇರಳದಲ್ಲಿ ಇತ್ತೀಚಿನ ಕೆಲ ವ್ಯಕ್ತಿವಾದದಿಂದಾಗಿ ಪರಿಣಮಿಸಿದ ಕೆಲ ಘಟನೆಗಳ ಬಗ್ಗೆ ಸಮ್ಮೇಳನದಲ್ಲಿ ಗಂಭೀರ ಚರ್ಚೆ ನಡೆದಿದೆ. ಇಲ್ಲಿಯ ಸಂಗಾತಿಯೊಬ್ಬರು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಾ, ವಿಷಾದ ವ್ಯಕ್ತಪಡಿಸುವಾಗಲೇ ಕಲ್ಮಶಗಳನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿದ್ದೇವೆ. ಎಲ್ಲೋ ಅಲ್ಲಿ ಇಲ್ಲಿ ಕಲ್ಮಶದ ಕಣಗಳು ಮಾತ್ರ ಉಳಿದಿವೆ. ಕೇರಳದ ಧೀಮಂತ ನಾಯಕರ ಉದಾತ್ತಧ್ಯೇಯಗಳ ಹಾದಿಯಲ್ಲಿ ನಾವು ಒಟ್ಟಾಗಿ ಸಾಗುತ್ತೇವೆ ಎಂದು ಹೇಳುತ್ತಾ,

ಪುಟ 6 ಕ್ಕೆ

ಆಂಧ್ರ ಭೂ ಹೋರಾಟದ ನೇತಾರ ಬಿ.ವಿ.ರಾಘವಲು, ಮತ್ತೊಬ್ಬ ಹೋರಾಟಗಾರ್ತಿ, ನಾಯಕಿ ಬೃಂದಾ ಕಾರಟ್



ಹೊಸಕೋಟೆಯಲ್ಲಿ ಬಡವರಿಗೆ ಭೂಮಿಗಾಗಿ ಹೋರಾಟ

ಮನೆ ಕಟ್ಟಿಕೊಳ್ಳಲು ಕನಿಷ್ಠ ವಿಸ್ತೀರ್ಣದ ನಿವೇಶನ ಇಲ್ಲದೆ ಲಕ್ಷಾಂತರ ಮಂದಿ ಪರದಾಡುತ್ತಿದ್ದರೆ, ಹಲವಾರು ಎಕರೆ ಭೂಮಿ ಹೊಂದಿರುವವರು ಅಧಿಕಾರಿಗಳಿಗೆ ಲಂಚ ನೀಡಿ ಮತ್ತೆ ಮತ್ತೆ ಭೂಮಿ ಮಂಜೂರು ಮಾಡಿಸಿಕೊಳ್ಳುವುದು ಪ್ರಸ್ತುತ ವ್ಯವಸ್ಥೆಯಲ್ಲಿ ಆಶ್ಚರ್ಯ ಹುಟ್ಟಿಸುವ ಸಂಗತಿಯೇನಲ್ಲ. ಏಕೆಂದರೆ ಇಂತಹ ಸಾವಿರಾರು ಪ್ರಕರಣಗಳು ಪ್ರತಿದಿನ ನಡೆಯುತ್ತಲೇ ಇರುತ್ತವೆ. ಅಂತದೇ ಪ್ರಕರಣವೊಂದು ಹೊಸಕೋಟೆ ತಾಲೂಕಿನ ಕಣೇಕಲ್ ಗ್ರಾಮದಲ್ಲಿ ನಡೆದಿದೆ. ಅಧಿಕಾರಿಗಳು, ಭೂಮಾಲಿಕರ ಅಕ್ರಮ ಕೂಟ ಬಡವರು ಮತ್ತು ಸರ್ಕಾರದ ಕಣ್ಣಿಗೆ ಮಣ್ಣೆರಚಿದ್ದಾರೆ.

ಈ ಮಾಹಿತಿ ಅರಿತ ಕರ್ನಾಟಕ ಪ್ರಾಂತ ರೈತ ಸಂಘ ತೀವ್ರತರವಾದ ಹೋರಾಟಗಳನ್ನು ರೂಪಿಸಿದೆ. ಬಡಜನರಿಂದ ಗುಡಿಸಲು ಹಾಕಿಸಿ ಭೂಮಾಲಿಕರು ಮತ್ತು ಲಂಚಕೋರ ಅಧಿಕಾರಿಗಳಿಗೆ ಸಡ್ಡು ಹೊಡೆದು ನಿಂತಿದೆ.

ಕಣೇಕಲ್ ಗ್ರಾಮದ ಸರ್ವೆ ನಂಬರ್ 133/ಪಿ5ರಲ್ಲಿ 3.15 ಎಕರೆ ಸರ್ಕಾರಿ ಜಮೀನಿದೆ. ಇದರಲ್ಲಿ ನಿವೇಶನರಹಿತ ಬಡವರು ಗುಡಿಸಲು ಹಾಕಿ ಹಕ್ಕು ಪತ್ರಗಳನ್ನು ನೀಡಬೇಕೆಂದು ಹೋರಾಟ ಮುಂದುವರೆಸಿದ್ದಾರೆ. ಕಣೇಕಲ್ ಗ್ರಾಮದ ನಿವಾಸಿಯಲ್ಲದ ರಾಮಸ್ವಾಮಯ್ಯ ಮತ್ತು ಅವರು ಬಾಲಬಡುಕರು ಇದಕ್ಕೆ ತೀವ್ರ ಪ್ರತಿರೋಧ ಒಡ್ಡುತ್ತಿದ್ದಾರೆ. ವಾಸ್ತವವಾಗಿ ರಾಮಸ್ವಾಮಯ್ಯ ದೊಡ್ಡದುನ್ನಸಂದ್ರದ ನಿವಾಸಿಯಾಗಿದ್ದು ಅದೇ ಗ್ರಾಮದ ಸರ್ವೆ ನಂಬರ್ 21ರಲ್ಲಿ 4 ಎಕರೆ ಹಾಗೂ ಸರ್ವೆ ನಂಬರ್ 1/1 ರಲ್ಲಿ 16 ಗುಂಟೆ ಜಮೀನು ಮಂಜೂರು ಮಾಡಿಸಿಕೊಂಡಿದ್ದಾನೆ. ಇದರಲ್ಲಿ ಎರಡೂವರೆ ಎಕರೆ ಜಮೀನನ್ನು ಈಗಾಗಲೇ ಅಕ್ರಮವಾಗಿ ಮಾರಾಟ ಮಾಡಿ ಲಕ್ಷಾಂತರ ರೂ. ಹಣ ಕಬಳಿಸಿದ್ದಾನೆ. ಇದು ಸಾಲದೆಂಬಂತೆ ಕಣೇಕಲ್ ಗ್ರಾಮದ ಸರ್ವೆ ನಂಬರ್ 133/ಪಿ5ರಲ್ಲಿ 3.15 ಎಕರೆ ಹಾಗೂ ಸರ್ವೆ ನಂಬರ್ 133ರಲ್ಲಿ 2 ಎಕರೆ ಭೂಮಿಯನ್ನು ಎರಡು ಬೇರೆ ಬೇರೆ ಸಂದರ್ಭಗಳಲ್ಲಿ ಮಂಜೂರು ಮಾಡಿಸಿಕೊಂಡಿದ್ದಾನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನತೃಪ್ತಿಯಾಗುವಷ್ಟು ಲಂಚ ನೀಡಿ ಭೂಮಿಯುನ್ನು ಲಪಟಾಯಿಸಿದ್ದಾನೆ. ಸರ್ಕಾರಿ ಕಾನೂನಿನ ಅನ್ವಯ ಯಾವುದೇ ಕುಟುಂಬವೊಂದು ಎರಡು ಬಾರಿ ಭೂಮಿ ಮಂಜೂರು ಮಾಡಿಕೊಳ್ಳುವುದು ಅಪರಾಧವಾಗಿದೆ. ಇದಲ್ಲದೆ ಯಾವುದೇ ವ್ಯಕ್ತಿ ಸಂಬಂಧಪಟ್ಟ ಭೂಮಿಯನ್ನು ಹತ್ತಾರು ವರ್ಷಗಳಿಂದ ಉಳುಮೆ ಮಾಡುತ್ತಿದ್ದರೆ ಮಾತ್ರ ನಮೂನೆ 50 ರಂತೆ ಅರ್ಜಿ ಸಲ್ಲಿಸಬಹುದು. ಆದರೆ ಈ ಪ್ರಕರಣದಲ್ಲಿ ಅಂತಹ ಎಲ್ಲ ಕಾನೂನುಗಳನ್ನು ರಾಜಾರೋಷವಾಗಿ ಉಲ್ಲಂಘಿಸಲಾಗಿದೆ.

ಕಳೆದ 12 ದಿನಗಳಿಂದ ನಿವೇಶನ ರಹಿತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸರ್ವೆ ನಂಬರ್ 133/ಪಿ5ರಲ್ಲಿ 25ಕ್ಕೂ ಹೆಚ್ಚು ಗುಡಿಸಲುಗಳನ್ನು ಹಾಕಿಕೊಂಡು ಹಕ್ಕು ಪತ್ರಗಳನ್ನು ನೀಡಬೇಕೆಂದು ಸತತ ಹೋರಾಟ ನಡೆಸುತ್ತಿದ್ದಾರೆ. ಇದಕ್ಕಾಗಿ ಕಣೇಕಲ್ ವಸತಿಹೀನರ ಹೋರಾಟ ಸಮಿತಿಯನ್ನು ರಚಿಸಲಾಗಿದೆ. 27 ಗುಡಿಸಲು ನಿವಾಸಿಗಳ ಮೇಲೆ ಈಗಾಗಲೇ ಪೊಲೀಸರು ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿದ್ದಾರೆ. ಆದರೂ ಎದೆಗುಂದದ ಅಲ್ಲಿನ ಜನತೆ ಹೋರಾಟವನ್ನು ಮುಂದುವರೆಸಿದ್ದಾರೆ.

ಸಿಪಿಎಂ ಪಕ್ಷದ ಹೊಸಕೋಟೆ ತಾಲ್ಲೂಕು ಮತ್ತು ಬೆಂಗಳೂರು ಜಿಲ್ಲಾ ಸಮಿತಿಗಳು ಈ ಹೋರಾಟಕ್ಕೆ

ಬಡವರ ಗುಡಿಸಲ ರಕ್ಷಣೆಗಾಗಿ ಏರಿತು ಬಾವುಟ



ಸಂಪೂರ್ಣ ಬೆಂಬಲ ನೀಡಿದ್ದಾರೆ. ಹೋರಾಟದ ನಾಯಕತ್ವವನ್ನು ವಸತಿಹೀನರ ಸಮಿತಿ ಗೌರವ ಅಧ್ಯಕ್ಷರಾದ ಪಿಳ್ಳಪ್ಪ, ಕೆ.ಎನ್.ವೆಂಕಟೇಶಪ್ಪ, ಚಿಕ್ಕಪ್ಪಯ್ಯ, ಜಗನ್ನಾಥ್, ಅಧ್ಯಕ್ಷರಾದ ರಾಮಾಂಜನಪ್ಪ, ಕೆ.ಬಿ.ಸತೀಶ, ಸಂಪಂಗಿರಾಮಸ್ವಾಮಿ, ಶಂಕರಪ್ಪ, ಮುನಿಯಮ್ಮ, ನಿರ್ಮಲಮ್ಮ, ಪಾರ್ವತಮ್ಮ, ಲಲಿತಮ್ಮ, ವೆಂಕಟಲಕ್ಷಮ್ಮ, ಪದ್ಮಯ್ಯ ಮುಂತಾದವರು ವಹಿಸಿದ್ದಾರೆ. ಬೆಂಗಳೂರು ಜಿಲ್ಲಾ ಸಿಪಿಎಂ ಪಕ್ಷದ ಕಾರ್ಯದರ್ಶಿ ಕೆ.ಪ್ರಕಾಶ್ ಹೋರಾಟದ ಸ್ಥಳಕ್ಕೆ ಭೇಟಿ ನೀಡಿ ಚಳುವಳಿನಿರತರನ್ನು ಉದ್ದೇಶಿಸಿ ಮಾತನಾಡಿ ಎಷ್ಟೇ ಕಷ್ಟ, ಸಮಸ್ಯೆ ಎದುರಾದರೂ ಹೋರಾಟ ಮುಂದುವರೆಸಬೇಕೆಂತಲೂ ಸಿಪಿಎಂ ಪಕ್ಷ ಸಂಪೂರ್ಣ ಬೆಂಬಲ ನೀಡುವುದಾಗಿಯೂ ಹೇಳಿದರು.

ಹೊಸಕೋಟೆ ತಾಲ್ಲೂಕು ಸಿಪಿಎಂ ಪಕ್ಷದ ಕಾರ್ಯದರ್ಶಿ ಆರ್.ಆರ್.ಮನೋಹರ್ ಮಾತನಾಡಿ, ಸಿಪಿಎಂ ಪಕ್ಷ ತಾಲೂಕಿನ ಇನ್ನೂ ಹಲವಾರು ಪ್ರದೇಶಗಳಲ್ಲಿ ಬಡವರಿಗೆ ನಿವೇಶನಕ್ಕಾಗಿ ಒತ್ತಾಯಿಸಿ ಭೂಮಿ ಹೋರಾಟಗಳನ್ನು ನಡೆಸುವ ಯೋಜನೆ ಹೊಂದಿದೆ. ಈ ಹೋರಾಟಕ್ಕೆ ಪಕ್ಷ ಬೆನ್ನೆಲುಬಾಗಿರುತ್ತದೆ. ನಿವೇಶನ ರಹಿತರು ನಡೆಸುತ್ತಿರುವ ಈ ನ್ಯಾಯಯುತ ಹೋರಾಟಕ್ಕೆ ಸುತ್ತಮುತ್ತಲ ಗ್ರಾಮಸ್ಥರು, ಪ್ರಜ್ಞಾವಂತರು ಬೆಂಬಲ ನೀಡಬೇಕೆಂದು ಕೋರಿದರು.

ರೈತ ಮುಖಂಡರಾದ ಪ್ರಭುದೇವಯ್ಯ, ಆನೇಕಲ್ ತಾಲ್ಲೂಕು ರೈತ ಮುಖಂಡರಾದ ಶಿವರಾಮರೆಡ್ಡಿ, ಗ್ರಾಮದ ಮುಖಂಡರು ಹಾಗೂ ವಕೀಲರೂ ಆದ ರಾಮಾಂಜಿನಪ್ಪ ಮಾತನಾಡಿ ಹೋರಾಟ ನಿರತ ಬಡವರಿಗೆ ಬೆಂಬಲ ವ್ಯಕ್ತಪಡಿಸಿದರು. ತಾಲೂಕು ಸಿಐಟಿಯು ಮುಖಂಡರಾದ ಕಾಮ್ರೇಡ್ ನರಸಿಂಹ ಮೂರ್ತಿ, ಉದಯ್‌ಕುಮಾರ್, ಸಿಪಿಎಂ ತಾಲ್ಲೂಕು ಮುಖಂಡರಾದ ಕೆ.ನಾಗರಾಜ್, ಡಿವೈಎಫ್‌ಐ ತಾಲ್ಲೂಕು ಕಾರ್ಯದರ್ಶಿ ಮೋಹನ್ ಬಾಬು ಮತ್ತಿತರರು ಭಾಗವಹಿಸಿದ್ದಾರೆ.

ಶ್ರೀನಿವಾಸ, ಅಪ್ಪು

ಅಸಮಾನ್ಯ ಸಂಗತಿಗಳ ಸುತ್ತ ಒಂದು ಸುತ್ತು.....

ಪುಟ 5 ರಿಂದ

ಇಎಂಎಸ್ ಅವರ ಸೈದ್ಧಾಂತಿಕ ಬದ್ಧತೆ/ಕಣ್ಣೋಟ. ಎಕೆಜಿ ಯವರ ಸಮರಶೀಲ ಹೋರಾಟ, ಕೃಷ್ಣಪಿಳ್ಳೆಯವರ ಸಂಘಟನಾ ಚಾತುರ್ಯ. ಈ ಮೂರು ನಾಯಕರ ಅಸಾಧಾರಣ ಗುಣಗಳ ಸಮ್ಮಿಳಿತದ ಹಾದಿಯಲ್ಲಿ ಖಂಡಿತಾ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದಾಗ ಪ್ರತಿನಿಧಿಗಳ ಕರಡಾತನ.

ಸಂಘ ಪರಿವಾರದ ಕೋಮು ವಾದದ ವಿರುದ್ಧ ಸಮರ ಸಾರಿದ ಸಮ್ಮೇಳನ:

ಇತ್ತೀಚಿನ ಸಿಪಿಐ(ಎಂ) ಪಕ್ಷದ ಮೇಲೆ ಆರ್‌ಎಸ್‌ಎಸ್- ಬಿಜೆಪಿಯ ಬಹಿರಂಗ ಧಾಳಿ ಅದರ ಹತಾಶೆ ಮನೋಭಾವದ ಪ್ರತಿಫಲನ ಸಂಘ ಪರಿವಾರದ ಈ ಧಾಳಿಯನ್ನು ಸಮರ್ಥವಾಗಿ ಎದುರಿಸುವ ತೀರ್ಮಾನ. ಮಾತ್ರವಲ್ಲ ಕೋಮುವಾದದ ವಿರುದ್ಧ ಸಮರ ಸಾರುವ ಒಕ್ಕೊರೊಲ ತೀರ್ಮಾನ....

ಅಂಗವಿಕಲರ ಸಂಘಟನೆಗೆ ಒತ್ತು

ಈ ಮಹಾಧಿವೇಶನದ ಮತ್ತೊಂದು ವಿಶೇಷ ದೈಹಿಕ ಮತ್ತು ಮಾನಸಿಕ ಅಂಗವಿಕಲರನ್ನು ದೇಶಾದ್ಯಂತ ಸಂಘಟಿಸುವ ತೀರ್ಮಾನ ಕೈಗೊಳ್ಳಲಾಯಿತು. ಪಶ್ಚಿಮಬಂಗಾಳದಲ್ಲಿ ಎಲ್ಲಾ ವಿಧದ ಅಂಗವಿಕಲರನ್ನು ಸಂಘಟಿಸಲಾಗಿದ್ದು ಎಲ್ಲಾ ರಾಜ್ಯಗಳಲ್ಲಿ ಸಂಘಟನೆಯುನ್ನು ವಿಸ್ತರಿಸಲು ಸರ್ವಾನುಮತದ ನಿರ್ಣಯ ಅಂಗೀಕರಿಸಲಾಯಿತು.

ಮಂತ್ರಿಗಳೆಷ್ಟು ....?

ಪಶ್ಚಿಮ ಬಂಗಾಳ, ಕೇರಳ ಹಾಗೂ ತ್ರಿಪುರ ಎಡರಂಗ ಸರ್ಕಾರಗಳ ಸಿಪಿಐ(ಎಂ) ಪಕ್ಷದ ಮುಖ್ಯಮಂತ್ರಿಗಳಾದ ಬುದ್ಧದೇವ್ ಭಟ್ಟಾಚಾರ್ಯ, ವಿ.ಎಸ್.ಅಚ್ಯುತಾ ನಂದನ್, ಮಾಣಿಕ್ ಸರ್ಕಾರ್ ಸೇರಿದಂತೆ 34 ಜನ ಮಂತ್ರಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದು ಮತ್ತೊಂದು ವಿಶೇಷ.

ವಿದೇಶಿ ಪ್ರತಿನಿಧಿಗಳು:

ದೇಶಗಳ 25 ಪಕ್ಷಗಳಿಂದ ಒಟ್ಟು 52 ಜನ ವಿದೇಶಿ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಿದ್ದರು. ಚೀನಾ, ಕ್ಯೂಬಾ, ವಿಯೆಟ್ನಾಂ, ಕೊರಿಯಾ, ಪಾಕಿಸ್ಥಾನ, ಗ್ರೀಸ್, ಅಮೇರಿಕಾ, ಬಲ್ಗೇರಿಯಾ, ರಷ್ಯಾ, ಇಟಲಿ, ಜಪಾನ್, ಆಸ್ಟ್ರೇಲಿಯಾ, ಬಾಂಗ್ಲಾ, ಇತರೆ ದೇಶಗಳು.



ಸಾಂಸ್ಕೃತಿಕ ಕಾರ್ಯಕ್ರಮ

ಕೆಂಪು ಧ್ವಜ ಏರಿಸಿಕೊಂಡು ತಿರುಪತಿಯಿಂದ ಕೊಯಮತ್ತೂರಿಗೆ ಸೈಕಲ್ ಪಯಣ...:

ಸಿಪಿಐ(ಎಂ) ಪಕ್ಷದ ಅಭಿಮಾನಿ ಕುಪ್ಪುಸ್ವಾಮಿ ಎಂಬಾತ ತಿರುಪತಿಯಿಂದ ಕೊಯಮತ್ತೂರಿಗೆ ಕುಡುಗೋಲು ಸುತ್ತಿಗೆಯು ಕೆಂಪು ಧ್ವಜ ಏರಿಸಿಕೊಂಡು ಸೈಕಲಿನಲ್ಲಿ 600 ಕಿ.ಮೀ. ಕ್ರಮಿಸಿ ಸಮ್ಮೇಳನದ ರ್‍ಯಾಲಿಯಲ್ಲಿ ಭಾಗವಹಿಸಲು ಬಂದಿದ್ದರು. ಮಾರ್ಚ್ 30ಕ್ಕೆ ತಿರುಪತಿ ಬಿಟ್ಟು ಏಪ್ರಿಲ್ 03ಕ್ಕೆ ಕೊಯಮತ್ತೂರು ತಲುಪಿದ್ದರು. ಇದಲ್ಲವೇ ಅಭಿಮಾನ...

ಸಂಜೆಯ ಸಾಂಸ್ಕೃತಿಕ ಕಲರವ

ಪ್ರತಿದಿನ ಸಂಜೆಯು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿನಿಧಿಗಳು ಹಾಗೂ ಸಾರ್ವಜನಿಕರಿಗೂ ನೋಡಲು ಅವಕಾಶವಾಗುವಂತೆ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿತ್ತು. ಪಶ್ಚಿಮಬಂಗಾಳ, ಕೇರಳ, ಆಂಧ್ರಪ್ರದೇಶ, ರಾಜ್ಯಗಳ ಕಲಾತಂಡಗಳೂ ಸೇರಿದಂತೆ ತಮಿಳುನಾಡಿನ ಜಾನಪದ ಕಲಾತಂಡಗಳು ನೆರೆದಿದ್ದವರಿಗೆ ಮುದ ನೀಡುವ ಜೊತೆಗೆ ವಿಚಾರ ಹಂಚುತ್ತಿದ್ದವು. ಸಾರ್ವಜನಿಕರೂ ಸಾವಿರಾರು ಸಂಖ್ಯೆಯಲ್ಲಿ ಬಂದು ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು.

ಪುಸ್ತಕಗಳ ಬಿಡುಗಡೆ

The Great revolt, peoples Dairy of freedom struggle, ಪುಸ್ತಕಗಳೂ ಸೇರಿದಂತೆ ಒಟ್ಟು 7 ಪುಸ್ತಕಗಳನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಲೆನಿನ್‌ವಾದದ ಕುರಿತು ನಂದನ್ ಮಣಿರತ್ನಂ(ಸುಹಾಸಿನಿ-ಮಣಿರತ್ನಂರವರ ಮಗ) ಬರೆದ ಪುಸ್ತಕವೂ ಇದೇ ಸಂದರ್ಭದಲ್ಲಿ ಬಿಡುಗಡೆಯಾಯಿತು.

ಮಹಾಧಿವೇಶನದಲ್ಲಿ ನಾಮಕರಣ...

ಸಿಪಿಐ(ಎಂ) ಪಕ್ಷದ ಸದಸ್ಯ ವಿ.ರಾಮಮೂರ್ತಿ ಹಾಗೂ ಲತಾ ದಂಪತಿಗಳಿಗೆ ಜನಿಸಿದ ಅವಳಿ ಮಕ್ಕಳಿಗೆ ಮಹಾಧಿವೇಶನದ ಸಂದರ್ಭದಲ್ಲಿ ಕಾಂ: ಬೃಂದಾ ಕಾರಟ್ ನಾಮಕರಣ ಮಾಡಿದರು. ವಿವೇಕ್ ಮತ್ತು ವಿರಾಂಗಣೆ ಎಂದು ನಾಮಕರಣ ಮಾಡಿ ಶುಭ ಹಾರೈಸಿದರು.

245 ಸಂಗಾತಿಗಳ ಬಲಿದಾನ

ಕಳೆದ 18ನೇ ಮಹಾಧಿವೇಶನದಿಂದೀಚೆಗೆ ವಿವಿಧ ರಾಜ್ಯಗಳಿಗೆ 245 ಸಂಗಾತಿಗಳು ಕೋಮುವಾದಿ, ಪ್ರತ್ಯೇಕತಾವಾದಿಗಳ ಗೂಂಡಾಗಳಿಂದ ಹತರಾಗಿದ್ದಾರೆ. ಈ ಮೂರು ವರ್ಷಗಳ ಅವಧಿಯಲ್ಲಿ 5 ದಿನಕ್ಕೊಬ್ಬರಂತೆ ಸಿಪಿಐ(ಎಂ) ಪಕ್ಷದ ಸದಸ್ಯರು, ಬೆಂಬಲಿಗರು ತಮ್ಮ ಪ್ರಾಣವನ್ನು ಬಲಿದಾನ ಮಾಡಿದ್ದಾರೆ. ಪಶ್ಚಿಮಬಂಗಾಳ-160(28 ಜನ ನಂದಿಗ್ರಾಮದಲ್ಲಿ) ಕೇರಳ-21, ಕಾಶ್ಮೀರ-06, ಆಂಧ್ರಪ್ರದೇಶ-14, (7ಮಂದಿ ಮುಡಿಗೊಂಡ ಗೋಲಿಬಾರ್‌ನಲ್ಲಿ) ರಾಜಸ್ಥಾನ-02, ಹಿಮಾಚಲ ಪ್ರದೇಶ-03, ತ್ರಿಪುರ-17, ಪಂಜಾಬ್-01, ಬಿಹಾರ್-15, ಅಸ್ಸಾಂ-01, ನೆರೆದ ಪ್ರತಿನಿಧಿಗಳು ಹುತಾತ್ಮ ಸ್ತಂಭಕ್ಕೆ ಹೂಗುಚ್ಛ ಇಟ್ಟು ಶ್ರದ್ಧಾಂಜಲಿ ಅರ್ಪಿಸಿದರು. ನಿಮಗಿದೋ... ಕೆಂಪು ನಮನ ಸಂಗಾತಿಗಳೇ...

ಬಿಸಿಬೋಂಡದಂತೆ ಬಿಕರಿಯಾದ 'ಚೆ' ಚಿತ್ರಗಳು

ಚೆ.... ಯಾರಿಗೆ ತಾನೇ ಗೊತ್ತಿಲ್ಲ. ಲ್ಯಾಟೀನ್ ಅಮೇರಿಕಾ ರಾಷ್ಟ್ರಗಳ ವಿಮೋಚನೆಗಾಗಿ ಕ್ಯೂಬಾ ಕ್ರಾಂತಿಗಾಗಿ ಜೀವವನ್ನೇ ಒತ್ತೆ ಇಟ್ಟು ಹೋರಾಡಿದ ಈ ಸಂಗಾತಿಯ ಬಗ್ಗೆ ಯಾರಿಗೆ ತಾನೆ ಪ್ರೀತಿ ಇರಲಾರದು...? ಅದರಲ್ಲೂ ಯುವಜನರಿಗೆ... ಕೊಯಮತ್ತೂರು ಸಿಪಿಐ(ಎಂ) ಮಹಾಧಿವೇಶನದ ರ್‍ಯಾಲಿ/ಬಹಿರಂಗಸಭೆ ಸಭೆಯಲ್ಲಿ ಚಿತ್ರಗಳು, ಪೋಸ್ಟರ್‌ಗಳು, ಟೀ ಶರ್ಟ್‌ಗಳನ್ನು ಮುಗಿಬಿದ್ದು ಕೊಳ್ಳುತ್ತಿದ್ದರು. ಇದೇ ತೋರಿಸುತ್ತದೆ. ಸಾವಿರಾರು ಮೈಲಿಗಳಾಚೆಗಿನ ಈ ಸಂಗಾತಿಯ ಬಗೆಗಿನ ಅಭಿಮಾನ ಎಂಥದ್ದು ಎಂಬುದನ್ನು....

ಹಿಂದುಳಿದ ವರ್ಗಗಳ ಮೀಸಲಾತಿ ಎತ್ತಿಹಿಡಿದ ಸುಪ್ರೀಂಕೋರ್ಟ್

ಎಪ್ರಿಲ್ 10ರಂದು ಪ್ರಕಟವಾದ ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪು 93 ನೆ ಸಂವಿಧಾನ ತಿದ್ದುಪಡಿಯನ್ನು ಎತ್ತಿ ಹಿಡಿಯುವ ಮೂಲಕ 2006ರ ಉನ್ನತ ಶಿಕ್ಷಣದಲ್ಲಿ ಒಬಿಸಿ ಮೀಸಲಾತಿ ಶಾಸನದ ಅನುಷ್ಠಾನಕ್ಕೆ ಹಾದಿ ಮಾಡಿಕೊಟ್ಟಿದೆ. ಇನ್ನಾದರೂ ಯಾವುದೇ ವಿಳಂಬವಿಲ್ಲದೆ, ನೆಪಗಳನ್ನೊಡ್ಡದೆ ಒಬಿಸಿ ಮೀಸಲಾತಿ ಜಾರಿಯಾಗಬೇಕು .

ಕೇಂದ್ರ ಸರಕಾರದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗ(ಒಬಿಸಿ)ಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ 27ಶೇ. ಮೀಸಲಾತಿ ನೀಡುವ ಕಾನೂನನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಎತ್ತಿಹಿಡಿದಿದೆ. ಮುಖ್ಯ ನ್ಯಾಯಮೂರ್ತಿ ಗಳಾದ ಕೆ.ಜಿ. ಬಾಲಕೃಷ್ಣನ್ ನೇತೃತ್ವದ ಐವರು ನ್ಯಾಯಾಧೀಶರಿದ್ದ ಸಂವಿಧಾನ ಪೀಠದ ಸರ್ವಸಮ್ಮತ ತೀರ್ಪು ಈ ಮೀಸಲಾತಿ ಈ ವಿಭಾಗಗಳಲ್ಲಿನ ಸಂಪನ್ನರಿಗೆ ಅಥವಾ 'ಕೆನೆ ಪದರ'ಕ್ಕೆ ಅನ್ವಯಿಸಬಾರದು ಎಂದೂ ಹೇಳಿದೆ. ಈ ತೀರ್ಪನ್ನು ದೇಶದ ಪ್ರಜಾಪ್ರಭುತ್ವ ವಾದಿಗಳೆಲ್ಲರೂ ಸ್ವಾಗತಿಸಿದ್ದಾರೆ.

ಎರಡು ವರ್ಷಗಳ ಕೆಳಗೆ ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳಾದ ಅರ್ಜುನ್ ಸಿಂಗ್ ಐಐಟಿಗಳು, ಐಐಎಂಗಳು, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇತ್ಯಾದಿ ಕೇಂದ್ರ ಸರಕಾರದ ಉನ್ನತ ಶಿಕ್ಷಣದ ಸಂಸ್ಥೆಗಳಲ್ಲಿ ಒಬಿಸಿ ಗಳಿಗೆ ಮೀಸಲಾತಿ ನೀಡಲಾಗುವುದು ಎಂದು ಪ್ರಕಟಿಸಿದಾಗ ದೇಶದ ಉನ್ನತ ಶಿಕ್ಷಣ ಕ್ಷೇತ್ರ ಇನ್ನೇನು ಮುಳುಗಿಯೇ ಹೋಗುತ್ತದೆ ಎಂದು ಕೆಲವರು ದೊಡ್ಡ ಗುಲ್ಲೆಬ್ಬಿಸಿದರು, ಮಾಧ್ಯಮಗಳ ಕುಮ್ಮಕ್ಕಿನಿಂದ ದಿಲ್ಲಿಯ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳ ಒಂದು ವಿಭಾಗ ಮೀಸಲಾತಿಯ ವಿರುದ್ಧ ಬೀದಿಗಿಳಿಯಿತು. ಆ ಸಂದರ್ಭದಲ್ಲಿ ನಮ್ಮ ಸಮಾಜದಲ್ಲಿ ಇನ್ನೂ ಇರುವ ಸಾಮಾಜಿಕ ಅಸಮಾನತೆಯ ಒಂದು ಕರಾಳ ಮುಖ ಬಯಲಿಗೆ ಬಂತು. ಟಿವಿ ವಾಹಿನಿಗಳಲ್ಲಿ ಮತ್ತೆ-ಮತ್ತೆ ಬಿತ್ತರಿಸಿದ ಬೀದಿಯಲ್ಲಿ ಕಸ ಗುಡಿಸುವುದು, ಸಿಗ್ನಲ್‌ಗಳಲ್ಲಿ ನಿಂತ ಕಾರುಗಳ ಗಾಜುಗಳನ್ನು ಸ್ವಚ್ಛಗೊಳಿಸುವುದು, ಷೂ ಪಾಲೀಶ್ ಮಾಡುವುದು ಮುಂತಾದ ಈ ವಿದ್ಯಾರ್ಥಿಗಳ ಸಾಂಕೇತಿಕ ಕ್ರಿಯೆಗಳು, ಕೆಲವು ಜನಗಳು (ಅಥವಾ ಜಾತಿಗಳು?) 'ನಿಕೃಷ್ಟ' ಕೆಲಸಗಳಿಗೇ ಲಾಯಕ್ಕು, ಇಂಜಿನಿಯರಿಂಗ್, ವೈದ್ಯಕೀಯ ಮುಂತಾದ 'ಗೌರವಸ್ಥ' ಕೆಲಸಗಳು 'ಸಹಜ'ವಾಗಿ ತಮಗೇ ಮೀಸಲಾಗಿರಬೇಕು ಎಂಬ ಸಂಕೇತವನ್ನು ನೀಡುತ್ತಿವೆಯೇ ಎಂದು ಆಗ ಒಬ್ಬ ಸಮಾಜವಿಜ್ಞಾನಿ ಉದ್ಗರಿಸಿದ್ದರು.


93ನೇ ತಿದ್ದುಪಡಿ

ಸುಪ್ರಿಂ ಕೋರ್ಟಿನ ಕೆಲವು ತೀರ್ಪುಗಳು ಮೀಸಲಾತಿಗಳು ಸರಕಾರೀ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರಲು ಸಾಧ್ಯ ಎಂದು ಹೇಳಿದ್ದ ಹಿನ್ನೆಲೆಯಲ್ಲಿ ಸಂಸತ್ತು ಈ ಬಗ್ಗೆ ವಿವರವಾಗಿ ಚರ್ಚೆ ನಡೆಸಿದಾಗ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಮೀಸಲಾತಿಯನ್ನು ವಿಸ್ತರಿಸಬೇಕು ಎಂಬ ಒಂದು ಅಪರೂಪದ ಒಮ್ಮತ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇರುವುದು ಕಂಡು ಬಂತು. ಈ ಆಧಾರದಲ್ಲಿ ಜನವರಿ 2006ರಲ್ಲಿ 93ನೇ ಸಂವಿಧಾನ ತಿದ್ದುಪಡಿಯನ್ನು ಸಂಸತ್ತು ಅಂಗೀಕರಿಸಿತು. ಈ ತಿದ್ದುಪಡಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಮೀಸಲಾತಿಗಳ ಪ್ರಮಾಣವನ್ನು ಕುರಿತು ಕಾನೂನುಗಳನ್ನು ರಚಿಸಲು ಅನುವು ಮಾಡಿ ಕೊಡುವ ಕಲಮು 15(5)ನ್ನು ಸಂವಿಧಾನಕ್ಕೆ ಸೇರಿಸಿತು.

ಕಾನೂನು ರಚಿಸಿದ ಮೇಲೆ ಅದಕ್ಕನುಗುಣವಾಗಿ ಕ್ರಮಗಳನ್ನು ಕೈಗೊಳ್ಳುವುದು ಸರಕಾರದ ಕರ್ತವ್ಯವಾಗುತ್ತದೆ. ಅರ್ಜುನ್ ಸಿಂಗ್ ರವರ ಪ್ರಕಟಣೆ ಎಡ ಪಕ್ಷಗಳ ಬೆಂಬಲ ಹೊಂದಿದ್ದ ಯುಪಿಎ ಸರಕಾರದ ಈ ಆಶಯವನ್ನು ಬಿಂಬಿಸಿತ್ತು. ಕೇಂದ್ರೀಯ ಶಿಕ್ಷಣ ಸಂಸ್ಥೆಗಳು(ಪ್ರವೇಶದಲ್ಲಿ ಮೀಸಲಾತಿ) ಶಾಸನ, 2006 ಅಂಗೀಕಾರವಾದದ್ದು ಈ ಹಿನ್ನೆಲೆಯಲ್ಲಿ. ಆದರೆ 93ನೇ ತಿದ್ದುಪಡಿ ತಂದಾಗ ಕೇಳದ ಬೊಬ್ಬೆ ಈಗ ಕೇಳಬರಲಾರಂಭಿಸಿತು. 93ನೆ ತಿದ್ದುಪಡಿಯನ್ನು ಮತ್ತು ಈ ಶಾಸನವನ್ನು ಹಲವರು ಸುಪ್ರಿಂ ಕೋರ್ಟಿನಲ್ಲಿ ಪ್ರಶ್ನಿಸಿ ಅರ್ಜಿ ಸಲ್ಲಿಸಿದರು. ಮಾರ್ಚ್ 2007ರಲ್ಲಿ ಸುಪ್ರಿಂ ಕೋರ್ಟ್ ಮಧ್ಯಂತರ ಆದೇಶ ಹೊರಡಿಸಿ 2007-08ರ ಶೈಕ್ಷಣಿಕ ವರ್ಷದಲ್ಲಿ ಈ ಕಾನೂನನ್ನು ಜಾರಿಗೆ ತರದಂತೆ ನಿರ್ಬಂಧ ಹಾಕಿತು.

ಹೊಲಸು ಅಪಪ್ರಚಾರ

ಸಮಾನತೆಯತ್ತ ಸಾಗಬೇಕಾದರೆ ದುರ್ಬಲ ವಿಭಾಗಗಳಿಗೆ ಮೀಸಲಾತಿ ನೀಡಬೇಕು ಎಂಬುದು ದೇಶದ ಸ್ವಾತಂತ್ರ್ಯ ಆಂದೋಲನದ ಅವಧಿಯಲ್ಲಿ ವಿಕಾಸಗೊಂಡ ಒಂದು ವಿಚಾರ. ಅದಕ್ಕನುಗುಣ



ವಾಗಿ ಭಾರತ ಸ್ವತಂತ್ರವಾಗಿ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಅಂಗೀಕರಿಸಿದಾಗ ಮೀಸಲಾತಿ ಎಂಬುದು ನಮ್ಮ ಪ್ರಮುಖ ನೀತಿಗಳಲ್ಲಿ ಒಂದಾಯಿತು. ಆದರೂ ನಾಲ್ಕು ದಶಕಗಳ ನಂತರ ಮಂಡಲ ಆಯೋಗದ ಶಿಫಾರಸುಗಳನ್ನು ವಿ ಪಿ ಸಿಂಗ್ ಸರಕಾರ ಜಾರಿಗೆ ತರಲು ನಿರ್ಧರಿಸಿದಾಗ, ಅದರ ಮೊದಲು ಬಿಹಾರದಲ್ಲಿ ಕರ್ಪೂರಿ ಠಾಕುರ್ ಸರಕಾರ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಜಾರಿಗೆ ತರಲು ಹೊರಟಾಗ ಮೀಸಲಾತಿಯ ಪರಿಕಲ್ಪನೆಗೇ ವಿರೋಧಗಳು ವ್ಯಕ್ತಗೊಂಡವು. ಇವು ಖಂಡಿತವಾಗಿಯೂ ಪ್ರಗತಿ-ವಿರೋಧಿ,ಜಾತಿವಾದಿ ನಿಲುವನ್ನು ತೋರುವ ವಿರೋಧಗಳು. ಸ್ವಾತಂತ್ರ್ಯ ಗಳಿಸಿದ 60 ವರ್ಷಗಳ ನಂತರ ಉನ್ನತ ಶಿಕಣ ಸಂಸ್ಥೆಗಳಲ್ಲಿ ಒಬಿಸಿ ಮೀಸಲಾತಿ ತರಲು ಹೊರಟಾಗ ವ್ಯಕ್ತಗೊಂಡ ವಿರೋಧಗಳೂ ಅದೇ ಪ್ರತಿಗಾಮಿ ಸ್ವರೂಪವನ್ನು ಪ್ರದರ್ಶಿಸಿದವು. ಅವು ದಲಿತರು, ಇತರ ಶೋಷಿತ, ವಂಚಿತ ಜನವಿಭಾಗಗಳ ವಿರುದ್ಧ ಗುರಿಯಿಟ್ಟ ಹೊಲಸು, ದುಷ್ಟ ಪ್ರಚಾರಗಳಾಗಿ ಬಿಟ್ಟವು.

ಈ ಒಬಿಸಿ ಮೀಸಲಾತಿ- ವಿರೋಧಿಗಳೂ ತಮ್ಮ 'ಪೂರ್ವಜ'ರಂತೆ ಹಲವು ಮಿಥ್ಯೆಗಳನ್ನು ಪಸರಿಸಿಲು ಪ್ರಯತ್ನಿಸಿದರು. ಮೀಸಲಾತಿಗಳು ಯೋಗ್ಯತೆ ಮತ್ತು ದಕ್ಷತೆಗೆ ಮಾರಕ, ಅನರ್ಹ ಡಾಕ್ಟರುಗಳು, ಇಂಜಿನಿಯರುಗಳು ತಯಾರಾಗುತ್ತಾರೆ, ಇದು ವೋಟ್ ಬ್ಯಾಂಕ್ ರಾಜಕೀಯ ಎಂಬಿತ್ಯಾದಿ ಹಳಸಲು ವಾದಗಳು ಮತ್ತೆ ಹರಿದಾಡಲಾರಂಭಿಸಿದವು. ವಿಚಿತ್ರವೆಂದರೆ, 1990ರಲ್ಲಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಪ್ರಕಟಿಸಿದಾಗ ಅದರ ವಿರುದ್ಧ ಕಿರುಚಾಡಿದವರು, ಮೀಸಲಾತಿಯನ್ನು ಮೊದಲು ಶಿಕ್ಷಣದಲ್ಲಿ ತರಬೇಕು, ಆ ಮೂಲಕ ಸಾಮಾಜಿಕವಾಗಿ ದಮನಕ್ಕೊಳಗಾದವರನ್ನು, ವಂಚಿತರನ್ನು ಉದ್ಯೋಗಗಳಿಗೆ ಅರ್ಹಗೊಳಿಸಬೇಕು ಎಂಬ ವಾದ ಹೂಡಿದ್ದರು. ಆದರೆ ಈಗ ಅಂತದ್ದೇ ಜನಗಳು ಶಿಕ್ಷಣದಲ್ಲಿ ಮೀಸಲಾತಿಯನ್ನು ವಿರೋಧಿಸಿದರು. ಆದರೆ ಅದೇ ಮಂದಿಗೆ ಖಾಸಗೀ ಶಿಕ್ಷಣ ಸಂಸ್ಥೆಗಳ ಕ್ಯಾಪಿಟೇಶನ್ ಶುಲ್ಕ ವ್ಯವಸ್ಥೆಯಲ್ಲಿ ದಡ್ಡ ಶ್ರೀಮಂತರು ಪ್ರವೇಶವನ್ನು ಖರೀದಿಸುವ ಬಗ್ಗೆ, ಅಂತಹ ಸಂಸ್ಥೆಗಳಲ್ಲಿ ತಯಾರಾಗುವ ಡಾಕ್ಟರುಗಳು, ಇಂಜಿನಿಯರುಗಳ ಯೋಗ್ಯತೆ, ಅರ್ಹತೆಗಳ ಬಗ್ಗೆ ಯಾವ ತಕರಾರೂ ಇರಲಿಲ್ಲ!

ಪ್ರಮಾಣ, ಗುಣಮಟ್ಟ ಮತ್ತು ನ್ಯಾಯ

ಈ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ ಆಗ ಸಿಪಿಐ(ಎಂ) ಮುಖಂಡರಾದ ಸೀತಾರಾಂ ಯೆಚೂರಿಯವರು ಸ್ವಾತಂತ್ರ್ಯದ ನಂತರ ಭಾರತದ ಶಿಕ್ಷಣ ರಂಗವನ್ನು ಪ್ರಮಾಣ, ಗುಣಮಟ್ಟ ಮತ್ತು ನ್ಯಾಯ ಈ ಮೂರರಲ್ಲಿ ಒಂದು ಸಮತೋಲನವನ್ನು ಕಂಡುಕೊಳ್ಳುವ ಒಂದು ಶಾಶ್ವತ ತ್ರಿಕೋನ ಬಾಧಿಸುತ್ತಿದೆ ಎಂದಿದ್ದರು. ಎಲ್ಲರಿಗೂ ಶಿಕ್ಷಣ ಎಂಬ ಗುರಿ ಸಾಧನೆಯಾಗುವವರೆಗೂ ಈ ಪ್ರಶ್ನೆಯೂ ಇರುತ್ತದೆ. ಒಟ್ಟು ಪ್ರಮಾಣವೇ ಕಡಿಮೆಯಾಗುತ್ತಿರುವಾಗ ವಿವಿಧ ವಿಭಾಗಗಳು ಅದರಲ್ಲಿ ಪಾಲಿಗಾಗಿ ಸ್ಪರ್ಧಿಸುತ್ತಿರುವಾಗ ಮೀಸಲಾತಿಗಳು ವಿವಾದಾತ್ಮಕವಾಗಿಯೇ ಉಳಿಯುತ್ತವೆ.

ಮೀಸಲಾತಿಗಳು ನ್ಯಾಯದ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತವೆ, ಜತೆಗೆ ಪ್ರಮಾಣ ಮತ್ತು ಗುಣಮಟ್ಟದ ಪ್ರಶ್ನೆಗಳನ್ನೂ ಎತ್ತಿಕೊಳ್ಳಬೇಕಾಗುತ್ತದೆ. ಪ್ರಮಾಣದ ಪ್ರಶ್ನೆಯನ್ನು ಎತ್ತಿಕೊಳ್ಳಲು ಸರಕಾರ ಒದಗಿಸುವ ಶಿಕ್ಷಣ ಸೌಲಭ್ಯಗಳನ್ನು ವಿಸ್ತರಿಸಬೇಕಾದ ತುರ್ತು ಅಗತ್ಯವಿದೆ ಹಾಗೂ ಗುಣಮಟ್ಟದ ಪ್ರಶ್ನೆಯನ್ನು ಎದುರಿಸಲು ಉನ್ನತ ಶಿಕ್ಷಣದ ಮೂಲರಚನೆಗೆ ಮಾಡುವ ಖರ್ಚಿನ ಬಾಬ್ತನ್ನು ಹೆಚ್ಚಿಸಬೇಕಾಗುತ್ತದೆ. ಅಂದರೆ ಉನ್ನತ ಶಿಕ್ಷಣದ ವಿಸ್ತಾರಗೊಳ್ಳುತ್ತಿರುವ ಅಗತ್ಯಗಳನ್ನು ಪೂರೈಸಲು ಸರಕಾರ ಹೊಸ ಕಾಲೇಜುಗಳು, ವಿಶ್ವ ವಿದ್ಯಾಲಯಗಳು, ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಮುಂದೆ ಬರಬೇಕು, ಹಾಗೂ ಶುಲ್ಕ ಗಳನ್ನು ವಿಪರೀತವಾಗಿ ಏರಿಸುವ ಪ್ರವೃತ್ತಿಯನ್ನು ನಿಲ್ಲಿಸಬೇಕು.

ಈ ಹಿನ್ನೆಲೆಯಲ್ಲಿಯೇ ಪ್ರಜಾಪ್ರಭುತ್ವವಾದಿಗಳು ಶಿಕ್ಷಣಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಕನಿಷ್ಠ 6 ಶೇ. ವನ್ನು ಖರ್ಚುಮಾಡಬೇಕು ಎಂಬ ಬೇಡಿಕೆ ಇಟ್ಟಿರುವುದು.

ಯೆಚುರಿಯವರೆಂದಂತೆ ಶಿಕ್ಷಣ ರಂಗದ 'ಶಾಶ್ವತ ತ್ರಿಕೋನ'ದಲ್ಲಿ ಸಮತೋಲನ ಬರುವವರೆಗೆ ಸಮಾನತೆಯ ಪ್ರಶ್ನೆಯನ್ನು ಪಕ್ಕದಲ್ಲಿಟ್ಟು ಬಿಡಲು ಸಾಧ್ಯವಿಲ್ಲ. ಪ್ರಮಾಣ, ಗುಣಮಟ್ಟ ಮತ್ತು ಸಮಾನತೆ ಪರಸ್ಪರ ಸಂಘರ್ಷದಲ್ಲಿರುವಂತವು ಎಂದು ಬಿಂಬಿಸಲು ಪಟ್ಟಭದ್ರ ಹಿತಾಸಕ್ತಿಗಳು ದುರುದ್ದೇಶಪೂರ್ವಕ ವಾಗಿಯೇ ಪ್ರಯತ್ನಿಸುತ್ತವೆ. ಆದರೆ ವಾಸ್ತವವಾಗಿ ಅವು ಪರಸ್ಪರ ಪೂರಕವಾದ ಅಂಶಗಳು. ಉನ್ನತ ಶಿಕ್ಷಣದಲ್ಲಿ 27ಶೇ. ಒಬಿಸಿ ಮಿಸಲಾತಿಯನ್ನು ಒದಗಿಸುವ 93ನೇ ಸಂವಿಧಾನ ತಿದ್ದುಪಡಿಗೆ ಸಂಸತ್ತಿನಲ್ಲಿ ಸಾರ್ವತ್ರಿಕ ಬೆಂಬಲ ದೊರೆತಿದೆ. ಈಗ ನ್ಯಾಯಾಂಗವೂ ಅದನ್ನು ಎತ್ತಿ ಹಿಡಿದಿದೆ.

ಸುಪ್ರಿಂ ಕೋರ್ಟ್ ತೀರ್ಪು

93 ನೇ ತಿದ್ದುಪಡಿಯನ್ನು ಎತ್ತಿ ಹಿಡಿಯುವ ಮೂಲಕ ದೇಶದ ಸರ್ವೋಚ್ಚ ನ್ಯಾಯಾಲಯ 2006ರ ಒಬಿಸಿ ಮೀಸಲಾತಿ ಶಾಸನದ ಅನುಷ್ಠಾನಕ್ಕೆ ಹಾದಿ ಮಾಡಿಕೊಟ್ಟಿದೆ. ತೀರ್ಪಿನಲ್ಲಿ ದೇಶದ ಮುಖ್ಯ ನ್ಯಾಯಾಧೀಶರು ಹೀಗಂದಿದ್ದಾರೆ: 'ಮೀಸಲಾತಿ ಸಮಾನತೆಯ ಸತ್ವವನ್ನು ಉಳಿಸಿಕೊಳ್ಳುವ ಮತ್ತು ಪ್ರೋತ್ಸಾಹಿಸುವ ಹಲವು ಸಾಧನಗಳಲ್ಲಿ ಒಂದು, ಈ ಮೂಲಕ ಪ್ರತಿಕೂಲ ಪರಿಸ್ಥಿತಿಗಳಲ್ಲಿರುವ ಗುಂಪುಗಳನ್ನು ನಾಗರಿಕ ಜೀವನದ ಮುಂಚೂಣಿಗೆ ತರಲು ಸಾಧ್ಯ. ಅಸಮಾನತೆಯ ಬೇಲಿಗಳನ್ನು ತೆಗೆದು ಹಾಕಲು ಮತ್ತು ವಿಭಿನ್ನ ಸಮುದಾಯಗಳು ಸಂವಿಧಾನ ಭರವಸೆ ನೀಡಿರುವ ಸ್ವಾತಂತ್ರ್ಯಗಳನ್ನು ಅನುಭವಿಸಲು ಮತ್ತು ಸೌಲಭ್ಯಗಳಲ್ಲಿ ಪಾಲು ಪಡೆಯಲು ಸಾಧ್ಯವಾಗುವಂತೆ ಸಕಾರಾತ್ಮಕ ಕ್ರಮಗಳನ್ನು ಪ್ರೋತ್ಸಾಹಿಸುವುದು ಪ್ರಭುತ್ವದ ಕರ್ತವ್ಯವೂ ಆಗಿದೆ.'

ಮುಂದುವರೆದು ಅವರು 'ಶಿಕ್ಷಣದ ಸಂದರ್ಭ ದಲ್ಲಿ ಜ್ಞಾನ, ಮಾಹಿತಿ ಮತ್ತು ವಿಚಾರಗಳನ್ನು ಹಂಚಿಕೊಳ್ಳುವುದನ್ನು ಪ್ರೋತ್ಸಾಹಿಸುವ ಮತ್ತು ಭಾರತದ ವಿಭಿನ್ನವಾದ ವಿಶಾಲವಾದ ವರ್ಗಗಳಲ್ಲಿ ಕಲಿಕೆಯನ್ನು ಉತ್ತಮಗೊಳಿಸುವ ಯಾವುದೇ ಕ್ರಮ ಉತ್ತೇಜನೆಗೆ ಅರ್ಹವಾಗಿದೆ. ಆಧುನಿಕ ಜಗತ್ತು ಮತ್ತು ಅದರ ಕ್ಲಿಷ್ಟತೆಗಳನ್ನು ಹಾಗೂ ಪ್ರಕ್ಷುಬ್ಧ ಸಮಸ್ಯೆಗಳನ್ನು ಎದುರಿಸಲು ಶಿಕ್ಷಣ ಅಗತ್ಯ ಮತ್ತು ಅದು ಕೆಲವೇ ಭಾಗ್ಯವಂತರ ಪ್ರಯೋಜನದ ಗೂಡಾಗಿ ಉಳಿಯಬಾರದು. ಮೀಸಲಾತಿ, ಇಂತಹ ಬೆಂಬಲವಿಲ್ಲದಿದ್ದರೆ ಯಾವ ವ್ಯಕ್ತಿಗಳಿಗೆ ವಿಶ್ವವಿದ್ಯಾಲಯ ಶಿಕ್ಷಣ ಎಂದೆಂದೂ ಕೇವಲ ಕನಸಾಗಿಯೇ ಉಳಿಯುತ್ತದೆಯೋ, ಎಂದೂ ಈಡೇರ ಲಾರದಂತಹುದಾಗುತ್ತದೆಯೋ ಅಂತಹ ವ್ಯಕ್ತಿಗಳಿಗೆ, ಹೆಚ್ಚಿನ ಪ್ರಯೋಜನ ಒದಗಿಸುತ್ತದೆ' ಎಂದಿದ್ದಾರೆ.

ಆದರೆ ಕೆನೆಪದರವನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಂದ ಹೊರಗಿಡಬೇಕು, ಪರಿಶಿಷ್ಟ ಜಾತಿ/ಬುಡಕಟ್ಟುಗಳ ಮಿಸಲಾತಿಗೆ ಇದು ಅನ್ವಯಿಸುವುದಿಲ್ಲ ಎಂದು ತೀರ್ಪು ಹೇಳುತ್ತದೆ.

ತಕ್ಷಣವೇ ಜಾರಿಗೆ ಬರಲಿ

ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿರುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜೂನ್ 2007 ರಿಂದ ಈ ಶಾಸನದ ಪ್ರಕಾರ ಶೇ. 27 ಒಬಿಸಿ ಮೀಸಲಾತಿಯನ್ನು ಅನುಷ್ಠಾನಗೊಳಿಸುವುದಾಗಿ ನಿರ್ಧರಿಸಲಾಗಿತ್ತು. ಇದರಿಂದಾಗಿ ಮೀಸಲಾತಿ ಇಲ್ಲದವರಿಗೆ ಇರುವ ಸೀಟುಗಳ ಸಂಖ್ಯೆಯಲ್ಲಿ ಕಡಿತವಾಗದಂತೆ ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿರುವ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸೌಕರ್ಯಗಳನ್ನು, ಸೀಟುಗಳನ್ನು ಹೆಚ್ಚಿಸಲಾಗುವುದು ಎಂದೂ ಪ್ರಕಟಿಸಲಾಗಿತ್ತು. ಆದರೂ ಮೀಸಲಾತಿ-ವಿರೋಧಿಗಳು ಚಳುವಳಿ ನಿಲ್ಲಿಸದೆ, ಸುಪ್ರಿಂ ಕೋರ್ಟಿಗೆ ಹೋಗಿದ್ದರಿಂದ ಈ ಶಾಸನ ಜಾರಿಯಾಗುವಲ್ಲಿ ಸ್ವಾತಂತ್ರ್ಯದ ಅರವತ್ತು ವರ್ಷಗಳ ನಂತರವೂ ಮತ್ತೂ ಒಂದು ವರ್ಷದ ವಿಳಂಬವಾಗಿದೆ.

ಈಗ ಸುಪ್ರಿಂ ಕೋರ್ಟ್ ತೀರ್ಪಿನ ನಂತರ ಇನ್ನು ಯಾವುದೇ ವಿಳಂಬವಿಲ್ಲದೆ, ನೆಪಗಳನ್ನೊಡ್ಡದೆ ಒಬಿಸಿ ಮೀಸಲಾತಿ ಜಾರಿಯಾಗಬೇಕು ಎಂದು ದೇಶದ ಪ್ರಗತಿಪರರೆಲ್ಲರೂ ಆಗ್ರಹಿಸುತ್ತಿದ್ದಾರೆ.

ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದ ಜನಸಾಮಾನ್ಯರು ಬಳಲುತ್ತಿದ್ದಾರೆ. ಜೀವನದಲ್ಲಿ ಯಾವಾಗಲೋ ಒಮ್ಮೆ ಬಳಸುವ ಕಂಪ್ಯೂಟರ್, ಕಾರು ಇತ್ಯಾದಿಗಳ ಬೆಲೆ ಕಡಿಮೆಯಾಗುತ್ತಿದೆ. ಆದರೆ, ದಿನನಿತ್ಯ ಬಳಸುವ ವಸ್ತುಗಳ ಬೆಲೆ ಏರುತ್ತಲೇ ಇದೆ. ಬೆಳೆದವರಿಗಾದರೂ ಸಿಗುತ್ತದೆಯೇ? ಅದೂ ಇಲ್ಲ

ಎಣೆ ಇಲ್ಲದ ಬೆಲೆಯೇರಿಕೆ ಹೊಣೆಯಿಲ್ಲದ ಸರ್ಕಾರ

ಬಾಲಕೃಷ್ಣ ಶೆಟ್ಟಿ

ನಮ್ಮ ದೇಶದಲ್ಲಿ ವಿಮಾನ ಪ್ರಯಾಣ, ಕಾರು, ಟಿ.ವಿ. ಕಂಪ್ಯೂಟರ್‌ಗಳ ಬೆಲೆ ಕಡಿಮೆಯಾಗುತ್ತಿದೆ. ಆದರೆ ದಿನ ನಿತ್ಯ ಬಳಸುವ ಅಕ್ಕಿ, ಗೋಧಿ, ಸಕ್ಕರೆ, ಎಣ್ಣೆ, ಬೇಳೆಕಾಳು, ತರಕಾರಿ, ಹಣ್ಣು, ಪೆಟ್ರೋಲ್ ಡೀಸೆಲ್ ಬೆಲೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಬಿಜೆಪಿ ನೇತೃತ್ವದ ಸರಕಾರವೇ ಇರಲಿ, ಕಾಂಗ್ರೆಸ್ ನೇತೃತ್ವದ ಸರಕಾರವೇ ಇರಲಿ, ಬೆಲೆ ಏರಿಕೆಗೆ ತಡೆ ಇಲ್ಲ. ಕೇವಲ 1 ವರ್ಷದಲ್ಲಿ ಅಗತ್ಯ ವಸ್ತುಗಳ ಬೆಲೆ ಎಷ್ಟು ಹೆಚ್ಚಾಗಿದೆ ಎಂಬುದಕ್ಕೆ ಪಟ್ಟಿ ಇಲ್ಲಿದೆ.

ಬೆಂಗಳೂರಿನಲ್ಲಿ (ರೂ.ಗಳಲ್ಲಿ)		ಮಾರ್ಚ್ 2006ರಲ್ಲಿ	ಇಂದಿನ ದರ
ಅಕ್ಕಿ	1 ಕೇಜಿಗೆ	14.50	19ರಿಂದ 22
ಗೋದಿ	1 ಕೇಜಿಗೆ	12.00	17.00
ಜೋಳ	1 ಕೇಜಿಗೆ	10.00	15.00
ತೊಗರಿಬೇಳೆ	1 ಕೇಜಿಗೆ	26.00	42 ರಿಂದ 46
ಕಡಲೆ ಬೇಳೆ	1 ಕೇಜಿಗೆ	26.50	38 ರಿಂದ 44
ಎಣ್ಣೆ	1 ಕೇಜಿಗೆ	45ರಿಂದ 48	85 ರಿಂದ 90
ಬೀನ್ಸ್	1 ಕೇಜಿಗೆ	12 ರಿಂದ 16	30 ರಿಂದ 35

ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮೀನು, ಮಾಂಸದ ವಾಸನೆ ಬಡ ಜನರ ಮೂಗಿಗೂ ತಲುಪುವಂತಿಲ್ಲ. ಅಷ್ಟೊಂದು ದರ!



ಇನ್ನು ಪೆಟ್ರೋಲ್, ಡೀಸೆಲ್ ದರ, ಹಿಂದಿನ ವಾಜಪೇಯಿಯವರ ಎನ್.ಡಿ.ಎ ಸರಕಾರ ಅನುಸರಿಸಿದ ನೀತಿ ಇಂದಿಗೂ ಮುಂದುವರಿಯುತ್ತಿದೆ. 1996ರಲ್ಲಿ ಪೆಟ್ರೋಲ್ ಲೀಟರ್ ಒಂದಕ್ಕೆ ರೂ.24.97, ಈಗ ಅದು ರೂ.52.86. ಶೇ.100ಕ್ಕಿಂತಲೂ ಜಾಸ್ತಿ! ಡೀಸೆಲ್ ಬೆಲೆ ಲೀಟರ್ ಒಂದಕ್ಕೆ ರೂ.9.33 ರಿಂದ 36.40 ಶೇ.400ರಷ್ಟು ಜಾಸ್ತಿ. ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳದಿಂದ ಸಾಗಾಣಿಕೆ ದರ ಇತ್ಯಾದಿಗಳ ಮೇಲೆ ಪ್ರಭಾವ ಬೀರಿ, ಎಲ್ಲಾ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚುತ್ತದೆ.

ಕಚ್ಚಾ ತೈಲದ ಬೆಲೆ ಹೆಚ್ಚಳವಾಗಿದೆಯೆಂಬ ನೆಪವೊಡ್ಡಿ, ಪೆಟ್ರೋಲ್, ಡೀಸೆಲ್ ಚಿಲ್ಲರೆ ದರವನ್ನು ಹೆಚ್ಚಿಸುವ ಕೇಂದ್ರ ಸರ್ಕಾರಕ್ಕೆ ಒಂದೇ ವರ್ಷದಲ್ಲಿ ತೆರಿಗೆ ರೂಪದಲ್ಲಿ 40.000 ಕೋಟಿ ರೂ. ಹೆಚ್ಚಳ ಬಂದಿದೆ ಎಂದರೆ ಈ ಸರ್ಕಾರಗಳು ಯಾರಿಗಾಗಿ ಕೆಲಸ ಮಾಡುತ್ತಿದೆ ಎಂದು ಯಾರಿಗಾದರೂ ಅರ್ಥವಾಗುತ್ತದೆ.

ಬೆಲೆ ಹೆಚ್ಚಳ ಯಾಕೆ?

ಇತ್ತೀಚಿನ ವರ್ಷಗಳಲ್ಲಿ ಬೆಲೆ ಹೆಚ್ಚಳಕ್ಕೆ ಪ್ರಮುಖ ಕಾರಣವೆಂದರೆ, 2003ರಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಜ್ಯಾರಿಗೆ ತಂದ, ಇಂದಿನ ಸರಕಾರವು ಮುಂದುವರಿಸುತ್ತಿರುವ ಮುಂಗಡ ವ್ಯಾಪಾರ ಪದ್ಧತಿ (future trading). ಎಡಪಕ್ಷಗಳ ಒತ್ತಾಯದ ನಂತರ ಅಕ್ಕಿ ಮತ್ತು ಗೋಧಿಯನ್ನು ಇದರಿಂದ ಹೊರಗಿಟ್ಟರೂ ಉಳಿದ ಕೃಷಿ ಉತ್ಪನ್ನಗಳು ಮುಂಗಡ ವ್ಯಾಪಾರಕ್ಕೆ ಒಳಪಟ್ಟಿದೆ.

ಮುಂಗಡ ವ್ಯಾಪಾರ ಎಂದರೆ ವಿದೇಶಿ ಕಂಪನಿಗಳಿಗೆ ಮತ್ತು ನಮ್ಮ ದೇಶದ ದೊಡ್ಡ ಕಂಪನಿಗಳಿಗೆ ಲಾಭ ಮಾಡಿಕೊಡುವುದು ಎಂದರ್ಥ. ಮುಂಗಡ ವ್ಯಾಪಾರದಲ್ಲಿ ದೈತ್ಯ ಕಂಪನಿಗಳು ನೇರವಾಗಿ ರೈತರ ಬಳಿ ಹೋಗಿ ಖರೀದಿ ಮಾಡಬಹುದು. ರೈತರು ಬೆಳೆ ಬೆಳೆಯುತ್ತಿರುವಾಗಲೇ ಅವರಿಗೆ ಮುಂಗಡ ಹಣ ನೀಡಿ ದರ ನಿಗದಿ ಮಾಡುತ್ತಾರೆ. ಬೆಳೆ ಬೆಳೆಯುತ್ತಲೇ ಕಟಾವು ಮಾಡಿ ನೇರವಾಗಿ ತಮ್ಮ ಗೋದಾಮುಗಳಿಗೆ ಕೊಂಡೊಯ್ಯುತ್ತಾರೆ. ಒಮ್ಮೆ ರೈತರ ಬಳಿ ಬೆಳೆ ಎಲ್ಲ ಖಾಲಿಯಾದ ನಂತರ ಜಗತ್ತಿನ ವಿವಿಧ ದೇಶಗಳಲ್ಲಿ ಎಲ್ಲಿ ಬೆಲೆ ಜಾಸ್ತಿ ಇದೆ ಎಂಬುದನ್ನು ಕಂಡುಕೊಂಡು ಅಲ್ಲಿಗೆ ಕೃಷಿ ಉತ್ಪನ್ನಗಳನ್ನು ರಫ್ತು ಮಾಡುತ್ತಾರೆ.

ಇದು ಒಂದು ರೀತಿಯಲ್ಲಿ ಬೆಲೆ ಹೆಚ್ಚಳಕ್ಕೆ ಕಾರಣವಾದರೆ ತಮ್ಮಲ್ಲಿರುವ ಅಗಾಧ ಪ್ರಮಾಣದ ಹಣದಿಂದ ಖರೀದಿ ಮಾಡಿದ ಉತ್ಪನ್ನಗಳನ್ನು ದಾಸ್ತಾನು ಮಾಡುವುದರ ಮೂಲಕ ಆಂತರಿಕ ಕೊರತೆಯನ್ನು ಸೃಷ್ಟಿಸುವುದರ ಮೂಲಕವೂ ದರವನ್ನು ಹೆಚ್ಚಿಸುತ್ತಾರೆ.

ಇಂತಹ ಕಂಪನಿಗಳಿಗೆ ಅನುಕೂಲವಾಗಲೆಂದೇ ಎ.ಪಿ.ಎಂ.ಸಿ ಕಾಯಿದೆಗೆ ತಿದ್ದುಪಡಿ ತರಲಾಗಿತ್ತು. ಇದರಲ್ಲಿ ಉದಾರೀಕರಣ ನೀತಿಯನ್ನು ಅನುಸರಿಸುವ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್)ನಂತಹ ಎಲ್ಲ ಪಕ್ಷಗಳೂ ಷಾಮೀಲಾಗಿವೆ. ಕೇಂದ್ರದಲ್ಲಿ ರುವ ಕಾಂಗ್ರೆಸ್ ಸರಕಾರ ಎಪಿಎಂಸಿ ಕಾಯಿದೆಗೆ ತಿದ್ದುಪಡಿ ತರಬೇಕೆಂದು ರಾಜ್ಯ ಸರಕಾರಗಳನ್ನು ಒತ್ತಾಯಿಸಿದರೆ, ಕರ್ನಾಟಕದಲ್ಲಿ ಆಡಳಿತದಲ್ಲಿದ್ದ ಬಿಜೆಪಿ-ಜೆಡಿ(ಎಸ್) ಮೈತ್ರಿ ಕೂಟವು ಇದನ್ನು ಜ್ಯಾರಿಗೊಳಿಸಿತು.

ಎಡ-ನೇತೃತ್ವದ ಸರಕಾರಗಳು ಮಾತ್ರವೇ ಈ ಕಾಯಿದೆಗೆ ತಿದ್ದುಪಡಿ ತಂದಿಲ್ಲ.

ಲಾಭದಾಯಕವಲ್ಲದ ಸಂಗ್ರಹ ಬೆಲೆ

ಸಂಕಷ್ಟದಲ್ಲಿರುವ ರೈತರಿಗೆ ಯೋಗ್ಯ ಬೆಂಬಲ ಬೆಲೆಯನ್ನು ನಿಗದಿಪಡಿಸಿ, ಬೆಳೆಯನ್ನು ಖರೀದಿಸಬೇಕಾದ್ದು ರೈತರ ಪರ ಚಿಂತನೆಯುಳ್ಳ ಸರಕಾರ ಮಾಡಬೇಕಾದ ಕೆಲಸ. ಆದರೆ ಕೇಂದ್ರ ಸರಕಾರವು ತನ್ನ ಕರ್ತವ್ಯದಿಂದ ದೂರ ಸರಿದಿದೆ. ಅತ್ಯಂತ ಕಡಿಮೆ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಮೂಲಕ ಖಾಸಗೀ ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಮಾತ್ರವಲ್ಲದೆ, ಭಾರತ ಆಹಾರ ನಿಗಮದ ಗೋದಾಮುಗಳನ್ನು ಖಾಸಗಿ ಕಂಪನಿಗಳು ಖರೀದಿಸಿದ ವಸ್ತುಗಳನ್ನು ದಾಸ್ತಾನು ಮಾಡಲು ಬಾಡಿಗೆಗೆ ಕೊಟ್ಟಿದೆ.



ಸಂಗ್ರಹ ಬೆಲೆಗೆ ದರ ಕಡಿಮೆ ನಿಗದಿಪಡಿಸಿರುವುದರಿಂದ ರೈತರು ತಮ್ಮ ಬೆಳೆಗಳನ್ನು ಸರಕಾರಿ ಏಜೆನ್ಸಿಗಳಿಗೆ ಮಾರುವ ಬದಲಾಗಿ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡುತ್ತಾರೆ. ಇದರಿಂದಲೂ ಬೆಲೆ ಏರಿಕೆಗೆ ಕಾರಣವಾಗುತ್ತದೆ.

ಸಬ್ಸಿಡಿ ಕಡಿತ

ಬೆಲೆ ಏರಿಕೆಗೆ ಇನ್ನೊಂದು ಪ್ರಮುಖ ಕಾರಣ ಸಬ್ಸಿಡಿ ಕಡಿತ. ಡಬ್ಲ್ಯು.ಟಿ.ಓ ನಿಬಂಧನೆಗಳಿಗೆ ತನ್ನನ್ನು ಮಾರಿಕೊಂಡ ಸರಕಾರವು ಕೃಷಿಗೆ, ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್)ಗೆ ನೀಡುತ್ತಿದ್ದ ಸಬ್ಸಿಡಿಯನ್ನು ಹಂತ ಹಂತವಾಗಿ ಅಗಾಧ ಪ್ರಮಾಣದಲ್ಲಿ ಕಡಿತ ಮಾಡಿದೆ. ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಿ ಖರೀದಿಸುವುದನ್ನು ಕಡಿತಗೊಳಿಸಿರುವ ಸರಕಾರವು ರೇಷನ್ ಪೂರೈಸಲು ರಾಜ್ಯಗಳಿಗೆ ನೀಡಲಾಗುತ್ತಿರುವ ಧಾನ್ಯಗಳ ಪ್ರಮಾಣವನ್ನು ತೀವ್ರವಾಗಿ ಕಡಿತಗೊಳಿಸಿದೆ. ಅದರ ಫಲವಾಗಿಯೇ ಬಿಪಿಎಲ್ ಕಾರ್ಡುಗಳ ವಿತರಣೆಯಲ್ಲಿ ಮಾನದಂಡವನ್ನು ಬದಲು ಮಾಡಲಾಗಿದೆ. ರೇಷನ್ ಅಂಗಡಿಗಳಲ್ಲಿ ನೀಡುತ್ತಿರುವ ಧಾನ್ಯಗಳ

ಹಣದುಬ್ಬರ ಎಂದರೇನು?

ಸರಳ ಭಾಷೆಯಲ್ಲಿ ಹೇಳುವುದಾದರೆ ಹಣದುಬ್ಬರ ಎಂದರೆ ಬೆಲೆಯೇರಿಕೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಅಗಾಧ ಪ್ರಮಾಣದ ಹಣವು ಕಡಿಮೆ ಪ್ರಮಾಣದ ವಸ್ತುಗಳನ್ನು ಬೆನ್ನಟ್ಟುವುದು. ಅಂದರೆ ಮಾರುಕಟ್ಟೆಯಲ್ಲಿ ವಸ್ತುಗಳು ಕಡಿಮೆ ಪ್ರಮಾಣದಲ್ಲಿರುತ್ತವೆ. ಆದರೆ ಹಣ ದೊಡ್ಡ ಪ್ರಮಾಣದಲ್ಲಿರುತ್ತದೆ. ಇದರಿಂದ ಬೆಲೆ ಏರಿಕೆ ಉಂಟಾಗುತ್ತದೆ. ಹಣದುಬ್ಬರವನ್ನು ಪರಿಗಣಿಸುವಾಗ ಯಾವುದೇ ಒಂದು ವಸ್ತುವನ್ನಾಗಲೀ, ಒಂದು ಪ್ರದೇಶದ ಬೆಲೆಯನ್ನಾಗಲೀ ಮಾತ್ರ ಗಣನೆಗೆ ತೆಗೆದುಕೊಳ್ಳದೇ ಇಡೀ ದೇಶದ ಬಹುತೇಕ ಎಲ್ಲಾ ವಸ್ತು ಮತ್ತು ಸೇವೆಗಳನ್ನು ಗಣನೆಗೆ ತೆಗೆದುಕೊಂಡು ಅದರ ಒಟ್ಟು ಬೆಲೆ ಏರಿಕೆಯನ್ನೇ ಹಣದುಬ್ಬರ ಎಂದು ಕರೆಯುತ್ತಾರೆ.

ಈ ಪುಟದ ಲೇಖನದಲ್ಲಿರುವ ಅಕ್ಕಿಯಿಂದ ಬೀನ್ಸ್‌ವರೆಗೆ 1 ಕೆ.ಜಿ ಪ್ರಮಾಣದ ಒಟ್ಟು ಬೆಲೆ ಮಾರ್ಚ್ 2006ರಲ್ಲಿ (ಕನಿಷ್ಠ ದರದಲ್ಲಿ) ರೂ.146 ಇತ್ತು. ಇಂದಿನ ದರದಲ್ಲಿ ಅದು 246 ರೂ. ಆಗುತ್ತದೆ. ಅಂದರೆ 7 ವಸ್ತುಗಳನ್ನು ಮಾತ್ರ ಪರಿಗಣಿಸಿ ಮಾರ್ಚ್ 2006ನ್ನು ಆಧಾರವಾಗಿಟ್ಟುಕೊಂಡರೆ ಈಗ ಶೇ.68.5ರಷ್ಟು ಬೆಲೆ ಏರಿಕೆ ಉಂಟಾಗಿದೆ.

ಅಂತೆಯೇ ಕೆಲವು ವಸ್ತುಗಳು, ಸೇವೆಗಳ ಬೆಲೆ ಕೆಲವು ಪ್ರದೇಶಗಳಲ್ಲಿ ಕಡಿಮೆಯಾಗಿರಬಹುದು. ಉದಾಹರಣೆಗೆ ವಿಮಾನ ಪ್ರಯಾಣ (ಸೇವೆ) ಕಾರು, ಟಿ.ವಿ, ಕಂಪ್ಯೂಟರ್ (ವಸ್ತು) ಬೆಲೆ ಕಡಿಮೆಯಾಗಿದೆ. ಹೇಗೆ ದೇಶದ ಒಟ್ಟು ಆರ್ಥಿಕತೆಯಲ್ಲಿರುವ ಎಲ್ಲಾ ವಸ್ತುಗಳ, ಸೇವೆಗಳ ಬೆಲೆ ಏರಿಕೆ ಮತ್ತು ಇಳಿಕೆಯನ್ನು ಸೇರಿಸಿ ಹಣದುಬ್ಬರವನ್ನು ಅಂದಾಜು ಮಾಡುತ್ತಿದ್ದು ಮಾರ್ಚ್ 2007ರಲ್ಲಿ ಇದು ಶೇ.5.94 ಇದ್ದು ಮಾರ್ಚ್ 29, 2008ಕ್ಕೆ 7.41ಕ್ಕೆ ತಲುಪಿದೆ.

ಕನಿಷ್ಠ ಈ ಮೂರು ಅಂಶಗಳು ಹಣದುಬ್ಬರಕ್ಕೆ ಕಾರಣವಾಗುತ್ತದೆ.

1. ಮಾರುಕಟ್ಟೆಯಲ್ಲಿ ಹಣ ಜಾಸ್ತಿ ಬಂದಾಗ
2. ವಸ್ತು/ ಸೇವೆಗಳ ಉತ್ಪಾದನೆ ಮತ್ತು ವಿತರಣೆ ಪ್ರಮಾಣ ಕಡಿಮೆಯಾದಾಗ
3. ವಸ್ತು/ ಸೇವೆಗಳಿಗೆ ಬೇಡಿಕೆ ಹೆಚ್ಚಾದಾಗ

ಅಗತ್ಯ ವಸ್ತುಗಳನ್ನು ಬಳಸುವ ಬಡಜನರಿಗೆ ಹಣದುಬ್ಬರದ ಬಿಸಿ ಹೆಚ್ಚು ತಗಲುತ್ತದೆ. ಏಕೆಂದರೆ ಅವರ ಆದಾಯ ಹೆಚ್ಚಿರುವುದಿಲ್ಲ. ಆದರೆ ಅವರು ಬಳಸುವ ಅಗತ್ಯ ವಸ್ತುಗಳ ಬೆಲೆಗಳು ತೀವ್ರವಾಗಿ ಹೆಚ್ಚಾಗಿರುತ್ತವೆ. ಆದ್ದರಿಂದ ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಅವರು ಪೌಷ್ಟಿಕಾಂಶಗಳಿಂದ ಹಣ್ಣು, ತರಕಾರಿ, ಹಾಲು ಇತ್ಯಾದಿ ತಿನ್ನುವುದನ್ನು ಕಡಿಮೆ ಮಾಡಬೇಕು ಅಥವಾ ಸಾಲ ಮಾಡಬೇಕು. ಸಾಲ ಮಾಡಿದರೆ ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳಬೇಕು! ತಿನ್ನುವುದನ್ನು ಕಡಿಮೆ ಮಾಡಿದರೆ ಪೌಷ್ಟಿಕಾಂಶದ ಕೊರತೆಯಿಂದ ಕಾಯಿಲೆಯಿಂದ ಸಾಯಬೇಕು. ಅಂದರೆ ಈ ವ್ಯವಸ್ಥೆಯಲ್ಲಿ ಬಡವರಿಗೆ ಬೇಗ ಸಾವು!

ಪ್ರಮಾಣವನ್ನು ತೀವ್ರವಾಗಿ ಕಡಿತ ಮಾಡಿದೆ.

ಹೆಸರಾಂತ ಪತ್ರಕರ್ತ, ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತ ಪಿ.ಸಾಯಿನಾಥ್ ಅವರು ಹೇಳುವಂತೆ, "ಈಗ ಬಿಪಿಎಲ್ ಕಾರ್ಡು ಹೊಂದಿರುವ ಬಡಜನರಿಗೆ ನೀಡುತ್ತಿರುವ ರೇಷನ್ ಪ್ರಮಾಣವು ಜೈಲಿನಲ್ಲಿರುವ ಕೈದಿಗಳಿಗೆ ನೀಡುತ್ತಿರುವ ಆಹಾರದ ಪ್ರಮಾಣದ ಅರ್ಧಕ್ಕಿಂತಲೂ ಕಡಿಮೆ".

ರೇಶನ್ ಅಂಗಡಿಗಳಲ್ಲಿ ಆಹಾರಧಾನ್ಯಗಳ ಪೂರೈಕೆ ಕಡಿಮೆಯಾಗಿರುವುದರಿಂದ ಮಾರುಕಟ್ಟೆಗಳಲ್ಲಿ ಬೆಲೆ ಏರಿಕೆಗೆ ಕಾರಣವಾಗುತ್ತದೆ.

ಇಷ್ಟೆಲ್ಲಾ ಬೆಲೆ ಹೆಚ್ಚಳವಾಗುತ್ತಿದ್ದರೂ ಕೃಷಿ ಉತ್ಪಾದನೆ ಮೇಲೆ ಅವಲಂಬಿತರಾಗಿರುವ ರೈತನಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಉದಾಹರಣೆಗೆ ಮಾರುಕಟ್ಟೆಯಲ್ಲಿ ಟೊಮಾಟೊ ಬೆಲೆ ಕೆ.ಜಿ.ಗೆ 16 ರೂ. ಆದರೆ ರೈತರಿಗೆ ದೊರಕುತ್ತಿರುವುದು 6ರಿಂದ 7 ರೂ. ಮಾತ್ರ. ಬೆಲೆ ಏರಿಕೆಯ ಬಾಧೆ ಕಾರ್ಮಿಕರು, ರೈತರಿಗಲ್ಲದೆ ಮಧ್ಯಮ ವರ್ಗದವರನ್ನೂ ತೀವ್ರವಾಗಿ ತಟ್ಟುತ್ತಿದೆ.

ಈ ಎಲ್ಲಾ ನೀತಿಗಳಿಂದ ಅಸಂಖ್ಯಾತ ಸಂಖ್ಯೆಯಲ್ಲಿರುವ ರೈತರಿಗೆ ಆದಾಯ ಇಲ್ಲ. ಅದಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಗ್ರಾಹಕರು ಹೆಚ್ಚು ಹಣವನ್ನು ತೆರಬೇಕು. ಆದರೆ ಚಿಲ್ಲರೆ ವ್ಯಾಪಾರದಲ್ಲಿ ನುಸುಳುತ್ತಿರುವ ದೇಶ ಮತ್ತು ವಿದೇಶದ ದೊಡ್ಡ ಕಂಪನಿಗಳಿಗೆ ಹೇರಳ ಲಾಭ. ಇಂತಹ ನೀತಿಯ ವಿರುದ್ಧ ನಿರಂತರ ಸಮರಶೀಲ ಹೋರಾಟ ಅಗತ್ಯ.

ದೇಶಾದ್ಯಂತ ಪ್ರತಿಭಟನೆಗೆ ಕರೆ

ಬೆಲೆ ಏರಿಕೆಯನ್ನು ತಡೆಗಟ್ಟಲು ವಿಫಲವಾದ ಕೇಂದ್ರ ಸರ್ಕಾರದ ವಿರುದ್ಧ ಏಪ್ರಿಲ್ 16 ರಿಂದ 23 ರವರೆಗೆ ದೇಶಾದ್ಯಂತ ಪ್ರತಿಭಟನೆ ನಡೆಸಬೇಕೆಂದು ಯುನೈಟೆಡ್ ನ್ಯಾಶನಲ್ ಪ್ರೋಗ್ರೆಸಿವ್ ಅಲಯನ್ಸ್ (ಯುಎನ್‌ಪಿಎ) ಮತ್ತು ಎಡಪಕ್ಷಗಳು ಕರೆ ನೀಡಿವೆ. ಮುಂದಿನ ದಿನಗಳಲ್ಲಿ ಹೋರಾಟಗಳನ್ನು ತೀವ್ರಗೊಳಿಸಬೇಕೆಂದು ಜನತೆಯಲ್ಲಿ ಮನವಿ ಮಾಡಿವೆ.

ಕರ್ನಾಟಕದಲ್ಲಿ ಚುನಾವಣೆಯ ನಿಮಿತ್ತವಾಗಿ ಪ್ರತಿಭಟನೆಯನ್ನು ಒಂದೆರಡು ದಿನಕ್ಕೆ ಸೀಮಿತಗೊಳಿಸಲಾಗಿದೆ. ಸಮಾಜವಾದಿ ಪಕ್ಷ, ಸಿಪಿಐ(ಎಂ), ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳು ರಾಜ್ಯದಲ್ಲಿ ಧರಣಿ, ಮೆರವಣಿಗೆ, ರ್‍ಯಾಲಿಗಳನ್ನು ನಡೆಸುವುದರ ಮೂಲಕ ಪ್ರತಿಭಟಿಸಲು ಘಟಕಗಳಿಗೆ, ಕಾರ್ಯಕರ್ತರಿಗೆ ಮನವಿ ಮಾಡಿವೆ. ಬೆಂಗಳೂರಿನಲ್ಲಿ ಏಪ್ರಿಲ್ 16ರಂದು ಮಹಾತ್ಮಗಾಂಧಿ ಪ್ರತಿಮೆ ಎದುರು ಬೆಳಿಗ್ಗೆ 11 ಗಂಟೆಯಿಂದ ಧರಣಿ ಸತ್ಯಾಗ್ರಹ ನಡೆಯಲಿದೆ. ನಾಲ್ಕು ಪಕ್ಷಗಳ ಮುಖಂಡರಲ್ಲದೆ ಇತರೆ ಸಂಘಟನೆಗಳ ಮುಖಂಡರು ಭಾಗವಹಿಸಲಿದ್ದಾರೆ.

ವೈದಿಕಶಾಹಿಯ ಆಯಾಮಗಳ ದಮನದ ವಿರುದ್ಧ ಸಿಡಿದೆದ್ದ ಎಲ್ಲರನ್ನು ನುಂಗಿ ಜೀರ್ಣಿಸಿಕೊಳ್ಳಲು 'ಹಿಂದುತ್ವ' ಎಂಬ ಹೆಬ್ಬಾವು ಯತ್ನಿಸುತ್ತಲೇ ಬಂದಿದೆ. ಈಗ ಭಗತ್‌ಸಿಂಗ್ ಮತ್ತು ಬಾಬಾಸಾಹೇಬ ಡಾ. ಬಿ.ಆರ್. ಅಂಬೇಡ್ಕರ್‌ರತ್ತ ಹೊರಳಿದೆ. ಇವರನ್ನು ಅಪಹರಿಸುವ ಯತ್ನ ಬಯಲಿಗಿಟ್ಟ ಲೇಖನ

ಹಿಂದುತ್ವ ಶಕ್ತಿಗಳಿಂದ ಅಂಬೇಡ್ಕರ್ ಅಪಹರಣ ಯತ್ನ

ನಿತ್ಯಾನಂದಸ್ವಾಮಿ

'ಹಿಂದುತ್ವ' ಎಂಬುದು ಒಂದು ಹೆಬ್ಬಾವು ಇದ್ದಂತೆ. ಹೆಬ್ಬಾವು ಎಲ್ಲವನ್ನು ನುಂಗಿ ಜೀರ್ಣಿಸಿಕೊಳ್ಳುತ್ತದೆ. ಹಾಗೆಯೇ ಈಗ ಹಿಂದುತ್ವ ಶಕ್ತಿಗಳು, ಹಿಂದೂ ಸಮಾಜದ ಅವಿಭಾಜ್ಯ ಭಾಗವಾಗಿರುವ ಅನಿಷ್ಠ ಜಾತಿ ಪದ್ಧತಿಯ ವಿರುದ್ಧ ತಮ್ಮ ಜೀವನದುದ್ದಕ್ಕೂ ಹೋರಾಟ ನಡೆಸಿದ ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ಅಪಹರಿಸಿ ಅವರ ವಿಚಾರಧಾರೆಯನ್ನು ಅಳಿಸಿಹಾಕುವ ಪ್ರಯತ್ನ ಮಾಡುತ್ತಿವೆ. 'ನಾನೊಬ್ಬ ಹಿಂದುವಾಗಿ ಹುಟ್ಟಿದ್ದು ನನ್ನ ದುರಾದೃಷ್ಟವಾಗಿದ್ದರೂ, ನಾನು ಹಿಂದುವಾಗಿ ಸಾಯಲಾರೆ" ಎಂದು ಘೋಷಿಸಿದ್ದ ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ಈಗ ಸಂಘ ಪರಿವಾರವು ಹಮ್ಮಿಕೊಳ್ಳುತ್ತಿರುವ ಹಿಂದು ಸಮಾಜೋತ್ಸವದ ಬ್ಯಾನರುಗಳಲ್ಲಿ, ಭಿತ್ತಿಪತ್ರಗಳಲ್ಲಿ ತಪ್ಪದೇ ಮುದ್ರಿಸಲಾಗುತ್ತಿದೆ ಮತ್ತು ಆ ಮೂಲಕ ತಮ್ಮ ರಾಜಕೀಯ ಗುರಿ ಸಾಧಿಸಲು ದಲಿತ ಸಮುದಾಯಗಳ ಬೆಂಬಲ ಗಿಟ್ಟಿಸಿಕೊಳ್ಳುವ ಪ್ರಯತ್ನವನ್ನು ಪ್ರಜ್ಞಾಪೂರ್ವಕವಾಗಿ ಮಾಡಲಾಗುತ್ತಿದೆ.



ವೈದಿಕಶಾಹಿ ತಂತ್ರಗಳು

ಈಗಾಗಲೇ ಚರಿತ್ರೆಯಲ್ಲಿ ಬುದ್ಧನ ಅಪಹರಣವಾಗಿದೆ. ಬುದ್ಧ ಹಿಂದು ಸಮಾಜದಲ್ಲಿ ಮಾತ್ರ ಕಾಣಬರುವ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ವಿರೋಧಿಸಿದವರಲ್ಲಿ ಮೊತ್ತಮೊದಲಿಗರು. ವೇದಗಳ ಶ್ರೇಷ್ಠತೆಯನ್ನು, ಯಜ್ಞಯಾಗಾದಿಗಳ ಪ್ರಯೋಜನವನ್ನು ಪ್ರಶ್ನಿಸಿದವರು. ಬುದ್ಧನ ವೈಚಾರಿಕ ಧಾಳಿಯಿಂದಾಗಿ ಪುರೋಹಿತಶಾಹಿ ವೈದಿಕ ಧರ್ಮದ ಬಣ್ಣ ಬಯಲಾಯಿತು. ಸಂಘರ್ಷ ಆರಂಭವಾಯಿತು. ಬೌದ್ಧ ಧರ್ಮದ ವಿರುದ್ಧ ಶಂಕರಾಚಾರ್ಯರ ನೇತೃತ್ವದಲ್ಲಿ ಯುದ್ಧವನ್ನೇ ಸಾರಲಾಯಿತು. ಅನೇಕ ಬೌದ್ಧ ಧರ್ಮ ಗ್ರಂಥಗಳು, ಶ್ರದ್ಧಾ ಕೇಂದ್ರಗಳು ನಾಶವಾದವು. ಬೌದ್ಧ ಧರ್ಮವನ್ನು ಹಿಮಾಲಯದ ಆಚೆಗೆ ತಳ್ಳಲಾಯಿತು. ವರ್ಷಗಳು ಉರುಳಿದವು. ಆದರೆ ಬುದ್ಧನ ಪ್ರಭಾವ ಅಳಿಯಲಿಲ್ಲ. ಶೂದ್ರ, ಅತಿ ಶೂದ್ರರು ಬುದ್ಧನನ್ನು ಒಬ್ಬ ಮಹಾಪುರುಷನೆಂದೇ ನೆನೆಯುತ್ತಿದ್ದರು. ಇದರಿಂದ ಕುಪಿತಗೊಂಡ ವೈದಿಕರು ಬುದ್ಧನ ಬಗ್ಗೆ ತಮ್ಮ ರಾಗವನ್ನು ಕ್ರಮೇಣ ಬದಲಾಯಿಸಿದರು. ಬುದ್ಧನನ್ನು ವಿಷ್ಣುವಿನ ಒಂದು ಅವತಾರವೆಂದು ಅಂಗೀಕರಿಸಲಾಯಿತು. ಇದು ವೈದಿಕ ಧರ್ಮದ ಒಂದು ತಂತ್ರವೇ ಆಯಿತು. ಒಂದು ವಿಚಾರವನ್ನು ಯಶಸ್ವಿಯಾಗಿ ವಿರೋಧಿಸಲು ಸಾಧ್ಯವಾಗದಿದ್ದಾಗ ಅದನ್ನು ಸ್ವಾಹಮಾಡಿ ಜೀರ್ಣಿಸಿಕೊಳ್ಳುವ ಸಾಮರ್ಥ್ಯ!

ದಕ್ಷಿಣದಲ್ಲಿ 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನ ವಿಷಯದಲ್ಲಿಯೂ ಹೀಗೇ ಆಯಿತು. ವೇದಗಳ, ಯಜ್ಞಯಾಗಾದಿಗಳ, ಜಾತಿ ತಾರತಮ್ಯದ ವಿರುದ್ಧ ಧ್ವನಿ ಎತ್ತಿದ ಬಸವಾದಿ ಶರಣರ ವಿರುದ್ಧ ಸಮರವೇ ನಡೆಯಿತು. ಬಸವಣ್ಣನ ಅಂತ್ಯವಾಯಿತು. ಆದರೆ ಆತನ ವಿಚಾರಗಳು ಅಂತ್ಯವಾಗಲಿಲ್ಲ. ಕ್ರಮೇಣ ಬಸವಣ್ಣನನ್ನು ಒಬ್ಬ ಧರ್ಮಸ್ಥಾಪಕನೆಂದು ಅಂಗೀಕರಿಸಿ ವೈದಿಕ ಚೌಕಟ್ಟಿನೊಳಗೆ ಸ್ಥಾವರಗೊಳಿಸಲಾಯಿತು.

ಆಧುನಿಕ ಭಾರತದಲ್ಲಿ ಪುರೋಹಿತಶಾಹಿ ವೈದಿಕ ವ್ಯವಸ್ಥೆಯ ರಕ್ಷಣೆಗಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸ್ಥಾಪಿಸಲಾಯಿತು. ಆರ್.ಎಸ್.ಎಸ್. ಈ ಅಪಹರಿಸುವ ಪರಂಪರೆಯನ್ನು ಕಾಪಾಡಿಕೊಂಡು ಹೋಗಲು ಬದ್ಧವಾಗಿದೆ. ನಾಸ್ತಿಕತೆಯನ್ನು, ಸಮಾಜವಾದಿ ವಿಚಾರಧಾರೆಯನ್ನು ಮೈಗೂಡಿಸಿಕೊಂಡಿದ್ದ ಕ್ರಾಂತಿಕಾರಿ ಭಗತ್‌ಸಿಂಗ್‌ರನ್ನು ಒಬ್ಬ ಹಿಂದು ಹುತಾತ್ಮನಾಗಿ ಬಣ್ಣಿಸುವ ವಿಫಲ ಪ್ರಯತ್ನವನ್ನು ಆರ್.ಎಸ್.ಎಸ್ ಮುಂದುವರೆಸಿದೆ. ಹಿಂದೂ ಸಮಾಜೋತ್ಸವದ ಕೇಸರಿ ಬ್ಯಾನರುಗಳಲ್ಲಿ ಗುರು ಗೋಳ್ವಾಲ್ಕರ್, ಹೆಡಗೇವಾರ್ ಮೊದಲಾದವರ ಚಿತ್ರಗಳ ಜೊತೆಯಲ್ಲಿ ಭಗತ್‌ಸಿಂಗ್ ಚಿತ್ರವನ್ನು ಮುದ್ರಿಸಲು ಅವರು ಹೇಸದವರಾಗಿದ್ದಾರೆ.

ಎರಡೆಳೆ ನಾಲಗೆ

ಗಾಂಧೀಜಿ ತಾನೊಬ್ಬ ಹಿಂದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಹಿಂದು ಧರ್ಮದಲ್ಲಿರುವ ಜಾತಿ ವ್ಯವಸ್ಥೆಯನ್ನು ಅವರು ತಮ್ಮದೇ ಆದ ರೀತಿಯಲ್ಲಿ ಸಮರ್ಥಿಸುತ್ತಿದ್ದರು. ಆದಾಗ್ಯೂ, ಅವರು ಮುಸಲ್ಮಾನರ ಪರವಾಗಿದ್ದಾರೆ ಎಂದು ಆರೋಪಿಸಿ ಆರ್.ಎಸ್.ಎಸ್. ಅವರನ್ನು ಕೊಲೆ ಮಾಡಿ ಹಾಲು ಕುಡಿಯಿತು. ಮುಂದೆ ಒಂದು ದಿನ ಆರ್.ಎಸ್.ಎಸ್. ನಿಯಂತ್ರಿತ ಬಿ.ಜೆ.ಪಿ. ಗಾಂಧಿ ಸಮಾಜವಾದವನ್ನು ತಾನು ಒಪ್ಪಿಕೊಳ್ಳುವುದಾಗಿ ಘೋಷಿಸಿತು. ಇದು ಗಾಂಧೀಜಿ ಅಪಹರಣದ ಒಂದು ಪ್ರಯತ್ನ.

ಅಂಬೇಡ್ಕರ್ ಅಪಹರಣ ಪ್ರಕರಣ ಹಾಡು ಹಗಲಿನಲ್ಲಿ ನಡೆದ ಅಪಹರಣ ಪ್ರಕರಣದಂತಿದೆ. ಏಕೆಂದರೆ ಅಂಬೇಡ್ಕರ್ ಅವರು ತಮ್ಮ ಸ್ವಂತ ಅನುಭವದ ಆಳದಿಂದ ಹಿಂದೂ ಸಮಾಜ ವ್ಯವಸ್ಥೆಯ ವಿರುದ್ಧ ಮಾಡಿರುವ ವೈಚಾರಿಕ ಧಾಳಿಯ ಪ್ರಖರತೆಯನ್ನು ಯಾರಿಂದಲೂ ಮುಚ್ಚಿಹಾಕಲು ಸಾಧ್ಯವಿಲ್ಲ. ಹೆಬ್ಬಾವು ಒಂದು ಜಿಂಕೆಯನ್ನು ನುಂಗಬಹುದು. ಆದರೆ ಒಂದು ಆನೆಯನ್ನು ಅದು ನುಂಗಲಾರದು.

ಉಡುಪಿಯ ಪೇಜಾವರ ಶ್ರೀಗಳು ಅಂಬೇಡ್ಕರ್ ಭಾವಚಿತ್ರವಿರುವ ಕೇಸರಿ ಬ್ಯಾನರ್ ಅಡಿಯಲ್ಲಿ ಹಿಂದೂ ಒಂದು, ಬಂಧು ಎಂದು ಭಾಷಣ ಮಾಡುತ್ತಾರೆ. ಆದರೆ ಮಠದಲ್ಲಿನ 'ಎರಡು ಪಂಕ್ತಿ' ಪದ್ಧತಿಯನ್ನು ಮಾತ್ರ ಮರೆ ಮಾಚುತ್ತಾರೆ. ಶ್ರೇಷ್ಠ ಕೃಷ್ಣ ಭಕ್ತನಾದ ಕನಕದಾಸರನ್ನು ಇನ್ನೂ ಮಠದ ಹೊರಗೆ ನಿಲ್ಲಿಸಿರುವ ಇವರು ಸಾಮಾನ್ಯ ಶೂದ್ರರಿಗೆ ಮಠದೊಳಗೆ ಪ್ರವೇಶ ನೀಡ್ಯಾರೇ?

ಅಂಬೇಡ್ಕರ್ ಭಾವಚಿತ್ರವನ್ನು ಬಳಸುವ ಮೂಲಕ ಅವರು ಹಿಂದೂ ಧರ್ಮದ ಬಗ್ಗೆ ಮಾಡಿರುವ ತೀವ್ರವಾದ ಟೀಕೆಯನ್ನು ಜನಮಾನಸದಿಂದ ಅಳಿಸಿಹಾಕಲು ಆರ್.ಎಸ್.ಎಸ್. ಪ್ರಯತ್ನ ಮಾಡುತ್ತಿದೆ. ದಲಿತರನ್ನು ಆಕರ್ಷಿಸುವ ಮೂಲಕ ಅಲ್ಪಸಂಖ್ಯಾತರ ವಿರುದ್ಧದ ಕೋಮುಗಲಭೆಗಳಲ್ಲಿ ದಲಿತ ಶಕ್ತಿಯನ್ನು ಬಳಸುವುದು ಆರ್‌ಎಸ್‌ಎಸ್‌ನ ಹೊಸ ರಣನೀತಿಯಾಗಿದೆ. ಚುನಾವಣೆಗಳ ಸಂದರ್ಭದಲ್ಲಿಯೂ ದಲಿತರ ಮತಗಳನ್ನು ಸೆಳೆಯಲು ಅಂಬೇಡ್ಕರ್ ಭಾವಚಿತ್ರದ ಬಳಕೆ ಆಗಬಹುದು. ಆದರೆ ದಲಿತರ ಪಾಲಿಗೆ ಸೂರ್ಯನಂತಿರುವ ಅಂಬೇಡ್ಕರ್ ಅವರನ್ನು ಅಪಹರಿಸುವ ಹಿಂದುತ್ವ ಶಕ್ತಿಗಳ ಪ್ರಯತ್ನ ಯಶಸ್ವಿಯಾಗಲಾರದು.

ಏನು ಹೇಳಿದ್ದರು ಡಾ. ಬಿ.ಆರ್.ಅಂಬೇಡ್ಕರ್

ಸುಡಲೂ ಬಿಡುವುದಿಲ್ಲ

ಹಿಂದುಗಳು ಅಸ್ಪೃಶ್ಯರನ್ನು ಹಿಂದುಗಳೆಂದು ಹೇಳಿಕೊಳ್ಳುತ್ತಾರೆ. ಆದರೆ ಅಸ್ಪೃಶ್ಯರ ಹೆಣವನ್ನು ಹಿಂದುಗಳ ಸ್ಮಶಾನದಲ್ಲಿ ಸುಡಲೂ ಬಿಡುವುದಿಲ್ಲ.

★

ಅಸಮಾನತೆಯ ತವರು

ಹಿಂದೂ ಸಮಾಜ ಅಸಮಾನತೆಯ ತವರು ಅದು ಏಣಿ ಇಲ್ಲದ, ಪ್ರವೇಶದ್ವಾರವಿಲ್ಲದ ಅನೇಕ ಮಹಡಿಗಳುಳ್ಳ ಗೋಪುರ ಒಂದು ಮಹಡಿಯಲ್ಲಿ ಹುಟ್ಟಿದ ಜನ ಅಲ್ಲಿಯೇ ಸತ್ತು ಕೊಳೆಯಬೇಕು.

★

ಪ್ರಗತಿಗೆ ವಿಪತ್ತು

ಒಂದು ಸಮುದಾಯ ಎಲ್ಲಿಯವರೆಗೆ ಇನ್ನೊಂದು ಸಮುದಾಯವನ್ನು ವಿಪತ್ತೆಂದು ಪರಿಗಣಿಸುತ್ತದೆಯೋ ಅಲ್ಲಿಯವರೆಗೆ ಯಾವುದೇ ಸಾಮಾಜಿಕವಾದ ಪ್ರಗತಿ ಸಾಧ್ಯವಿಲ್ಲ.

★

ಒಗ್ಗಟ್ಟು

ಹಲವಾರು ಭಾಷೆ, ಸಂಸ್ಕೃತಿ ಮತ್ತು ಧರ್ಮಗಳನ್ನು ಹೊಂದಿರುವ ಅನೇಕ ರಾಷ್ಟ್ರಗಳು ಸ್ವಯಂ ಅಳ್ವಿಕೆಯೊಡನೆ ಒಂದೇ ಸಮಾಜವಾಗಿ ಒಗ್ಗೂಡಿವೆ. ಭಾರತಕ್ಕೆ ಅದು ಸಾಧ್ಯವಿಲ್ಲ ಎನ್ನುವುದು ಸರಿಯಲ್ಲ.

★

ಕಮ್ಯೂನಿಸಂ ಸಮಂಜಸ

ಪ್ರಜಾಪ್ರಭುತ್ವವು ಭಾರತದಲ್ಲಿ ಯಶಸ್ವಿಯಾಗದಿದ್ದರೆ ಅದಕ್ಕೆ ಬದಲು ಸಮಂಜಸವಾದುದು ಕಮ್ಯೂನಿಸಂನ ಯಾವುದಾದರೂ ಒಂದು ರೂಪ.



ಕೂಲಿ ಎಕ್ಸ್‌ಪ್ರೆಸ್ ಒಂದು ಬೇಕಲ್ಲವೇ?

ಏಳು ವರ್ಷದ ಕಂದ ಒಂದು ಇಲ್ಲದ್ದು ಆ ತಾಯ ಗಮನಕ್ಕೆ ಬಂದು ಒಮ್ಮೆಲೇ ಎದೆ ಒಡೆದು, 'ಅಯ್ಯೋ, ನನ ಕೂಸು ಬಂದಿಲ್ಲಲ್ಲೇ ಯವ್ವೋ...' ಎಂದು ಎದೆ ಬಡಿದುಕೊಳ್ಳುತ್ತಾ ಬಾಗಿಲ ಕಂಬಿಗೆ ಕೈ ಕೊಟ್ಟು ಹೊರಗಿಣುಕಿದಳು.

ಸಭೆ ಸುರು ಆಗುವ ಮುನ್ನ ಸಂಗಾತಿಗಳು ಕೈಗೊಂದು ಕರಪತ್ರ ಕೊಟ್ಟರು. 'ಕೂಲಿ ಎಕ್ಸ್‌ಪ್ರೆಸ್'ಗೆ ಆಗ್ರಹಿಸಿ ರೈಲು ನಿಲ್ದಾಣಗಳ ಎದುರು ಮತ ಪ್ರದರ್ಶನ. ಮಾರ್ಚ್ 28 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕರೆಯಾಗಿತ್ತದು. ಕೆಲವರ ಹುಬ್ಬೇರಿತು. ಇನ್ನೂ ಕೆಲವರಿಗೆ ಇದೊಂದು ತುಂಬ ಅವಶ್ಯಕ ಮತ್ತು ಮಹತ್ವದ ಹೋರಾಟ ಅನಿಸಲಿಕ್ಕಿಲ್ಲ. ಆದರೆ ಕಳೆದ 15 ವರ್ಷಗಳಿಂದ ನಿರಂತರವಾಗಿ ರೈಲಿನಲ್ಲಿ ಓಡಾಡುತ್ತಿರುವ ನನಗೆ ಮಾತ್ರ ಈ ಚಳುವಳಿ ಪ್ರಮುಖವೇ ಅನಿಸಿತು. ಕೂಲಿ ಕಾರ್ಮಿಕರಿಗಾಗಿ ಪ್ರತ್ಯೇಕ ರೈಲು ಜರೂರಿ ಇದೆ. ಅದರಲ್ಲಿ ಮಹಿಳೆಯರಿಗಾಗಿ ಅರ್ಧ ರೈಲು ಮೀಸಲಿಡಬೇಕಿದೆ. ಏಕೆಂದರೆ ವಲಸೆ ಹೋಗುವ ಕುಟುಂಬದಲ್ಲಿ ಬರೇ ಗಂಡಸರಿರುವುದಿಲ್ಲ. ಸಮನಾಗಿ ಮಹಿಳೆಯರೂ ಇರುವರು. ಅಲ್ಲದೆ ಗಂಟು ಗಟೋಡಾಗಳ ರಾಶಿ. ಹೆಚ್ಚು ಹೊತ್ತಿನ ನಿಲುಗಡೆ ಅನುಕೂಲಕರ. ಏಕೆಂದರೆ ಗಾಡಿ ಹತ್ತುವವರು ಬೃಹತ್ ಗಂಟುಗಳೊಂದಿಗೆ ಎಳೆ ಕಂದಗಳನ್ನು, ಮುದಿ ಜೀವಗಳನ್ನೂ ಹತ್ತಿಸಬೇಕು. ಮಣಭಾರ ಸಾಮಾನು ಹೊತ್ತು ಓಡೋಡಿ ಬರುವಷ್ಟರಲ್ಲೇ ದಣಿದು ಉಸ್ಸೆನ್ನುವಾಗಲೇ ಟ್ರೈನು ನಿಷ್ಕರುಣೆಯಿಂದ ಸಿಳ್ಳೆ ಹೊಡೆಯುತ್ತದೆ. ಕೂಸು-ಕಂದಗಳನ್ನು ಹತ್ತಿಸಿ ಗಂಡು ಮಗನೋ ಹೆಣ್ಣು ಮಗಳೋ ರಶ್ಶು ಡಬ್ಬಿಯೊಳಗೆ ಹಾಗೂ ಹೀಗೂ ಸೇರು ಬೆವರು ಬಸಿಯುತ ನುಗ್ಗುವಾಗ ಚುಕುಬುಕು ರೈಲಿನ ಗಾಲಿಗೆ ವೇಗ ಹೆಚ್ಚುತ್ತದೆ. ಒಳಗೆ ಉಸಿರುಗಟ್ಟಿಸುವ ರಶ್ಶು, ಪೂರ್ತಿ ಪಾದ ಊರಿ ನಿಲ್ಲಲೂ ಸಿಗದ ಸೂಜಿ ಮೊನೆಯಂಥ ಜಾಗ. ಗಾಳಿ ಇಲ್ಲದಂಗಾಗಿ ಚೀರಾಡುವ ಕೂಸುಗಳು. ಬರುವಾಗಲೇ ತವರಿನವರು ಅಪರೂಪಕ್ಕೆ ಪ್ರೀತಿ ವ್ಯಕ್ತಿಸಲು ತೊಡಿಸಿದ ಕೆಂಪುಗಾಜಿನ ಬಳೆಗಳು ಚೂರಾಗಿರುವುದಕ್ಕೆ ಕಣ್ಣೀರು ತರುವ ಹೆಂಗಸರು. ಕಳಿಸಲು ಬಂದವರಿಗೆ ಕಡೆ ಗಳಿಗೆಯಲ್ಲಿ ಕೈಬೀಸಿ ಹೇಳಲಾಗದ ತಳಮಳ. ಕ್ಷಣಾರ್ಧದಲ್ಲಿಯೇ ಅಂಗೈಯಗಲ ಜಾಗಕ್ಕಾಗಿ ಹುಟ್ಟಿಕೊಳ್ಳುವ ಜಗಳಗಳು ತಾರಕಕ್ಕೇರಿ, ಬೋಗಿಗೆ ಬೋಗಿಯೇ ವಿಚಿತ್ರ ನಮೂನೆಯ ಭಯ-ಗದ್ದಲದಿಂದ ತಲ್ಲಣಿಸುತ್ತದೆ.

'ಉದ್ಯಾನ' ಎಂಬ ತುಂಬ ಅನುಕೂಲ ಸಮಯಕ್ಕೊದಗುವ ಟ್ರೈನಿನಲ್ಲಿ ಕೆಲವು ಜನರಲ್ ಬೋಗಿಗಳಿವೆ. ಬೊಂಬಾಯಿಯಿಂದ ಬೆಂಗಳೂರವರೆಗೆ. ನಡುದಾರಿಯಲ್ಲಿಯೇ ನೀರು ಮುಗಿದು ಹೋಗಿ ಇಡೀ ಬೋಗಿಗಳು ಗಬ್ಬು ನಾರುತ್ತಿರುತ್ತವೆ. ರೈಲಿನ ಕಡೆ ತುದಿಯ ಡಬ್ಬಿಯು ಮಹಿಳೆಯರದ್ದು ಹೆಸರಿಗೆ ಮಾತ್ರ. ಬೋಗಿ ತುಂಬ 'ಕಿನ್ನರಿ' ಯರು, ಪುರುಷರು, ದಾರಿಯಲ್ಲೆಲ್ಲೋ ಟ್ರೈನು ನಿಂತಾಗ ನೀರು-ಚಹಾ ಸಹ ಆ ಕಡೆಯ ಬೋಗಿಯ ತನಕ ಬರುವುದಿಲ್ಲ. ಕನಿಷ್ಠ ಸೌಲಭ್ಯಗಳಿಂದ ವಂಚಿತರಾಗಿ ಪಯಣ ಸವೆಸಬೇಕಾದ ದುಃಸ್ಥಿತಿ ಜನರಲ್ ಟಿಕೆಟ್‌ದಾರರದ್ದು, ಜನರಲ್ ಬೋಗಿ ಹತ್ತಿ ಹೊರಡುವ ಪ್ರಯಾಣಿಕರು ಒಮ್ಮೆಯೂ ನೆಮ್ಮದಿಯಿಂದ, ಕುಳಿತು ಪ್ರಯಾಣ ಮಾಡಲಾಗದು. ಇನ್ನು ಜನರಲ್ ಬೋಗಿಯಲ್ಲಿರುವವರು ಬಹುಸಂಖ್ಯಾತ ಜನ ವಲಸೆ ಕೂಲಿ ಕಾರ್ಮಿಕರೇ. ಯಾದಗೀರ್, ರಾಯಚೂರು, ಗುಂತಕಲ್‌ಗಳಲ್ಲೆಲ್ಲಾ ನಡುರಾತ್ರಿ ಹೊತ್ತಲ್ಲಿ ಅತ್ಯಂತ ಅಪಾಯಕಾರಿ ತೆರದಲ್ಲಿ ಸಮಸ್ಯೆಗಳನ್ನೆದುರಿಸುತ್ತಾ ಬಡ ಜನತೆ ಬೋಗಿ ಹತ್ತಲು ಹೆಣಗುತ್ತಾರೆ.

ನನಗೀಗಲೂ ಎರಡು ಘಟನೆಗಳು ಕಣ್ಣಿಗೆ ಕಟ್ಟಿದಂತೆ ಢಾಳಾಗಿ ನೆನಪಿದೆ. ಐದಾರು ವರ್ಷಗಳ ಕೆಳಗೆ ಉದ್ಯಾನ ಟ್ರೈನಿನ ಮಹಿಳಾ ಬೋಗಿಯಲ್ಲಿ ಪಯಣಿಸುತ್ತಿದ್ದೆ. ರಾತ್ರಿ ಹೊತ್ತು ಯಾವ ಸ್ಟೇಷನ್ನೆಂದು ನನಗೆ ನೋಡಲಾಗಲಿಲ್ಲ. ಮೇಲಿನ ಸೀಟು ಹತ್ತಿ ಕಣ್ಮುಚ್ಚಿದ್ದೆ. ಬೆಚ್ಚಿ ಬೀಳಿಸುವ ದಡ-ಬಡ, ಜೋರು ದನಿ. ಹೀಗೆ ಏನೆಲ್ಲ ಶಬ್ದಗಳಿಗೆ ನಿದ್ರೆ ಹಾರಿ ಹೋರಿ ಒಮ್ಮೆ ಬೋಗಿ ತುಂಬ ಕಣ್ಣಾಡಿಸಿದೆ. ಯಥಾ ರೀತಿ ಐದಾರು ಜನರ ಒಂದು ಕುಟುಂಬ ನಾಲ್ಕೆಂಟು ಗೋಣಿ ಚೀಲ ಗಂಟುಗಳೊಂದಿಗೆ ಓಡೋಡಿ ಬಂದು ಹತ್ತಿರುವರು. ಸ್ವಲ್ಪ ವಯಸ್ಸಾದ ಹೆಂಗಸು ಧಾವಿಸಿ ಬಂದ ಪರಿಗೆ ಎದೆಯ ಗೂಡು ಅದುವಿಕೊಂಡು ಉಸುಗರಿಯುತ್ತಿದ್ದಳು. "ಜಲ್ದಿ ಬರ್ತಾ ಇಲ್ಲ..." ಅಂತ ಮೂಳೆ ಚಕ್ಕಳದ ಗಂಡಸು ಮನೆ ಮಂದಿಗೆಲ್ಲ ಬಯ್ಯುತ್ತಿದ್ದ. ಹಾಲುಣ್ಣುವ ಕೂಸನ್ನು ಎದೆಗವುಚಿಕೊಂಡ ಕಪ್ಪು ವೈಯ, ಗಟ್ಟಿ ಮೂಳೆಯುಳ್ಳ ಹೆಂಗಸು, "ಯಾಕೆ ಸುಮ್ನೆ ಚೀರಾಡ್ತಿ... ಏನ್ ಮಾಡಲಾರದೆ ಮುಸಿಲಾತದೆ...." ಅಂತ ಗೊಣಗುತ್ತಲೇ ಚೀಲಗಳನ್ನು, ವಯಸ್ಸಾದವರನ್ನೂ ಬೋಗಿಯ ಬಾಗಿಲಾಚೆಯಿಂದ ಬೋಗಿಯೊಳಗೆ ಎಳೆದೆಳೆದು ಹಾಕುತ್ತಿದ್ದಳು. ಬಗಲಲ್ಲಿನ ಕೂಸನ್ನು ಕೈತೊಳೆವ ಬೆಸಿನ್ ಪಕ್ಕದಲ್ಲಿ ಕುಕ್ಕರು ಬಡಿದು ಎಲ್ಲ ಸಾಮಾನು ಸರಂಜಾಮು ಮನುಷ್ಯರು ಸರಿಯಾಗಿ ಬಂದು ಸೇರಿದ್ದಾರ್ಯೆ್ತೋ ಎಂದು ಒಮ್ಮೆ ಲೆಕ್ಕ ಮಾಡ ತೊಡಗಿದಳು. ಅಷ್ಟೊತ್ತಿಗೆ ನಿಧಾನಕ್ಕೆ ಚಲಿಸತೊಡಗಿದ ಟ್ರೈನು ಕ್ರಮ-ಕ್ರಮೇಣ ವೇಗದ ಗತಿ ಹಿಡಿಯಿತು. ಅಷ್ಟೊತ್ತಿಗಾಗಲೇ ಏಳು ವರ್ಷದ ಕಂದ ಒಂದು ಇಲ್ಲದ್ದು ಆ ತಾಯ ಗಮನಕ್ಕೆ ಬಂದು ಒಮ್ಮೆಲೇ ಎದೆ ಒಡೆದು, 'ಅಯ್ಯೋ, ನನ ಕೂಸು ಬಂದಿಲ್ಲಲ್ಲೇ ಯವ್ವೋ...' ಎಂದು ಎದೆ ಬಡಿದುಕೊಳ್ಳುತ್ತಾ ಬಾಗಿಲ ಕಂಬಿಗೆ ಕೈ ಕೊಟ್ಟು ಹೊರಗಿಣುಕಿದಳು. ನಾನು ದಡಕ್ಕನೇ ಕೆಳಗಿಳಿದು, ಆ ಇನ್ನೊಂದು ಬಾಗಿಲಿಗೆ ಹೋಗಿ ಹೊರಗಿಣುಕಿದೆ...

.... ಟ್ರೈನು ಓಡುತ್ತಿದೆ. ಏಳೋ-ಎಂಟೋ ವಯಸ್ಸಿನ ಗಂಡು ಮಗುವೊಂದು 'ಯವ್ವಾ ಯವ್ವಾ.. ನಂಗ ಬಿಟ್ಟು ಹೋಗಬ್ಯಾಡ. ನಾ ಜಿದ್ದ ಮಾಡಾದಿಲ್ಲ.. ನೀ ಹೊಡಿ ಬೇಕಾದ್ರ... ನಂಗ ಬಿಟ್ಟ ಹೋಗಬ್ಯಾಡ..." ಅಂತ ಒಂದೇ ಸವನೆ ಚೀರುತಾ ಅಳುತ ಧಾವಿಸುತ್ತಾ ಬರುತ್ತಿದೆ. ಊಹುಂ. ಟ್ರೈನಿನ ವೇಗ ಹೆಚ್ಚಾಗಿಯೇ ಬಿಟ್ಟಿತು. ಮಗನತ್ತ ಒಂದು ಕೈ ಮಾಡುತ, 'ಏ ಮಗ ಏ ಮಗ' ತಾಯಿ ಅಳುತ್ತಲೇ ಇದ್ದಳು. ಕರುಳ ಕ್ರಂದನಕ್ಕೆ ವಿಚಿತ್ರ ಕಸಿವಿಸಿ ಆಗ ತೊಡಗಿತು. ಇಡೀ ಸನ್ನಿವೇಶಕ್ಕೆ ಯಾರ ಹೃದಯವಾದರೂ ತಲ್ಲಣಿಸದೇ ಇರಲು ಹೇಗೆ ಸಾಧ್ಯ...? ನಾನು ಗಂಟು-ಮೂಟೆ ತುಳಿಯುತ್ತ, ಮಂದಿಯನ್ನೆಲ್ಲ ಹಿಂದೆ ಸರಿಸುತ್ತಾ ಒಂದೇ ನೆಗೆತಕ್ಕೆ ಚೈನು ಜಗ್ಗಲು ಹವಣಿಸಿದೆ. ಅಷ್ಟೊತ್ತಿಗಾಗಲೇ ಸ್ಟೇಷನ್ ದೀಪದ ಬೆಳಕು ಹಿಂದಾಗಿ ನಿರ್ಜನ ತಾಣದ ನಡುವೆ ಗವ್ವೆನ್ನೋ ಕತ್ತಲ ಸೀಳುತ ಟ್ರೈನೇನೋ ನಿಂತಿತು. ಟಾರ್ಚಿನ ಬೆಳಕು ಚೆಲ್ಲುತ ಕಡೆಯ ಬೋಗಿಯಲ್ಲಿದ್ದ ರೈಲ್ವೆ ಸಿಬ್ಬಂದಿ ಬಂದು "ಈಗೇನು ಮಾಡ ಲಾಗದು, ಸ್ಟೇಷನ್ನಿಗೆ ಸುದ್ದಿ ಕೊಡುವೆವು.. ಉಳಿದದ್ದು ನಿಮ್ಮ ನಸೀಬು" ಎಂದು ಹೇಳಿ ಗೊಣಗುತ ವಾಪಸ್ಸಾದನು. ರಾತ್ರಿಯಿಡೀ ಆ ಕುಟುಂಬದ ಅಳು, ಸಂಕಟ, ಯಾರಿಗೂ ನಿದ್ದೆ ಇಲ್ಲ...

ಈಗಲೂ ಓಡಿ ಬರುತ್ತಿರುವ ಆ ಮಗು, ಮಗನನ್ನು ಪಡೆಯಲು ಹವಣಿಸುವ ತಾಯಿಯ ಚಿತ್ರ ಕಣ್ಮುಂದೆ ನಿಲ್ಲುತ್ತದೆ. ಯಾರ ಕರುಳು ಚುರ್ರೆನ್ನುವುದಿಲ್ಲ ಹೇಳಿ...?

ಇನ್ನೊಮ್ಮೆ ಹೀಗೆ, ಉದ್ಯಾನದ ಕಿಟಕಿ ಪಕ್ಕದ ಒಂಟಿ ಆಸನಕ್ಕೆ ರಾತ್ರಿಯಿಡಿ ಬೆನ್ನು ಕೊಟ್ಟು ಕುಳಿತಿದ್ದೆ. ಬೋಗಿ ತುಂಬಿ ತುಳುಕುವಷ್ಟು ಜನವೋ ಜನ. ನಡು ರಾತ್ರಿಯಲ್ಲಿ ಶುರುವಾಯಿತು ನೋಡಿ ಕಿನ್ನರಿಯರ ಅಂತರ್ ಜಗಳ. ಕುಡಿಯುತ ಜಗಳ, ಬಯ್ಯುತ ಜಗಳ. ಹೊಸಬಳೊಬ್ಬಳ ಪ್ರವೇಶವಾಗಿತ್ತೇನೋ... ಅವಳನ್ನು ಕುಡಿದ ಮತ್ತಿನಲ್ಲಿ ಒದೆಯುತ್ತಿದ್ದರೇ ಗೊತ್ತಿಲ್ಲ. ಆದರೆ, ರಾತ್ರಿ ಪೂರ್ತಿ 'ಬೋಗಿ' ಗಲಿ-ಬಿಲಿ ದಡ-ಬಡ ಗಲಾಟೆಯಲ್ಲಿ ಮುಳುಗಿ ಹೋಗಿತ್ತು. ಅನೇಕ ಹೆಂಗಸರು ಒಂಟಿಗಾಲಿನ ಮೇಲೆಯೇ ನಿಂತು ಪ್ರಯಾಣಿಸುತ್ತಿದ್ದರು. ಅಷ್ಟರಲ್ಲಿ ಒಬ್ಬ ಹೆಂಗಸು 'ಸತ್ತನಪ್ಪೋ...' ಎಂದು ಎದೆ ಬಿರಿವಂತೆ ಚೀರಿದಳು. ಮದುವೆಯಾದ ಹರೆಯದ ಹೆಂಗಸು. ಒಂದೂವರೆ ತಿಂಗಳೂ ಪೂರ್ತಿಯಾಗದ ಗರ್ಭವತಿ. ತಳ್ಳಾಟ ಎಳೆದಾಟದಲ್ಲಿ ಏನಾಯ್ತೊ... ಆದರೆ ಇದ್ದಕ್ಕಿದ್ದಂಗೆ ರಕ್ತ ಸ್ರಾವವಾಗ ತೊಡಗಿತು. ಜನರಲ್ ಬೋಗಿಯಲ್ಲಿ ಇರುವ ಶೌಚಾಲಯಗಳಲ್ಲಿ ಬೇಕಾದಷ್ಟು ನೀರಿರುವುದೂ ಕ್ವಚಿತ. ಅವಳನ್ನು ಹಾಗೂ ಹೀಗೂ ಶೌಚಕ್ಕೆ ಒಯ್ದು ಏನೆಲ್ಲಾ ಸಹಾಯ ಮಾಡಿದರೂ ಇಡೀ ರಾತ್ರಿ ಆ ಹೆಂಗಸು ಅನುಭವಿಸಿದ ಯಾತನೆಗೆ ಎದೆ ಒಡೆದು ಹೋಗುವಂತಾಗಿತ್ತು. ಈ ದಟ್ಟಣೆ ತಗ್ಗಿಸಲು ಇನ್ನಷ್ಟು ಬೋಗಿಗಳು ಬೇಕು ಎಂದು ಅವತ್ತನ್ನಿಸಿತು. ಆದರೆ ಈ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಹೊಡೆತಕ್ಕೆ ಕಿತ್ತೆದ್ದು ಹೊಟ್ಟೆ ಹೊರೆಯಲು ಅಲೆದಾಡುತ್ತಿರುವ ಬಡ ಕಾರ್ಮಿಕರ ಸಂಖ್ಯೆ ಅತ್ಯಧಿಕವಾಗಿದೆ. ಈಗ ಟ್ರೈನು ಪೂರ್ತಿ ಬೇಕು. ದುಡಿವ ಜನತೆಯು ಶ್ರಮಬೇಕು ಶಹರುಗಳಿಗೆ. ಅನುಕೂಲಗಳೇಕೆ ಬೇಡ. 'ಕೂಲಿ ಎಕ್ಸ್‌ಪ್ರೆಸ್' ಬೇಕೇ ಬೇಕು ಹೌದಲ್ಲವೇ...?

ಓಟಿನ ಕಾಳಜಿಯ ಪ್ರಣಾಳಿಕೆ ಪಾಠ ಕಲಿಯದ ಕಾಂಗ್ರೆಸ್

ಪುಟ 3 ರಿಂದ

ಉದ್ಯೋಗ ಖಾತ್ರಿ ಯೋಜನೆಯ ಪರಿಣಾಮಕಾರಿ ಜಾರಿಯ ಬಗ್ಗೆಯೂ ಕಾಂಗ್ರೆಸ್ ಪ್ರಣಾಳಿಕೆ ಗಮನಹರಿಸಿಲ್ಲ.

ಇಂದು ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರದಂತೆ ತಡೆಯಬೇಕಿದೆ. ಕೋಮುವಾದಿ ಶಕ್ತಿಗಳು ಬಲಗೊಳ್ಳುತ್ತಿರುವುದು ಕಾಂಗ್ರೆಸ್ ಅನುಸರಿಸುತ್ತಿರುವ ಆರ್ಥಿಕ, ರಾಜಕೀಯ ನೀತಿಗಳಿಂದ ಉದ್ಭವವಾಗುತ್ತಿರುವ ಅತೃಪ್ತಿಯನ್ನು ಬಳಸಿಯೇ. ಆದ್ದರಿಂದ ಕೋಮುವಾದಿಗಳನ್ನು ಸೋಲಿಸುವುದಾಗಿ ಹೇಳಿಕೊಂಡಿರುವ ಕಾಂಗ್ರೆಸ್ ಪಕ್ಷ ಜನವಿರೋಧಿ ನೀತಿಗಳನ್ನು ಕೈಬಿಡುವುದರತ್ತಲೂ ಆದ್ಯತೆಯ ಗಮನ ನೀಡಲೇಬೇಕು.

ಹಿಂದಿನ ಚುನಾವಣೆಗಳಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿನ ಜನತೆ ಕಲಿಸಿದ ಪಾಠದಿಂದ ಏನನ್ನಾದರೂ ಕಾಂಗ್ರೆಸ್ ಕಲಿತೀತೇ?

ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಶೇ.84ರಷ್ಟು ಜನ 2400 ಕ್ಯಾಲೋರಿಯಷ್ಟು ಆಹಾರ ಗಳಿಕೆ ಸಾಮರ್ಥ್ಯವಿಲ್ಲದವರಾಗಿದ್ದಾರೆ. ಅಂದರೆ ದಿನದಲ್ಲಿ ಒಂದು ಹೊತ್ತು ಊಟಕ್ಕೆ ಕಷ್ಟವಿದೆ. ಹೀಗಿರುವಾಗ ಈಗಿನ 'ಟಾರ್ಗೆಟೆಡ್ ರೇಷನ್' ನೀತಿ ಬಿಟ್ಟು ಎಲ್ಲರಿಗೂ ದಕ್ಕುವಂತೆ ಸಾರ್ವತ್ರಿಕ ಪಡಿತರ ನೀಡಿಕೆ ಅತ್ಯಗತ್ಯ.

ಇಂತಹ ಜನಪರ ಕಾರ್ಯಕ್ರಮಗಳ ಯೋಜನೆ ಜಾರಿಗೊಳಿಸಬೇಕಾದರೆ ಅಡ್ಡಿಯಾಗಿರುವುದು ಇದೇ ಸರ್ಕಾರ ಹಾಕಿಕೊಂಡ ನಿರ್ಬಂಧಗಳು. ಆರ್ಥಿಕ ಹೊಣೆಗಾರಿಕೆ ಕಾಯ್ದೆ ನಿರ್ಬಂಧವ ಉಲ್ಲಂಘಿಸದೇ ಪ್ರಕಟಿತ ಜನಪರ ಯೋಜನೆಗಳ ಜಾರಿ ಅಸಾಧ್ಯ. ಇದನ್ನು ಸರಿಪಡಿಸದೆ ನೀರಾವರಿ, ವಿದ್ಯುತ್‌ನಂತಹ ಇತರೆ ಮೂಲಭೂತ ಅಭಿವೃದ್ಧಿಗೆ ಮೀಸಲಾದ ಹಣವನ್ನು ಇತ್ತ ಕಡೆ ಬಳಸಬೇಕಾಗುವುದು. ಅಂದರೆ ಈ ಪ್ರದೇಶಗಳು ಸೊರಗುತ್ತವೆ. ಇಂತಹ ನೀತಿಯ ಪರಿಣಾಮವಾಗಿ ವಿದ್ಯುತ್ ಉತ್ಪಾದನೆ ಕುಸಿತಗೊಂಡು ವಿದ್ಯುತ್ ಕ್ಷಾಮ ತಲೆದೋರುವ, ಮುಂದೆ ಕೈಗಾರಿಕಾ ಬಿಕ್ಕಟ್ಟಿಗೂ ಇದು ಹಾದಿ ಮಾಡುವ ಅಪಾಯದ ಸನ್ನಿವೇಶವನ್ನು ರಾಜ್ಯ ಎದುರಿಸುತ್ತಿದೆ. ಆದ್ದರಿಂದ ಕೇಂದ್ರ ರಾಜ್ಯಗಳ ನೀತಿಗಳಲ್ಲಿ ಬದಲಾವಣೆ ಅನಿವಾರ್ಯ.

ಹ್ಹ...ಹ್ಹಾ...ಹ್ಹಾ...

ರೈತರ ಆತ್ಮಹತ್ಯೆಗಳಿಗೆ ಏನು ಕಾರಣ ಎನ್ನುವ ಚರ್ಚೆ ಸಂಬಂಧ ಪತ್ರಕರ್ತ ಪಿ.ಸಾಯಿನಾಥ್ ಹೇಳಿದ್ದು ಇದು.

'.... ರೈತರ ಆತ್ಮಹತ್ಯೆಗಳಿಗೆ ಕಾರಣ ಕೃಷಿ ಬಿಕ್ಕಟ್ಟಲ್ಲ. ಕುಡಿತ, ರೈತರು ವಿಪರೀತ ಕುಡಿಯೋದನ್ನ ಕಲಿತಿರೋದರಿಂದ ಅವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ.' ಅಂತ ಹಲವಾರು ಜನ ವಾದಿಸುತ್ತಾರೆ. ಅರೆ! ಕುಡಿತದಿಂದಾಗಿ ರೈತರು ಸಾಯುತ್ತಾರೆ ಅಂತಾಗಿದ್ದರೆ ನಮ್ಮ ದೇಶದ ಅರ್ಧಕ್ಕರ್ಧ ಜನ ಪತ್ರಕರ್ತರು ಇವತ್ತು ಬದುಕಿರುತ್ತಲೇ ಇರಲಿಲ್ಲ.

ಆರೋಗ್ಯ ಸುಧಾರಣೆಗೆ ವೈಯುಕ್ತಿಕ ಪ್ರಯತ್ನಗಳು ಸಾಲದು. ಸರ್ಕಾರ ಜನಾರೋಗ್ಯಕ್ಕೆ ಆದ್ಯತೆ ನೀಡಬೇಕು... ಆದರೆ ಜಾಗತೀಕರಣದ ಪ್ರಭಾವದಲ್ಲಿ ಸರ್ಕಾರ ಆರೋಗ್ಯ ವ್ಯವಸ್ಥೆಯ ಖಾಸಗೀಕರಣಕ್ಕೆ ಆದ್ಯತೆ ನೀಡುವುದರಿಂದ ಬಡವರ ಮತ್ತು ಮಹಿಳೆಯರ ಆರೋಗ್ಯ ಸ್ಥಿತಿ ಎತ್ತ ಸಾಗಿದೆ ನೋಡಿ!

ಮಹಿಳೆ, ಆರೋಗ್ಯ, ಅಭಿವೃದ್ಧಿ

ಡಾ. ಪ್ರಕಾಶ್ ಸಿ. ರಾವ್, ಅಧ್ಯಕ್ಷರು, ಜನಾರೋಗ್ಯ ಆಂದೋಲನ, ಕರ್ನಾಟಕ

ವಿಜ್ಞಾನದ ಆವಿಷ್ಕಾರಗಳು ಜನಾರೋಗ್ಯ ಸುಧಾರಿಸಲು ಮುಂದಾಗುತ್ತಿದ್ದಾಗಲೂ ಜನಾರೋಗ್ಯ ಸುಧಾರಣೆ ಸಮರ್ಪಕ ವಾಗಿಲ್ಲ. ಜನಾರೋಗ್ಯ ಪರಿಸ್ಥಿತಿಯಲ್ಲಿ ಹಲವಾರು ಕೊರತೆಗಳು ಎದ್ದು ಕಾಣುತ್ತಿವೆ. ಅದರಲ್ಲೂ ಮಹಿಳೆಯ ಆರೋಗ್ಯದಲ್ಲಂತೂ ಪರಿಸ್ಥಿತಿ ಚಿಂತಾಜನಕವಾಗಿದೆ. ಮಹಿಳಾ ಆರೋಗ್ಯ ಪರಿಸ್ಥಿತಿ ಹೇಗಿದೆ, ಅದರ ಕಾರಣಗಳೇನು, ಅದನ್ನು ಸರಿಪಡಿಸಲು ಯಾವ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ ಎಂಬುದನ್ನು ತಿಳಿಯೋಣ.

ನಮ್ಮ ಸಮಾಜದಲ್ಲಿ ಮಹಿಳೆಯರ ಸಂಖ್ಯೆ ಸರಿ ಸುಮಾರು ಪುರುಷರಷ್ಟಿದೆ. ಆರೋಗ್ಯ ಅಂಕಿ ಅಂಶಗಳನ್ನು ನೋಡಿದರೆ ಮಹಿಳಯರ ಆರೋಗ್ಯ ಪುರುಷರ ಆರೋಗ್ಯಕ್ಕಿಂತ ಕೆಳ ಮಟ್ಟದಲ್ಲಿದೆ. ಮಹಿಳೆಯರ ಆರೋಗ್ಯವನ್ನು ಸುಧಾರಿಸಿದರೆ ಕುಟುಂಬದ ಇತರರ ಆರೋಗ್ಯವನ್ನು ಸುಧಾರಿಸಲು ಸಹಾಯವಾಗುತ್ತದೆ.

ನಮ್ಮ ಸಮಾಜದಲ್ಲಿನ ಲಿಂಗ ತಾರತಮ್ಯ ಮಹಿಳೆಯ ಈ ಪರಿಸ್ಥಿತಿಗೆ ಒಂದು ಕಾರಣವಾದರೆ, ಜಾಗತಿಕರಣ ನೀತಿ ಮಹಿಳೆಯ ಅನಾರೋಗ್ಯವನ್ನು ಇನ್ನಷ್ಟು ಹೆಚ್ಚಿಸಿದೆ, ಹಾಗೂ ಮಹಿಳೆಯ ಅಭಿವೃದ್ಧಿಗೆ ಕಂಟಕವಾಗಿದೆ.

ಮಹಿಳಾ ಆರೋಗ್ಯದ ಪಕ್ಷಿ ನೋಟ.

- ಮಾತೃ ಮರಣ ಸಂಖ್ಯೆ —- 195/ 100000 ಜೀವಂತ ದಿನತುಂಬಿದ ಹೆರಿಗೆಗಳು.
- ಮಹಿಳೆಯರಿಗೆ ಕಡಿಮೆ ಶಿಕ್ಷಣ, ಕಡಿಮೆ ಸಂಬಳ.
- ಮಹಿಳೆಯರಿಗೆ ರಾಜಕೀಯದಲ್ಲಿ ಕಡಿಮೆ ಅವಕಾಶ.
- ಮಹಿಳೆಯರಿಗೆ ಭೂಮಿ ಮತ್ತು ಆಸ್ತಿ ಹಕ್ಕುಗಳ ವಂಚನೆ.
- 2001 ರ ಸೆನ್ಸಸ್ ಪ್ರಕಾರ 1000 ಹುಡುಗರಿಗೆ ಕೇವಲ 927 ಹುಡುಗಿಯರು.
- 31.6 ಶೇ. ಹುಡುಗಿಯರು ಬಾಲ ಕಾರ್ಮಿಕರು.
- 29.4 ಕೋಟಿ ಮಹಿಳಾ ಕಾರ್ಮಿಕರಲ್ಲಿ 10 ಶೇ ಮಹಿಳೆಯರಿಗೆ ಮಾತ್ರ ವ್ಯವಸ್ಥಿತ ದುಡಿಮೆ, 90 ಶೇ ಮಹಿಳೆಯರಿಗೆ ಅವ್ಯವಸ್ಥಿತ ದುಡಿಮೆ.
- 20 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲೇ ದಲಿತ ಮಹಿಳೆ ಕೂಲಿ ಕೆಲಸ ಮಾಡುತ್ತಾಳೆ.
- 70ಶೇ ದಲಿತ ಮಹಿಳೆಯರು ವ್ಯವಸಾಯದಲ್ಲಿ ಕೂಲಿಕಾರರು.
- ದಲಿತ ಮಹಿಳೆ ಸಾಕ್ಷರತೆ 23.76ಶೇ
- ಆರೋಗ್ಯ ವೆಚ್ಚದ ಕೇವಲ 17 ಶೇ ಮಾತ್ರ ಸರಕಾರ ಭರಿಸುತ್ತದೆ, 83ಶೇ ಜನರೇ ಭರಿಸುತ್ತಾರೆ.

ಮಹಿಳೆಯರ ಸಮಸ್ಯೆಗಳಾವವು ?

ಭಾರತದಲ್ಲಿ ಪ್ರಾರಂಭದಿಂದಲೂ ಬಡತನ ಮತ್ತು ಅನಕ್ಷರತೆ ಮಹಿಳೆಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಾ ಬಂದಿದೆ. ಈಗ ಬಡತನ ಹೆಚ್ಚುತ್ತಿದೆ. ಪ್ರತಿವರ್ಷ 2 ಕೋಟಿ ಭಾರತೀಯರು ಬಡವರಾಗುತ್ತಿದ್ದಾರೆ.

ಮುಂಗಡ ಪತ್ರದಲ್ಲಿ ಆರೋಗ್ಯಕ್ಕೆ ಹಣಕಾಸಿನ ಮಿಸಲಾತಿ ಹೆಚ್ಚಿಲ್ಲ. ಇದರಿಂದಾಗಿ ಮಹಿಳೆಯ ಆರೋಗ್ಯ ಹೇಗೆ ಸುಧಾರಿಸಲು ಸಾಧ್ಯ? ಮನೆಯಲ್ಲಿ ಮಹಿಳೆಗೆ ವಿಪರೀತ ಕೆಲಸದಿಂದಾಗಿ ವಿಶ್ರಾಂತಿ ದೊರಕದೇ ಆಯಾಸಗೊಳ್ಳುತ್ತಾಳೆ. ಮನೆಯಲ್ಲಿ ನೀರಿನ ಸೌಕರ್ಯ ಇರದೆ ನೀರು ತರಲು ಪ್ರಯಾಸ ಪಡಬೇಕಾಗುತ್ತದೆ. ಬಡತನದಿಂದ ಪೌಷ್ಟಿಕ ಆಹಾರದ ಕೊರತೆಯುಂಟಾಗಿ ಮಹಿಳೆಯ ಆರೋಗ್ಯ ದಿನೇದಿನೇ ಕ್ಷೀಣಿಸುತ್ತದೆ. ದುಡಿಯುವ ಮಹಿಳೆಯ ಸಮಸ್ಯೆಗಳ ಹಲವಾರು. ಅಸುರಕ್ಷಿತ ವಾತವರಣ, ಲೈಂಗಿಕ ಕಿರುಕುಳ, ಕಡಿಮೆ ಸಂಬಳ, ಉದ್ಯೋಗ ಖಾತರಿ ಇಲ್ಲದಿರುವುದು ಹಾಗೂ ಕೆಲಸದಲ್ಲಿನ ಅನಿಶ್ಚಿತತೆ ಮುಂತಾದವುಗಳು ಮಹಿಳೆಯ ದೈಹಿಕ ಹಾಗೂ ಮಾನಸಿಕ ಅಸ್ವಸ್ಥತೆಯನ್ನು ಉಂಟುಮಾಡುತ್ತದೆ. ಮಹಿಳೆ ಹಿಂಸೆಯಿಂದ ಬಳಲುವ ಪ್ರಸಂಗಗಳು ಹೆಚ್ಚುತ್ತಿವೆ. ಕಾರಣ ವರದಕ್ಷಿಣೆ ಪೀಡೆ, ಹೆಣ್ಣು ಭ್ರೂಣ ಹತ್ಯೆ ಇತ್ಯಾದಿ.ಮಹಿಳೆಗೆ ಅನಾರೋಗ್ಯವಾದಲ್ಲಿ ಆರೋಗ್ಯ ಸೌಲಭ್ಯಗಳು ಸುಲಭವಾಗಿ ದೊರುಕುವುದಿಲ್ಲ. ಪ್ರಾಥಮಿಕ ಆರೋಗ್ಯ ಸೇವೆಗಳು ಸಮರ್ಪಕವಾಗಿರದೇ ಇರುವುದು, ಆರೋಗ್ಯ ಕೇಂದ್ರಗಳಲ್ಲಿ ಮಹಿಳಾ ಸಿಬ್ಬಂದಿಗಳು ಇರದಿರುವುದರಿಂದ ಮಹಿಳೆ ದೈಹಿಕ ಪರೀಕ್ಷೆ ಮಾಡಿಸಿಕೊಳ್ಳದೇ ವಂಚಿತಳಾಗುತ್ತಾಳೆ. ಗಂಡಸರಿಂದ ಚಿಕಿತ್ಸೆಯನ್ನು ಪಡೆಯಲೇ ಬೇಕಾದ ಒತ್ತಡದಿಂದ ಅವಳು ಚಿಕಿತ್ಸೆಗೆ ಮುಂದಾಗದಿರುವುದು ಅವಳ ಅನಾರೋಗ್ಯವನ್ನು ಹೆಚ್ಚಿಸುತ್ತದೆ.

ಆರೋಗ್ಯ ಕೇಂದ್ರದಲ್ಲಿ ಅಗತ್ಯ ಔಷಧಿಗಳ ಕೊರತೆ ಇರುತ್ತದೆ. ವೈದ್ಯರು ಔಷಧಿಗಳನ್ನು ಕೊಂಡುಕೊಳ್ಳಲು ಚೀಟಿ ಬರೆದು ಕೊಟ್ಟಾಗ ಹಣಕಾಸಿನ ಕೊರತೆಯಿಂದ ಔಷಧಿಗಳನ್ನು ಕೊಂಡು ಕೊಳ್ಳದೆ ಅನಾರೋಗ್ಯ ಉಲ್ಬಣಗೊಳ್ಳುತ್ತದೆ. ಈಗ ನಾವು ಜಾಗತೀಕರಣದ ಯುಗದಲ್ಲಿ ಇದ್ದೇವೆ. ಜಾಗತೀಕರಣ ಸರಕಾರದ ಮೇಲೆ ಪ್ರಭಾವ ಬೀರಿದೆ. ಇದರಿಂದಾಗಿ ಸರಕಾರ ಆರೋಗ್ಯ ಸುಧಾರಣೆಯಂತಹ ಸಾಮಾಜಿಕ ಜವಾಬ್ದಾರಿಯಿಂದ ಹಿಂತೆಗೆಯಲು ಸರ್ಕಾರ ಮುಂದಾಗಿದೆ. ಇದರಿಂದಾಗಿ ಸರಕಾರ ಅಭಿವೃದ್ಧಿ ಕಾರ್ಯಗಳನ್ನು ಕೈಬಿಡುತ್ತಾ ಬಂದಿರುವುದನ್ನು 1991 ರಿಂದ ಇಲ್ಲಿಯವರೆಗಿನ ಎಲ್ಲ ಹಣಕಾಸಿನ ಮುಂಗಡ ಪತ್ರಗಳಿಂದ ಕಾಣಬಹುದಾಗಿದೆ. ಇದರ ಪರಿಣಾಮ ದುಡಿಯುವ ಮಹಿಳೆಗೆ ಕಡಿಮೆ ಕೂಲಿ, ನೈರ್ಮಲ್ಯ ಕಾರ್ಯಕ್ರಮಗಳಿಂದ ಸರಕಾರದ ಹಿಂತೆಗೆತ, ಪೌಷ್ಠಿಕ ಆಹಾರದ ಉಪಯೋಗದಲ್ಲಿ ಕಡಿತ ಮುಂತಾದ ನಕಾರಾತ್ಮಕ ಪರಿಣಾಮಗಳು ಮಹಿಳೆಯ ಆರೋಗ್ಯದ ಮೇಲೆ ಕಂಡು ಬಂದಿವೆ. ಮಹಿಳೆಯ ಆರೋಗ್ಯದ ಹಕ್ಕುಗಳನ್ನು ಕಡೆಗಣಿಸಲಾಗಿದೆ. ಜನಪರ ಆರೋಗ್ಯ ನೀತಿ, ಔಷಧ ನೀತಿ ಇಲ್ಲದಾಗಿದೆ. ಸಾಮಾಜಿಕ ಅನಿಷ್ಟಗಳಾದ ಹೆಣ್ಣುಭ್ರೂಣ ಹತ್ಯೆ, ವರದಕ್ಷಿಣೆಯ ಹಿಂಸೆ, ಹೆಣ್ಣು ಗಂಡುಗಳ ನಡುವಿನ ಪಕ್ಷಪಾತ, ಆರೋಗ್ಯ ಸುಧಾರಣೆಗೆ ಮುಂಬರದಿರುವ ಮಹಿಳೆಯರು-ಮುಂತಾದುವುಗಳು ಮಹಿಳೆಯ ಅನಾರೋಗ್ಯಕ್ಕೆ ಕಾರಣವಾಗಿವೆ.



ಮಹಿಳೆಯ ಆರೋಗ್ಯದ ಮೇಲೆ ಪರಿಣಾಮ

'ರಕ್ತ ಹೀನತೆ, ಮಹಿಳೆಯರ ಪ್ರಮುಖ ಆರೋಗ್ಯ ಸಮಸ್ಯೆಯಾಗಿದೆ. ಇದನ್ನು ಸಂಪೂರ್ಣ ತಡೆಗಟ್ಟಬಹುದು ಹಾಗೂ ಗುಣಪಡಿಸಬಹುದು. ಆದರೆ ಕಬ್ಬಿಣ ಹಾಗೂ ಫೋಲಿಕ್ ಆಮ್ಲದ ಮಾತ್ರೆಗಳ ಕೊರತೆಯಿಂದಾಗುವ ರಕ್ತಹೀನತೆ ಇನ್ನು ಸಮಸ್ಯೆಯಾಗಿಯೇ ಉಳಿದಿದೆ.

- ಸಾಂಕ್ರಾಮಿಕ ರೋಗಗಳು ಉದಾ. ಮಿದುಳು ಜ್ವರ, ಡೆಂಗು; ಇತ್ತೀಚಿಗೆ ಚಿಕು ಗುನ್ಯಾ, ಮಲೇರಿಯಾ ಜ್ವರಗಳು ಅನೈರ್ಮಲ್ಯದಿಂದ ಉಂಟಾಗುತ್ತಿವೆ. ನೈರ್ಮಲ್ಯ ಸಾಧನೆಯಲ್ಲಿನ ಕೊರತೆ ಈ ರೋಗಗಳಿಗೆ ಕಾರಣ. ಮಹಿಳೆಯರಲ್ಲಿ ಮೂತ್ರ ಕೋಶದ ಸೋಂಕು ಹೆಚ್ಚಾಗಿರುತ್ತದೆ, ಇದಕ್ಕೆ ಕಾರಣ ಅನೈರ್ಮಲ್ಯ ವಾತವರಣ.'ಗುಣಪಡಿಸಬಹುದಾದ ರೋಗಗಳಾದ ಬೇಧಿ,ಪುಪ್ಪುಸ ಸೋಂಕು (ಕಟ್ಟಿಗೆ ಒಲೆಯ ಹೊಗೆಯಿಂದ) ಗ್ರಾಮೀಣ ಹೆಣ್ಣು ಮಕ್ಕಳಲ್ಲಿ ವ್ಯಾಪಕವಾಗಿವೆ.' 'ಕ್ಷಯರೋಗ' ಭಾರತದಲ್ಲಿ ವ್ಯಾಪಕವಾಗಿ ಕಂಡು ಬರುತ್ತದೆ. ಇದು ಮಹಿಳೆಯರಲ್ಲಿ ಸಾವು ಹಾಗೂ ಬಂಜೆತನಕ್ಕೆ ಕಾರಣವಾಗಿದೆ. ಇದಲ್ಲದೆ ರಕ್ತ ಹೀನತೆ ಗರ್ಭಪಾತ, ದಿನ ತುಂಬದೆ ಹುಟ್ಟುವ ಮಕ್ಕಳು, ಕಡಿಮೆ ತೂಕದ ಮಕ್ಕಳ ಜನನಕ್ಕೆ ಕಾರಣವಾಗಿದೆ.
- ಮಾತೃ ಮರಣ ಸಂಖ್ಯೆ ಈಗಲೂ ಭಾರತದಲ್ಲಿ ಹೆಚ್ಚಾಗಿದೆ ಉದಾ:- ಹೆರಿಗೆಗೆ ಸಂಬಂದಿಸಿದ ಕಾರಣಗಳು, ಗರ್ಭಪಾತಗಳು ಇತ್ಯಾದಿ.
- ಮಹಿಳೆಯ ವಿಶೇಷ ಸಮಸ್ಯೆಗಳಾದ ನಿಶ್ಯಕ್ತಿ, ಬೆನ್ನು ನೋವು, ಗರ್ಭಾಶಯ ಇಳಿಯುವಿಕೆ, ಮುಟ್ಟಿನ ಸಮಸ್ಯೆಗಳು, ಮಾನಸಿಕ ಒತ್ತಡ, ಕ್ಯಾನ್ಸರ್, ಮುಂತಾದುವುಗಳನ್ನು ಸುಲುಭವಾಗಿ ತಡೆಗಟ್ಟಬಹುದಾಗಿದೆ.
- ಮಾನಸಿಕ ಆರೋಗ್ಯ : 11ಶೇ ಪುರುಷರಲ್ಲಿ ಮಾನಸಿಕರೋಗಗಳು ಕಂಡು ಬಂದರೆ, 15ಶೇ ಮಹಿಳೆಯರಲ್ಲಿ ಮಾನಸಿಕ ರೋಗಗಳು ಕಂಡು ಬರುತ್ತಿವೆ ಇವುಗಳಲ್ಲಿ ಮುಖ್ಯವಾದುವುಗಳು-ಮುಟ್ಟು ಪೂರ್ವ ಆತಂಕ, ಹೆರಿಗೆ ನಂತರದ ಖಿನ್ನತೆ, ಆತ್ಮ ಹತ್ಯೆಗಳು ಇತ್ಯಾದಿ.
- 16 ಶೇ ಮಹಿಳೆಯರಲ್ಲಿ ಕೌಟುಂಬಿಕ ಹಿಂಸೆ ಇದ್ದು, ಇದು ಮಾನಸಿಕ ಒತ್ತಡಕ್ಕೆ ಕಾರಣವಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ ಹಲವಾರು ರಾಷ್ಟ್ರೀಯ ನೀತಿಗಳಿದ್ದು ಆರೋಗ್ಯ ಸುಧಾರಿಸಲು ಸಹಾಯಕವಾಗಬೇಕಾಗಿದೆ. ಅದರೂ ಮಹಿಳಾ ಆರೋಗ್ಯವನ್ನು ಸುಧಾರಿಸಲು ಸಾಧ್ಯವಾಗಿಲ್ಲ.

- ಪ್ರಾಥಮಿಕ ಆರೋಗ್ಯ ವ್ಯವಸ್ಥೆಜಾರಿಯಾಗಿಲ್ಲ.
- ಸಾಮಾಜಿಕ ಆರೋಗ್ಯ ನಿರ್ಧಾರಗಳನ್ನು ಜನರಿಗೆ ದೊರಕಿಸಿ ಕೊಟ್ಟಿಲ್ಲ.
- ಸರಕಾರ ಆರೋಗ್ಯ ಕ್ಷೇತ್ರದಿಂದ ಹಿಂತೆಗೆಯುತ್ತಿದೆ. ಹಾಗೂ ಖಾಸಗಿ ಕ್ಷೇತ್ರ ಅದರ ಸ್ಥಳವನ್ನು ಆಕ್ರಮ ಮಿಸುತ್ತಿದೆ.
- ಆರೋಗ್ಯದ ಬಗ್ಗೆ ಜನರಿಗೆ ಮಾಹಿತಿ ಇಲ್ಲ ಹಾಗೂ ಆರೋಗ್ಯಕಾರ್ಯಕ್ರಮಗಳಲ್ಲಿ ಜನರ ಭಾಗವಹಿಸುವಿಕೆ ಇಲ್ಲ.
- ಆರೋಗ್ಯ ಕ್ಷೇತ್ರದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ.
- ಆರೋಗ್ಯ ಮೂಲ ಭೂತ ಹಕ್ಕಾಗಿಲ್ಲ. ❍

ಏನು ಮಾಡಬಹುದಾಗಿದೆ?

- ಸಾಮಾಜಿಕ ಅಗತ್ಯತೆಗಳು ಮಹಿಳೆಗೆ ಲಭ್ಯವಾಗಬೇಕು.
- ಉದ್ಯೋಗ್ಯದಲ್ಲಿ ಸುರಕ್ಷತೆ/ ಸಮಾನತೆಯಿರಬೇಕು.
- ಆಹಾರ, ನೀರು, ಪೌಷ್ಠಿಕ ಆಹಾರ, ಶಿಕ್ಷಣ, ವೈದ್ಯಕೀಯ ಸೌಲಭ್ಯಗಳು ದೊರಕಲೇಬೇಕು.
- ಮಹಿಳೆ ಮೇಲಿನ ಹಿಂಸೆ, ದೌರ್ಜನ್ಯ, ಶೋಷಣೆ ನಿಲ್ಲಬೇಕು.
- ಮುಂಗಡ ಪತ್ರದಲ್ಲಿ ಮಹಿಳಾ ಆರೋಗ್ಯಕ್ಕೆ ಹೆಚ್ಚಿನ ಹಣಕಾಸಿನ ವ್ಯವಸ್ಥೆಯಾಗಬೇಕು.
- ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಕೂಡಲೇ ಜಾರಿಗೊಳಿಸಬೇಕು.
- ಅಗತ್ಯ ಔಷಧಗಳು, ಗುಣಮಟ್ಟದ ಆರೋಗ್ಯ ಸೇವೆಗಳು ಕಡ್ಡಾಯವಾಗಿ ದೊರಕಬೇಕು.
- ಆರೋಗ್ಯ ಮೂಲ ಭೂತ ಹಕ್ಕಾಗಲು ಕಾನೂನಿನ ಕ್ರಮ ಕೈಗೊಳ್ಳ ಬೇಕು.
- ಇವುಗಳನ್ನು ಸಾಧಿಸಲು ವ್ಯಾಪಕವಾದ ಜಾಗೃತಿ ಕಾರ್ಯಕ್ರಮ ಹಾಗೂ ಹೋರಾಟಗಳನ್ನು ರೂಪಿಸಬೇಕು.

ಆರೋಗ್ಯ ಸುಧಾರಣೆಗೆ ಕೇವಲ ವೈಯುಕ್ತಿಕ ಪ್ರಯತ್ನಗಳು ಸಾಲದು. ಸರಕಾರ ಜನಾರೋಗ್ಯ ಸುಧಾರಿಸಲು ಸಜ್ಜಾಗಬೇಕು. ಇಂದು ಧಾರ್ಮಿಕ ನಂಬಿಕೆಗಳು ಆರೋಗ್ಯ ಸೇವೆ, ಶಿಕ್ಷಣ, ಕಾನೂನು ವ್ಯವಸ್ಥೆ, ಉದ್ಯೋಗ, ಮಾಧ್ಯಮಗಳು ಮಹಿಳಾ ಪಕ್ಷಪಾತವನ್ನು ತೋರಿಸುತ್ತಿವೆ. ಇಂಥ ಸಮಯದಲ್ಲಿ ಮಹಿಳೆಯರು ಜಾಗೃತರಾಗಿ ಆರೋಗ್ಯ ಹಕ್ಕು ಸಾಧಿಸಲು ಮುಂದಾಗಬೇಕು.

ಜೈವಿಕ ಇಂಧನದ ಜಪ ....

ಪುಟ 16 ರಿಂದ

ಎಮ್ಮೆ ದನ, ಹಸು ಕರುಗಳು ಹಲವಾರು ರೀತಿಯ ಹುಲ್ಲು, ಗಿಡ, ಸಸ್ಯಗಳನ್ನು ಆಹಾರವಾಗಿ ತಿಂದು ಅವುಗಳನ್ನು ತಮ್ಮ ದೇಹದಲ್ಲಿ ಸಕ್ಕರೆಯಂಶವನ್ನಾಗಿ ಮಾರ್ಪಡಿಸುವ ಶಕ್ತಿ ಹೊಂದಿರುವುದನ್ನು ನೋಡಿದ್ದೇವೆ. ಹೀಗೆ ಸಸ್ಯಗಳನ್ನು ಸಕ್ಕರೆಯನ್ನಾಗಿ ಪರಿವರ್ತಿಸುವುದಕ್ಕೆ ಆ ಪ್ರಾಣಿಗಳ ಕರುಳಿನಲ್ಲಿರುವ ಕಿಣ್ವ (ಎಂಜೈಮ್) ಎಂಬ ವಸ್ತುವಿರುವುದೇ ಕಾರಣ. ಈ ಕಿಣ್ವಗಳನ್ನು ಆ ಪ್ರಾಣಿಗಳಿಂದ ಪಡೆದುಕೊಂಡಲ್ಲಿ ಅದರಿಂದ ಸುಲಭವಾಗಿ ಸಸ್ಯಗಳಿಂದ ಎಥೆನಾಲ್ ತಯಾರಿಸಬಹುದೆಂದು ಅಮೇರಿಕಾದ ಮಿಚಿಗನ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಸಸ್ಯಗಳಲ್ಲಿರುವ ಗೊರಟದ ಒಳಭಾಗ (ಕರ್ನೆಲ್) ವನ್ನು ಮಾತ್ರವೇ ಎಥೆನಾಲ್ ತಯಾರಿಸಲು ಪ್ರಸ್ತುತದಲ್ಲಿ ಉಪಯೋಗಿಸಲಾಗುತ್ತಿದೆ. ಆದರೆ ಪ್ರಾಣಿಗಳ ಕಿಣ್ವಗಳನ್ನು ಉಪಯೋಗಿಸಿದಲ್ಲಿ ಇಡೀ ಸಸ್ಯವನ್ನೇ ಬಳಸಿಕೊಳ್ಳಬಹುದು, ಅದೂ ಕಡಿಮೆ ವೆಚ್ಚದಲ್ಲಿ.

ಮುಸುಕಿನ ಜೋಳ ಸಸ್ಯದ ಫೈಬರ್‌ಗಳನ್ನು ಎಥೆನಾಲ್ ಆಗಿ ಪರಿವರ್ತಿಸಲು ಪ್ರಮುಖವಾಗಿ ಮೂರು ಕಿಣ್ವಗಳ ಅವಶ್ಯಕತೆಯಿದೆ: ಯಾವುದೇ ಸಸ್ಯವು ಸೆಲ್ಯುಲೋಸ್ ಎಂಬ ವಸ್ತುವಿನಿಂದಾಗಿದ್ದು ಅದು ಪಾಲಿ ಸ್ಯಾಕರೈಡ್‌ಗಳೆಂಬ ಸಕ್ಕರೆಯಂಶಗಳಿಂದ ತುಂಬಿರುತ್ತದೆ. ಮೊದಲನೆಯದಾಗಿ ಸಸ್ಯದಲ್ಲಿರುವ ಸೆಲ್ಯುಲೋಸ್‌ನ್ನು ದೊಡ್ಡ ದೊಡ್ಡ ಭಾಗಗಳಾಗಿ ಕತ್ತರಿಸುವುದು ಸ್ಪಾರ್ಟನ್-1 ಎಂಬ ಕಿಣ್ವದಿಂದ. ಈ ಕಿಣ್ವವನ್ನು ಬಿಸಿನೀರಿನಲ್ಲಿ ಮಾತ್ರವೇ ವಾಸಿಸುವ ಸೂಕ್ಷ್ಮಜೀವಿಯಿಂದ ಪಡೆಯಲಾಗುತ್ತದೆ. ಹೀಗೆ ಕತ್ತರಿಸಿದ ಸೆಲ್ಯುಲೋಸ್ ಭಾಗಗಳನ್ನು ದೊಡ್ಡ ದೊಡ್ಡ ಸಕ್ಕರೆಯಂಶಗಳಾಗಿ ಪರಿವರ್ತಿಸುವುದು ಸ್ಪಾರ್ಟನ್-2 ಎಂಬ ಕಿಣ್ವ. ನಂತರದಲ್ಲಿ ಎಮ್ಮೆ, ದನ, ಹಸು, ಕರುಗಳಲ್ಲಿರುವ ಸ್ಪಾರ್ಟನ್-3 ಎಂಬ ಕಿಣ್ವವು ಈ ಸಂಕೀರ್ಣ ಸಕ್ಕರೆಯಂಶವನ್ನು ಸರಳ ಸಕ್ಕರೆಯಾಗಿ ಪರಿವರ್ತಿಸುತ್ತದೆ. ಸರಳ ಸಕ್ಕರೆಯನ್ನು ಸುಲಭವಾಗಿ ಎಥೆನಾಲ್ ಆಗಿ ಪರಿವರ್ತಿಸಬಹುದು.

ಬೆವರಿನ ನೆಲೆಯಲ್ಲಿ ನಿಂತು ನೋಡುವುದು ಸಾಧ್ಯವಾಗಬೇಕು

- ಬರಗೂರು ರಾಮಚಂದ್ರಪ್ಪ

ಜನಶಕ್ತಿ ವೆಬ್‌ಸೈಟ್ ಉದ್ಘಾಟಿಸಿ ಆಡಿದ ಮಾತುಗಳು

ಈ ದೇಶದ ಪ್ರಜಾಪ್ರಭುತ್ವವನ್ನು ಉಳಿಸಿರುವವರು ಜನ ಸಾಮಾನ್ಯರೇ. ಚುನಾವಣೆಗಳಲ್ಲಿ ಮತದಾನ ಮಾಡುವವರೂ ಅವರೇ. ಆದರೆ ನಮ್ಮ ರಾಜಕಾರಣಿಗಳಿಗೆ ನೆನಪಿಗೆ ಬರುವುದು ಚುನಾವಣೆಯ ಸಂದರ್ಭ ಬಂದಾಗ ಮಾತ್ರ.

ಜಾಗತೀಕರಣ, ಕೋಮುವಾದೀ ಕರಣಗಳು ಮಾಧ್ಯಮದ ಆದ್ಯತೆಗಳ ಪಲ್ಲಟ ಮಾಡಿವೆ. ಇಂತಹ ಸಂದರ್ಭದಲ್ಲಿ ಮಾಧ್ಯಗಳ ಜವಾಬ್ದಾರಿ ಹೆಚ್ಚಿದೆ. ಪ್ರಜಾಪ್ರಭುತ್ವ ಎಂದರೆ ಚುನಾವಣೆ ಮಾತ್ರ ಅಲ್ಲ.

ರಾಜಕೀಯ ಸರ್ವಾಧಿಕಾರದ ವಿರುದ್ಧ ಗಾಂಧೀಜಿ, ಸಾಮಾಜಿಕ ಸರ್ವಾಧಿಕಾರದ ವಿರುದ್ಧ ಅಂಬೇಡ್ಕರ್, ಆರ್ಥಿಕ ಸರ್ವಾಧಿಕಾರದ ವಿರುದ್ಧ ಸಮತಾವಾದಿಗಳು, (ಕಮ್ಯುನಿಸ್ಟರು) ಹೋರಾಟ ನಡೆಸಿದರು.

ಸಾಮಾಜಿಕ ಕ್ರಮ ಬದ್ಧತೆಯ ನಿರ್ಮಾತೃ ಯಾರು ಎಂದರೆ, ನಾವು ನಿರ್ಲಕ್ಷಿಸಿರುವ,



ತುಳಿತಕ್ಕೊಳಗಾದ ಶ್ರೀ ಸಾಮಾನ್ಯ.

ಉದ್ಯಮಪತಿಗಳು ಸರ್ಕಾರವನ್ನು ನಿಯಂತ್ರಿಸುತ್ತಾರೆ. ಸಂವಿಧಾನದ ಚೌಕಟ್ಟಿನೊಳಗೆ ಯಾವುದೇ ಆರ್ಥಿಕ ಚಟುವಟಿಕೆ ಮಾಡಿ ಅಂದರೆ, ಸಂವಿಧಾನಕ್ಕೆ ಬದ್ಧವಾಗಿ ಅಂದರೆ ದೇಶ ಬಿಡುತ್ತೇವೆ ಎನ್ನುತ್ತಾರೆ.

ಶ್ರೀಮಂತ ಉದ್ಯಮಪತಿಗಳ ಜಗಳಗಳು ರಾಜ ಕುಟುಂಬದ ಜಗಳಗಳೋ ಎಂಬಂತೆ ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿವೆ. ರಾಜರ ಅಂತಃಪುರ ಅರಮನೆಗಿಂತ ಹೆಚ್ಚು ಆದ್ಯತೆ ಪಡೆಯುವ ರೀತಿ ಇದೆ ಇದು.ದೇಶದ ಶೇ.77 ಜನರ ಆದಾಯ ದಿನಕ್ಕೆ ಕೇವಲ 20 ರೂಪಾಯಿ. ಆದರೆ ನಿಮಿಷಕ್ಕೆ 40 ಲಕ್ಷ ರೂ. ಆದಾಯ ಗಳಿಸುವವರೂ ಇದ್ದಾರೆ.

ಬೆವರಿನ ನೆಲೆಯಲ್ಲಿ ನಿಂತು ನೋಡಲು ಸಾಧ್ಯವಾದಾಗ ಇವೆಲ್ಲಾ ಕಾಣುತ್ತವೆ.

ಸಾಮಾಜಿಕ ಪ್ರಜ್ಞೆ ತಂದು ಕೊಟ್ಟವರು

- ಜಿ.ಎನ್.ಮೋಹನ್

ನಮ್ಮ ಗುಲ್ಬರ್ಗಾ ಜಿಲ್ಲೆಯ ಕಮಲಾಪುರದಲ್ಲಿ ದಲಿತನ ಹೆಣ ದಫನ್ ಆಗುವ ಸಂಬಂಧ ಗಲಾಟೆ ನಡೆದು ಹೆಣ ದಫನ್ ಮಾಡಲಾಗದೇ ಸರ್ಕಲ್‌ನಲ್ಲಿ ಹೆಣ ಸುಮಾರು ದಿನ ಇಟ್ಟು ಪ್ರತಿಭಟನೆ ನಡೆಸಬೇಕಾದ ಪರಿಸ್ಥಿತಿ ಇತ್ತು.

ಬೀದರ್‌ನಲ್ಲಿ ಬಿಳಿ ಶರ್ಟ್ ಹಾಕಿದ ಕಾರಣಕ್ಕೆ ದಲಿತನ ಕೊಲೆ ನಡೆದು ಹೋಯಿತು. ಇಂತಹ ಅನೇಕ ಸಂದರ್ಭಗಳಲ್ಲಿ ಪಿ.ಸಾಯಿನಾಥ್ ಕರ್ನಾಟಕಕ್ಕೆ ಸಹ ಭೇಟಿ ನೀಡಿದ್ದರು. ಬರೀ ಬೆಲೆ ಇಳಿಸುವ ಸಮರದಲ್ಲಿ ಪ್ರತಿಕೋದ್ಯಮ ನಿರತವಾಗಿದ್ದಾಗ ಮಾಧ್ಯಮಗಳಿಗೆ ಒಂದು ಸಾಮಾಜಿಕ ಪ್ರಜ್ಞೆ ತಂದು ಕೊಟ್ಟವರು ಪಿ.ಸಾಯಿನಾಥ್

ಸಮೂಹ ಮಾಧ್ಯಮಗಳು - ಸಮೂಹ ವಾಸ್ತವಗಳ ನಡುವೆ ಕಂದರ ಹೆಚ್ಚುತ್ತಿದೆ

- ಪಿ.ಸಾಯಿನಾಥ್

ಖ್ಯಾತ ಪತ್ರಕರ್ತ ಪಿ.ಸಾಯಿನಾಥ್‌ರವರು 'ಜನಶಕ್ತಿ' ಕನ್ನಡ ವಾರಪತ್ರಿಕೆ ವರದಿಗಾರರು- ಬರಹಗಾರರೊಂದಿಗೆ, ಕಳೆದ ಮಾರ್ಚ್ 27 ರಂದು ಸಂವಾದದಲ್ಲಿ ಪಾಲ್ಗೊಂಡು ತಮ್ಮ ಅಮೂಲ್ಯ ಅನುಭವ ಹಂಚಿಕೊಂಡರು. ಅದೇ ದಿನ ಸಂಜೆ ನಡೆದ 'ಜನಶಕ್ತಿ' ಅಂತರ್ಜಾಲ ತಾಣದ ಉದ್ಘಾಟನಾ ಸಮಾರಂಭದ ಕುರಿತ ಸಂಕ್ಷಿಪ್ತ ವರದಿ ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ. ಈ ಎರಡೂ ಕಾರ್ಯಕ್ರಮಗಳ ವಿವರ ವರದಿ ಕಾರಣಾಂತರಗಳಿಂದ ಪ್ರಕಟ ವಾಗಿರಲಿಲ್ಲ. ನಿಮಗಾಗಿ ಇಲ್ಲಿವೆ ಅವುಗಳ ಸಮಗ್ರ ವರದಿ.

ಸಮೂಹ ಮಾಧ್ಯಮಗಳು ಹಾಗೂ ಸಮೂಹ ವಾಸ್ತವಗಳಿಗೂ ನಡುವಿನ ಅಂತರ ತೀವ್ರಗೊಳ್ಳುತ್ತಿವೆ.

60 ಸಾವಿರ ಕೋಟಿ ರೂ.ಗಳ ರೈತರ ಸಾಲ ಮನ್ನಾ ಮಾಡಿದಾಗ ಮಾಧ್ಯಮಗಳು ಅದನ್ನು ಅಭೂತ ಪೂರ್ವ-ಹಿಂದೆಂದೂ ನಡೆದಿಲ್ಲದಂತದ್ದೂ ಎಂದವು. ರಾಷ್ಟ್ರೀಯ ಇಂಗ್ಲೀಷ್ ಪತ್ರಿಕೆಯೊಂದು ಇದೊಂದು ದುರಂತ ಎಂದೂ ಕಾರ್ಪೋರೇಷನ್ ವಲಯದ ನಿರೀಕ್ಷೆಗಳನ್ನು ಹುಸಿಗೊಳಿಸಲಾಗಿದೆ ಎಂದೂ ಈ ಬಗ್ಗೆ ಬರೆಯಿತು.

2004ರ ಚುನಾವಣೆಯ ನಂತರ ಮಾಧ್ಯಮಗಳಲ್ಲಿ ರೈತರು ಕಾಣಿಸಿಕೊಳ್ಳತೊಡಗಿದ್ದಾರೆ. ಸಾಲಮನ್ನಾ ಕ್ರಮ ಅಭೂತಪೂರ್ವವೇನೂ ಅಲ್ಲ. ಬ್ರಿಟಿಷರ ಕಾಲದಲ್ಲೂ ಸಾಲ ಮನ್ನಾ ಇತ್ತು.

2007ರ ನವೆಂಬರ್ 30 ರಾಜ್ಯ ಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಕೇಂದ್ರ ಕೃಷಿ ಮಂತ್ರಿ ಶರದ್‌ಪವಾರ್ ಪ್ರಶ್ನೆ ನಂ.238ಕ್ಕೆ ಉತ್ತರಿಸುತ್ತಾ, 1997 ರಿಂದ 2005 ರವರೆಗಿನ ಅವಧಿಯಲ್ಲಿ 1,49,238 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೇಂದ್ರ ಅಪರಾಧ ದಾಖಲಾತಿ ದಳ -ಎನ್.ಸಿ.ಆರ್.ಬಿ.ಯು ಪ್ರಕಾರ 2006ರಲ್ಲಿ 17,016 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎಂದು ಮಂತ್ರಿ ದೃಢೀಕರಿಸಿದರು. ಇಡೀ ದೇಶದ ಮುಂದೆ ಸರ್ಕಾರವೇ ಅಧಿಕೃತವಾಗಿ ಬಹುದೊಡ್ಡ ಪ್ರಮಾಣದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು ಒಪ್ಪಿಕೊಂಡಿತು. ಆದರೆ ಈ ಆತ್ಮಹತ್ಯೆಗಳಿಗೂ ಕೃಷಿಗೂ ಸಂಬಂಧವಿಲ್ಲ ಎಂದೂ ಕೊನೆಯಲ್ಲಿ ಮಾತೊಂದನ್ನು ಸೇರಿಸಲಾಗಿತ್ತು ಎಲ್ಲ ಪತ್ರಿಕೆ ಸುದ್ದಿ ವಾಹಿನಿಗಳ ಪ್ರಮುಖ ಸುದ್ದಿಯಾಗಬೇಕಾದ ಇಂತಹ ಒಂದು ಆಘಾತಕಾರಿಯಾದ ಅಂಶವು ಒಂದೇ ಒಂದು ಪತ್ರಿಕೆಗೆ, ಒಂದೇ ಒಂದು ಸುದ್ದಿ ವಾಹಿನಿಗೆ ಬಿಟ್ಟರೆ ಬೇರೆ ಯಾರಿಗೂ ಸುದ್ದಿ ಎಂದೇ ಅನಿಸಲಿಲ್ಲ.

■

ನಮ್ಮ ಊಟದ ಮೇಜುಗಳಿಗೆ ಆಹಾರವನ್ನು ಪೂರೈಸುತ್ತಿರುವ ರೈತ ಯಾಕೆ ಈ ಪರಿ ಆತ್ಮಹತ್ಯೆಗೆ ಮುಂದಾಗಿದ್ದಾನೆ ಅನ್ನುವ ಪ್ರಶ್ನೆ ಮೂಡಲೇ ಇಲ್ಲ.

ಹಿಂದೆಲ್ಲಾ ಕೃಷಿ, ಕಾರ್ಮಿಕ ವಿಚಾರಗಳಿಗೆ ವರದಿಗಾರರು ಇದ್ದರು. ಇಂದು ಇಲ್ಲ. ಅಂದರೆ ಜನಸಂಖ್ಯೆಯ ಶೇ 70 ರಷ್ಟಿರುವ ರೈತರು-ಕಾರ್ಮಿಕರಿಗೆ ನಮ್ಮ ಮಾಧ್ಯಮದಲ್ಲಿ ಜಾಗ ಇಲ್ಲ.

■

2004ರ ಚುನಾವಣೆಗೆ ಮುಂಚೆ ಮಾಧ್ಯಮಗಳಲ್ಲಿ ಚಂದ್ರಬಾಬುನಾಯ್ಡು ರನ್ನು ಕುರಿತ ಟೀಕೆಗಳಿಗೆ ಜಾಗವೇ ಇರಲಿಲ್ಲ. ನ್ಯೂಯಾರ್ಕ್ ಟೈಮ್ ಪತ್ರಿಕೆ ನಾಯ್ಡುರನ್ನು ಹಾಡಿ ಹೊಗಳುತ್ತಿದ್ದ ಕಾಲವದು. 2004ರ ಚುನಾವಣಾ ಫಲಿತಾಂಶ ಒಂದು ಅಚ್ಚರಿ. ಆಮೇಲೆ ಯಾಕೆ ಹೀಗಾಯ್ತು ಎಂಬ ವಿಷಯಕ್ಕೆ ಜಾಗ ಸಿಗಲಾರಂಭಿಸಿತು. ಚುನಾವಣಾ ಫಲಿತಾಂಶ ಬಂದ ಮೇಲೆ ಹಲವಾರು ರಾಷ್ಟ್ರೀಯ ಸುದ್ದಿ ವಾಹಿನಿಗಳಿಂದ, ಪತ್ರಿಕೆಗಳಿಂದ ನನಗೆ ಕರೆ ಬರಲು ಆರಂಭವಾಯಿತು. 2004ಕ್ಕೆ ಮುಂಚೆ ಕೃಷಿ ಬಿಕ್ಕಟ್ಟು ಎಂಬ ಪದವೇ ಬಳಕೆಯಲ್ಲಿರಲಿಲ್ಲ. ಆದರೆ ಪ್ರತಿ 30 ನಿಮಿಷಕ್ಕೆ ಒಬ್ಬ ರೈತನ ಆತ್ಮಹತ್ಯೆ ಸಂಭವಿಸುತ್ತಿತ್ತು.

●


ಬೆಂಗಳೂರಿನಿಂದ ಕೇವಲ 2 ಗಂಟೆಗಳ ಪ್ರಯಾಣ. ಮಂಡ್ಯಕ್ಕೆ ಹೋಗಿ ನೋಡಿ. ಮಹಾರಾಷ್ಟ್ರದ ವಿದರ್ಭದ 1 ಕೋಟಿ ರೂ. ಹತಾಶೆಯಲ್ಲಿದ್ದಾರೆ. 10 ರೈತರಲ್ಲಿ 7 ಜನ ಹತಾಶೆಯಲ್ಲಿದ್ದಾರೆ. ಅವರಲ್ಲಿ ಮುಕ್ಕಾಲು ಜನ ತೀವ್ರ ಹತಾಶೆಯಲ್ಲಿದ್ದಾರೆ.

ಮಗಳ ಮದುವೆ ಮಾಡಲಾಗಲಿಲ್ಲ ಎಂದು ತಂದೆ ಆತ್ಮಹತ್ಯೆ ಮಾಡಿಕೊಳ್ಳುವುದು. ತಂದೆಯ ಆತ್ಮಹತ್ಯೆಗೆ ಕಾರಣಳಾದೆ ಎಂದು ಮಗಳೂ ಆತ್ಮಹತ್ಯೆ ಮಾಡಿಕೊಳ್ಳುವುದು ಇಂತಹ ಪ್ರಕರಣಗಳು ವ್ಯಾಪಕ ನಡೆಯುತ್ತಿವೆ.

ಆದರೆ ಈ ವಿಚಾರದಲ್ಲಿ ಸರ್ಕಾರದ ಧೋರಣೆ-ಚುನಾವಣೆಯ ಫಲಿತಾಂಶವನ್ನು ಇಷ್ಟಪಡುವುದಿಲ್ಲ. ಚುನಾವಣಾ ಸಮೀಕ್ಷೆ ಇಷ್ಟಪಡುತ್ತೇನೆ ಎನ್ನುವಂತಿದೆ.

●

ಮಹಾರಾಷ್ಟ್ರದ ವಿದರ್ಭದಲ್ಲಿ ರೈತರ ಸಾಲು ಸಾಲು ಆತ್ಮಹತ್ಯೆಗಳು. ಕೃಷಿ ಬಿಕ್ಕಟ್ಟಿನ ಕುರಿತು ವರದಿ ಮಾಡಲು 6 ಜನ ಪತ್ರಕರ್ತರಿದ್ದರು. ಅದು ಕೂಡ ವಿಮಾನಯಾನ ರದ್ದಾಗಿದ್ದರಿಂದ ಇಬ್ಬರು ಪತ್ರಕರ್ತರು ಅನಿವಾರ್ಯವಾಗಿ ಉಳಿದಿದ್ದರು. ಆದರೆ ಅದೇ ಸಮಯದಲ್ಲಿ ಮುಂಬೈನಲ್ಲಿ ನಡೆದ 'ಲ್ಯಾಕ್ಮೆ ಇಂಡಿಯಾ ಫ್ಯಾಷನ್ ವೀಕ್' ನಲ್ಲಿ 512 ಜನ ಪೂರ್ಣಾವಧಿ ಪತ್ರಕರ್ತರಿದ್ದರು. 100 ದಿನ ಪತ್ರಿಕೆಗಳ ವರದಿಗಾರರು ಇದ್ದರು.



ನೆರೆಯ ವಿದರ್ಭದಲ್ಲಿ ಹತ್ತಿ ಬೆಳೆಯುವ ರೈತರು ಸಾವಿರ ಸಾವಿರ ಸಂಖ್ಯೆಯಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿರುವಾಗ ಅದೇ ಹತ್ತಿ ಬಟ್ಟೆ ತೊಟ್ಟ 'ಸುಂದರಿ'ಯರು ರ್‍ಯಾಂಪ್ ಮೇಲೆ ಮಾರ್ಜಾಲ ನಡಿಗೆ ನಡೆಯುತ್ತಿದ್ದರು. ಪತ್ರಕರ್ತರು ಈ ಸುಂದರಿಯರನ್ನು 'ಸರಿಯಾದ ಕೋನ' ದಿಂದ ಸೆರೆಹಿಡಿಯವುದಕ್ಕಾಗಿ ತಮ್ಮ ತಮ್ಮಲ್ಲೇ ಪರಸ್ಪರ ಬಡಿದಾಡಿಕೊಳ್ಳುತ್ತಿದ್ದರು.

■

ವಿದರ್ಭದ ಕೃಷಿ ಬಿಕ್ಕಟ್ಟಿನ ಕುರಿತು ಕೃಷಿ ಬಿಕ್ಕಟ್ಟಿನ ಕುರಿತು ಸ್ಥಳೀಯ ಮರಾಠಿ ಪತ್ರಿಕೆಗಳು, ಆಂಧ್ರದಲ್ಲಿ 'ಈ ನಾಡು' ಪತ್ರಿಕೆಯ ನರಸಿಂಹರೆಡ್ಡಿ ಮುಂತಾದವರು ಉತ್ತಮ ವರದಿ ಮಾಡಿದ್ದು ಬಿಟ್ಟರೆ ರಾಷ್ಟ್ರೀಯ ಮಾಧ್ಯಮ ಈ ಕುರಿತು ಗಮನಿಸಲೇ ಇಲ್ಲ.

●

ಜಗತ್ತಿನ ಬಿಲಿಯನರ್ಸ್‌ಗಳ ಪಟ್ಟಿಯಲ್ಲಿ ಭಾರತದ 53 ಮಂದಿ ಸ್ಥಾನ ಪಡೆದಿರುವುದು. ಜಗತ್ತಿನ 10 ಅತಿ ಶ್ರೀಮಂತರಲ್ಲಿ 4 ಜನ ಭಾರತೀಯರು ಸ್ಥಾನ ಪಡೆದಿರುವುದು, ಮುಖೇಶ್‌ಅಂಬಾನಿ ಪ್ರತಿ ನಿಮಿಷಕ್ಕೆ 40 ಲಕ್ಷ ರೂ ಲಾಭ ಗಳಿಸುತ್ತಿರುವುದು. ಇಂತಹವೇ ಸುದ್ದಿಗಳು ಮಾಧ್ಯಮಗಳಲ್ಲಿ ಆದ್ಯತೆಯ ಮುಖಪುಟದ ಸುದ್ದಿಗಳಾಗುತ್ತಿವೆ.

ಅರ್ಜುನ್‌ಸೇನ್ ಸಮಿತಿಯು ಆಗಸ್ಟ್ 2007 ರಲ್ಲೇ ಬಹಿರಂಗವಾದರೂ ಅದರಲ್ಲಿ ಪ್ರಮುಖ ಅಂಶಗಳು ಸುದ್ದಿಯಾಗಲೇ ಇಲ್ಲ. ಆ ವರದಿಯ ಪ್ರಕಾರ ದೇಶದ 836 ಮಿಲಿಯನ್ ಜನರ ದಿನದ ಆದಾಯ ಕೇವಲ 20 ರೂ. ಮಾತ್ರ. ದೇಶದ ದಲಿತರ ಶೇ.88 ಜನರು, ದೇಶದ ದಲಿತರ ಶೇ.88 ಜನರು, ದೇಶದ ಬುಡಕಟ್ಟು ಜನರ ಶೇ.88 ರಷ್ಟು ಜನರು, ಅದೇ ರೀತಿ ದೇಶದ ಮುಸ್ಲಿಮರ ಶೇ.80 ರಷ್ಟು ಜನರು ಈ 836 ಮಿಲಿಯನ್ ಜನರೊಳಗಿದ್ದಾರೆ.

●

ವಿಶ್ವ ಸಂಸ್ಥೆಯ ಪ್ರಕಾರ ದಿನಕ್ಕೆ ಒಂದು ಡಾಲರ್ ಆದಾಯವಿಲ್ಲದ ವ್ಯಕ್ತಿ ಬಡವ. ನಮ್ಮ ದೇಶದ ಕೃಷಿಕ ಕುಟುಂಬದ ಸರಾಸರಿ ಆದಾಯ ತಿಂಗಳಿಗೆ ರೂ.600 ಮಾತ್ರ ಇದೆ. ಅದರಲ್ಲಿಯೂ ಆಹಾರ ಖರೀದಿಗಾಗಿಯೇ 503 ರೂಪಾಯಿಗಳು ಖರ್ಚಾಗಿ ಹೋಗುತ್ತದೆ. ಶಿಕ್ಷಣ, ಆರೋಗ್ಯ, ಬಟ್ಟೆ ಬರೇ ಇತ್ಯಾದಿ ಎಲ್ಲ ಖರ್ಚುಗಳಿಗೆ ಇನ್ನುಳಿದ 97 ರೂಪಾಯಿಗಳು ಮಾತ್ರ. ಶ್ರೀಮಂತರು ಬಡವರ ನಡುವಿನ ಅಂತರ ತೀವ್ರವಾಗಿ ಬೆಳೆಯುತ್ತಿದೆ.

●

ಮಂಡ್ಯ ಜಿಲ್ಲೆಯ ಜಯಲಕ್ಷ್ಮಮ್ಮ ಆತ್ಮಹತ್ಯೆ ಮಾಡಿಕೊಂಡ ರೈತನ ಹೆಂಡತಿ. (ನಾನು ಆಕೆಯನ್ನು ವಿಧವೆ ಎಂದು ಕರೆಯುವುದಿಲ್ಲ. ಆಕೆಯನ್ನು ರೈತ ಮಹಿಳೆ ಎನ್ನುತ್ತೇನೆ) ಆಕೆ ಮೊದಲು ಸಹ ಬಹಳಷ್ಟು ಕೃಷಿ ಕೆಲಸಗಳನ್ನು ನಿಬಾಯಿಸುತ್ತಿದ್ದರು. ಗಂಡನ ಮರಣದ ನಂತರ ಇನ್ನಷ್ಟು ಹೆಚ್ಚು ಕೃಷಿ ಕೆಲಸಗಳನ್ನು ನಿಬಾಯಿಸುತ್ತಿದ್ದಾರೆ. ಆದರೆ ಪಡಿತರ ವ್ಯವಸ್ಥೆ ಮೂಲಕ ಅವರಿಗೆ ದಿನವೊಂದಕ್ಕೆ ಸಿಗುತ್ತಿರುವ ಅಕ್ಕಿ ಕೇವಲ 45 ಗ್ರಾಂ.

ಇದೇ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿರುವ ಶಿಕ್ಷೆ ತೀರ್ಮಾನವಾದ ಒಟ್ಟು ಅಪರಾಧಿಗೆ ಸಿಗುತ್ತಿರುವ ಆಹಾರ ದಿನಕ್ಕೆ 710 ಗ್ರಾಂ. ಅದೂ ಕೂಡ ಖೈದಿ ಇದಕ್ಕಾಗಿ ದುಡ್ಡು ಕೊಡಬೇಕಿಲ್ಲ.

'ಮಾಧ್ಯಮ ಕಂಪನೀಕರಣಗೊಳ್ಳುತ್ತಿದೆ'

ಜನಶಕ್ತಿ ವರದಿಗಾರರೊಂದಿಗಿನ ಸಂವಾದದಲ್ಲಿ ಪಿ.ಸಾಯಿನಾಥ್

ಇಂದು ಮಾಧ್ಯಮಗಳಲ್ಲಿ ಏನಾಗುತ್ತಿದೆ. ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಲಾರೆವು. ಮಾಧ್ಯಮ ಕಂಪನೀಕರಣ ಗೊಳ್ಳುತ್ತಿದೆ. (Corporatisation) ಮಾಹಿತಿ ಎನ್ನುವದೂ ಒಂದು ಉತ್ಪಾದನೆಯಾಗಿದೆ. ಕೈಗಾರಿಕೆ, ಕ್ರಿಕೆಟ್, ಮತ್ತು ಬಾಲಿವುಡ್ ಈ ಮೂರು ಸೇರುತ್ತಿದೆ. ಮಾಧ್ಯಮವನ್ನು ಆವರಿಸಿಕೊಳ್ಳುತ್ತಿದೆ.

•

ಮುದ್ರಣದ ಮೇಲೆ ಏಕಸ್ವಾಮ್ಯ ಹೊಂದಿರುವವರೇ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೇಲೆ, ಎಫ್.ಎಂ. ರೇಡಿಯೋ ಪುಸ್ತಕ, ಪ್ರಕಾಶನ, ಪುಸ್ತಕ ಅಂಗಡಿಗಳು ಎಲ್ಲದರ ಮೇಲೆ ಹಿಡಿತ ಹೊಂದಿದ್ದಾರೆ.

ವಸ್ತುಗಳನ್ನು ಮಾರುವವರಿಗೆ ಲಾಭ ದೊರೆಯುತ್ತದೆ. ಸುದ್ದಿ, ಮಾಹಿತಿಯೂ ಒಂದು ವಸ್ತುವಿನಂತೆ ಆಗಿದೆ. ಒಂದು ಬೃಹತ್ ವ್ಯಾಪಾರ ಜಾಲವಾಗಿದೆ. ವಾರ್ನರ್ ಮಾಲೀಕತ್ವದ ಟೈಮ್ 100 ದೇಶಗಳಲ್ಲಿ ಪ್ರಕಟವಾಗುತ್ತದೆ. ತಾವು ಎಷ್ಟು ಪತ್ರಿಕೆ, ನಿಯತಕಾಲಿಕಗಳನ್ನು ತರುತ್ತಿದ್ದೇವೆ ಎಂಬುದು ಅವರಿಗೇ ಗೊತ್ತಿಲ್ಲ. ಟೈಮ್ ಸಮೂಹದ ವಹಿವಾಟು ಜಗತ್ತಿನ 30 ಬಡ ದೇಶಗಳ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ)ಕ್ಕಿಂತ ಹೆಚ್ಚು.

ಇವುಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಎಂದು ಕರೆಯುವುದು ಸಹ ಕಷ್ಟ. 'ಪ್ಲಾನಟರಿ ಕಾರ್ಪೊರೇಷನ್' ಎಂದು ಕರೆಯಬೇಕಾಗುತ್ತದೆ.

•

ಮಹಾತ್ಮ ಗಾಂಧೀಜಿಯವರು 3 ಪತ್ರಿಕೆಗಳನ್ನು ನಡೆಸುತ್ತಿದ್ದರು. ಅಂಬೇಡ್ಕರ್, ನೆಹರೂರವರು ಪತ್ರಿಕೆಗಳನ್ನು ನಡೆಸುತ್ತಿದ್ದರು. ಈ ಎಲ್ಲಾ ನೇತಾರರು ಪತ್ರಿಕೆಯು ಸಮಾಜ ಬದಲಾವಣೆಯ ಸಾಧನ ಎಂದು ಪರಿಗಣಿಸಿದ್ದರು.

ಇಂದು ಪತ್ರಿಕೋದ್ಯಮ ಮಾಧ್ಯಮಗಳು ಎಂದರೆ ಉತ್ಪನ್ನ, ಜೀವನ ವಿಧಾನ, ಮೌಲ್ಯ ರಾಜಕೀಯ ಇವುಗಳ ಮಾರಾಟ ಎಂಬಂತಾಗಿದೆ.

•

(ಇಂಟರ್‌ನೆಟ್) ಅಂತರ್ಜಾಲದ ಒಟ್ಟು ವಹಿವಾಟು ಇದು 4 ಟ್ರಿಲಿಯನ್ ಡಾಲರ್ ಆಗಿದೆ.ಹಿಂದೆ ಬಂಡವಾಳಿಗರು ಪತ್ರಿಕೆಗಳಲ್ಲಿ ಜಾಹಿರಾತು ನೀಡುತ್ತಿದ್ದರು. ಈಗ ಅವರೇ ಪತ್ರಿಕೆಗಳ ಮಾಲೀಕತ್ವ ಹೊಂದಿದ್ದಾರೆ. ದೇಶದಲ್ಲಿ 2004ಕ್ಕೆ ಮುಂಚೆ 8-10 ವರ್ಷಗಳ ಕಾಲ ರೈತರ ಆತ್ಮಹತ್ಯೆಗಳಿದ್ದರೂ, ಅವುಗಳ ವರದಿ ಇದ್ದರೂ ಕೃಷಿ ಬಿಕ್ಕಟ್ಟು ಎಂಬ ಪದವೇ ಮಾಧ್ಯಮಗಳಲ್ಲಿ ಬಳಕೆಯಾಗಿರಲಿಲ್ಲ.

•

1997-2006ರ ನಡುವೆ 1.66 ಲಕ್ಷ ರೈತರ ಆತ್ಮಹತ್ಯೆಗಳು ಸಂಭವಿಸಿದವು. ದೇಶದ ಮಾಧ್ಯಮ ಇನ್ನೂ ಮಗುವಾಗಿದ್ದಾಗ ಕೃಷಿ ಬಿಕ್ಕಟ್ಟನ್ನು ಗಮನಿಸಲಾಗುತ್ತಿತ್ತು. 15 ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ಕಾರ್ಮಿಕ-ವರದಿಗಾರರು ಇರುತ್ತಿದ್ದರು. 10 ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ಗ್ರಾಮೀಣ ವರದಿಗಾರರು ಇರುತ್ತಿದ್ದರು. ಈಗ ಅದು ಬ್ಯುಸಿನೆಸ್ ಕರೆಸ್ಪಾಡೆಂಟ್ (ವಾಣಿಜ್ಯ ವರದಿಗಾರರು) ಎಂದಾಗಿದೆ. ಈ ವಾಣಿಜ್ಯ ವರದಿಗಾರರು ತಮಗೆಬೇಕಾದ ಮಾಹಿತಿಗಳಿಗಾಗಿ ಕಂಪನಿಗಳ ವಕ್ತಾರರನ್ನು ಸಂಪರ್ಕಿಸುತ್ತಾರೆ.

•

ರೇಷನ್ ವ್ಯವಸ್ಥೆಯ ಬಗೆಗೆ ಪತ್ರಿಕೆಯಲ್ಲಿ ಬರುವುದಿಲ್ಲ. ದೇಶಕ್ಕೆ ಅನ್ನ ಕೊಡುವವರು ಹಸಿದಿದ್ದಾರೆ. ಆ ಬಗ್ಗೆ ಪತ್ರಿಕೆಗಳಲ್ಲಿ ಬರುವುದಿಲ್ಲ. ಕೃಷಿ ಉತ್ಪನ್ನಗಳ ಬೆಲೆ ಏರುತ್ತಿವೆ. ಮಧ್ಯಮ ವರ್ಗಕ್ಕೆ ಬಿಸಿ ತಟ್ಟಿದೆ. ಹೀಗಾಗಿ ಬೆಲೆ ಏರಿಕೆ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಬರುತ್ತಿವೆ.

•

ಇಂದು ರೈತರ ಮನೆಯಲ್ಲಿ ಅವರ ಮಕ್ಕಳಿಗೆ ಹಾಲಿಲ್ಲ. ಅದನ್ನು ಮಾರುತ್ತಾರೆ. 10 ವರ್ಷದ ಹಿಂದಿನದಕ್ಕಿಂತ ಪರಿಸ್ಥಿತಿ ಈಗ ಬಿಗಡಾಯಿಸಿದೆ.

ಉತ್ಸಾ ಪಟ್ನಾಯಕ್ ಅವರು ತಮ್ಮ 'ರಿಪಬ್ಲಿಕ್



ಆಫ್ ಹಂಗರ್ಸ್' ಪುಸಕ್ತದಲ್ಲಿ ಈ ಬಗ್ಗೆ ಎಲ್ಲಾ ವಿವರಿಸಿದ್ದಾರೆ. ಶಿಲ್ಪಾ ಶೆಟ್ಟಿ ಕುರಿತು ವರದಿ ಮಾಡಲು ಹೋಗುವವರನ್ನು ಬಿಟ್ಟು ಉಳಿದ ಪತ್ರಕರ್ತರು ಇವನ್ನೆಲ್ಲಾ ಅಧ್ಯಯನ ಮಾಡಬೇಕು.

ಗ್ರಾಮೀಣ ಸಾಲ ವ್ಯಾಪ್ತಿ ಎನ್.ಡಿ.ಎ. ಅವಧಿಯಲ್ಲೂ ಕಡಿತಗೊಂಡಿತು. ಯುಪಿಎ ಸರ್ಕಾರದ ಅವಧಿಯಲ್ಲಿ ಕಡಿತಗೊಳ್ಳುತ್ತಿದೆ.

•

ಆಂಧ್ರಪ್ರದೇಶದ ಅನಂತಪುರದಲ್ಲಿ ಮಲ್ಟಿಪ್ಲೆಕ್ಸ್ ನಿರ್ಮಾಣ ಮಾಡಲು 'ಗ್ರಾಮೀಣ ಸಾಲ' ದ ಲೆಕ್ಕದಲ್ಲಿ ಸಾಲ ನೀಡಲಾಗಿದೆ. ಇದು 'ಗ್ರಾಮೀಣ ಸಾಲ'ದ ಸ್ವರೂಪ. ವಲಸೆಗಾರರು, ಕೂಲಿಕಾರರು ಏನಾಗಿದ್ದಾರೆ. ದೇಶದ 103 ಮಿಲಿಯನ್ ರೈತರಲ್ಲಿ 80 ಲಕ್ಷ ಜನ ಕೃಷಿಯನ್ನು ಬಿಟ್ಟಿದ್ದಾರೆ. ಅವರೆಲ್ಲಾ ಎಲ್ಲಿ ಹೋಗಿದ್ದಾರೆ. ಏನಾಗಿದ್ದಾರೆ. ಅವರು ಕೃಷಿಯನ್ನು ಯಾಕೆ ಬಿಟ್ಟಿದ್ದಾರೆ.

•

ದೇಶದಲ್ಲಿ 44 ಮಿಲಿಯನ್ ನಿರುದ್ಯೋಗಿಗಳಿದ್ದಾರೆ. ಅಂದರೆ ದಕ್ಷಿಣ ಆಫ್ರಿಕಾದ ಜನಸಂಖ್ಯೆಯಷ್ಟು. ಕೇತಕ್ ಪಾಟಕ್ ಎಂಬ ಒಬ್ಬ ಉದ್ದಿಮೆದಾರರಿಗೆ 62 ಕೋಟಿ ರೂ. ಮನ್ನಾ ಆಗಿದೆ. 180 ಕಂಪನಿಗಳಿಗೆ ಪ್ರತಿವರ್ಷ 25 ಸಾವಿರ ಕೋಟಿ ರೂಪಾಯಿಗಳಸಾಲ ಮನ್ನಾ ಆಗುತ್ತಿದೆ. ಜನರ, ಮಹಿಳೆಯರ, ತಲಾ ಆಹಾರ ಬಳಕೆ ಕಡಿಮೆಯಾಗುತ್ತಿದೆ. ಇಂತಹ ಎಲ್ಲಾ ವಿಷಯಗಳಿಗೆ ಮಾಧ್ಯಮಗಳಲ್ಲಿ ಪತ್ರಕರ್ತ ಜಾಗ ಪಡೆದುಕೊಳ್ಳಲು ಯತ್ನಿಸಬೇಕು. ಪತ್ರಕರ್ತರು 'ಗೆರಿಲ್ಲಾ ಜರ್ನಲಿಸಂ' ನೀತಿ ಅನುಸರಿಸಬೇಕು. ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಇಂಥದಕ್ಕೆ ಜಾಗ ಸಿಗುವುದು ಕಷ್ಟ. ಆದರೂ ಇರುವ ಅವಕಾಶವನ್ನು ಪತ್ರಕರ್ತರು ಪರಿಣಾಮಕಾರಿಯಾಗಿ ಬಳಸಲು ಪ್ರಯತ್ನಿಸಬೇಕು. ಕೆಲವು ರಾಜಕೀಯ ಸನ್ನಿವೇಶಗಳು ಪರಿಸ್ಥಿತಿಯನ್ನು ಬದಲಾಯಿಸುತ್ತವೆ. ಅವಕಾಶ ಸೃಷ್ಟಿಸುತ್ತವೆ. ಜನ ಸಾಮಾನ್ಯರು ತಮ್ಮ ತೀರ್ಪಿನ ಮೂಲಕ ರಾಜಕೀಯ ಪರಿಸ್ಥಿತಿಯನ್ನು ಬದಲಾಯಿಸುತ್ತಾರೆ. ಅಂತಹ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಹೃದಯವಿದ್ದಲ್ಲಿ ಕಣ್ಣು ತೆರೆದುಕೊಳ್ಳುತ್ತದೆ.

•

ಜನ ಸಾಮಾನ್ಯರ ನೋವುಗಳಿಗೆ ದನಿಯಾಗಿ ಕೆಲಸ ಮಾಡುವ ಸಣ್ಣ ಸಣ್ಣ ಗುಂಪುಗಳು, ಪತ್ರಿಕೆಗಳಿವೆ. ಅವುಗಳೊಂದಿಗೆ, ಜನಪರ ಸಂಘಟನೆಗಳೊಂದಿಗೆ ಸಂಬಂಧ ಏರ್ಪಡಿಸಿಕೊಳ್ಳಬೇಕು. ಅಂತಹ ಪ್ರಯತ್ನದ ಭಾಗವಾಗಿಯೇ ನಾನು 'ಜನಶಕ್ತಿ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇನೆ.

ಸಮೂಹ ಮಾಧ್ಯಮಗಳು........

ಪುಟ 12 ರಿಂದ

ಜಯಲಕ್ಷ್ಮಮ್ಮ ಅದನ್ನು ದುಡ್ಡು ಕೊಟ್ಟು ಖರೀದಿ ಮಾಡಿ ತರಬೇಕಿದೆ.

•

ಮುಂಬೈನ ಶಾಲೆಯೊಂದರಲ್ಲಿ ನಡೆದ 'ವರ್ಗ ಹೋರಾಟ' ಅಲ್ಲಿನ ಪತ್ರಿಕೆಗಳಲ್ಲಿ ಬಾರಿ ಸುದ್ದಿಯಾಯಿತು. ಅದೊಂದು ಪ್ರತಿಷ್ಠಿತ ಶಾಲೆ. ಮುಂಬೈನ ಬಾರಿ ಶ್ರೀಮಂತರ ಮಕ್ಕಳು ಅಲ್ಲಿ ಓದುತ್ತಾರೆ. ಶಾಲಾ ಸಮಾರಂಭಗಳಲ್ಲಿ ಕೋಟ್ಯಾಧಿಪತಿ (ಮಿಲಿಯನರ್ಸ್) ಮಕ್ಕಳ ಪೋಷಕರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಇರುತ್ತಿತ್ತು.

ಈ ಕೋಟ್ಯಾಧಿಪತಿಗಳ ನಡುವೆ ಹೊಸದೊಂದು ಶತಕೋಟ್ಯಾಧಿಪತಿಗಳ ವರ್ಗ (ಬಿಲಿಯನರ್ಸ್) ಉದಯವಾಗಿ ಅವರು ತಮಗೆ ಮಿಲಿಯನರ್ಸ್ ವರ್ಗದಿಂದಲೂ ಪ್ರತ್ಯೇಕವಾದ ಆಸನ ವ್ಯವಸ್ಥೆಬೇಕೆಂದು ಹಠ ಮಾಡಿದ್ದರಿಂದ ಉಂಟಾದ ಗದ್ದಲ ನಮ್ಮ ಪತ್ರಿಕೆಗಳನ್ನು ತುಂಬಿಕೊಂಡಿತ್ತು.

•

ಮಾನವ ಅಭಿವೃದ್ಧಿಯ ಪ್ರಶ್ನೆಯಲ್ಲಿ ಭಾರತ ಜಗತ್ತಿನಲ್ಲಿ 126ನೇ ಸ್ಥಾನವನ್ನು ಪಡೆದಿದೆ. ಭಾರತವು ಗ್ವಾಟೆಮಾಲಾ, ಇಥಿಯೋಪಿಯಾ, ವಿಯೆಟ್ನಾಂ, ಕ್ಯೂಬಾ, ಬೊಟ್ಸ್ವಾನಾದಂತಹ ಪುಟ್ಟ ಪುಟ್ಟ ರಾಷ್ಟ್ರಗಳಿಂದಲೂ ಹಿಂದೆ ಬಿದ್ದಿದೆ.

ಭಾರತ ದೇಶದ್ದು ಜಗತ್ತಿನ ಅತಿ ಖಾಸಗೀಕರಣಗೊಂಡ ನಾಲ್ಕನೇ ಆರೋಗ್ಯ ವ್ಯವಸ್ಥೆ.

ಮುಂಬೈ ನಗರದಲ್ಲಿ 21 ಜನ ಬಿಲಿಯನರ್ಸ್ ವಾಸಿಸುತ್ತಾರೆ. ಅದೇ ರಾಜ್ಯ ಅಂದರೆ ಮಹಾರಾಷ್ಟ್ರದಲ್ಲಿ 1995 ಒಂದರಲ್ಲೇ 36 ಸಾವಿರ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆಂಧ್ರ ಪ್ರದೇಶ-ಅನಂತಪುರದ ಒಂದೇ ಒಂದು ಆಸ್ಪತ್ರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಸಂಬಂಧಿಸಿದ 340 ಪ್ರಕರಣಗಳು ದಾಖಲಾದವು.

•

ಇತ್ತೀಚಿನ ದಿನಗಳಲ್ಲಿ ರೈತರ ಸಮಸ್ಯೆಗಳ ಬಗೆಗೆ ಮಾತನಾಡುವ ಚರ್ಚೆಗಳು ಕೆಲವು ವಾಹಿನಿಗಳಲ್ಲಿ ಕಂಡು ಬರುತ್ತಿವೆ. ಕೃಷಿ ತಜ್ಞರೆನಿಸಿಕೊಂಡವರು ರೈತರ ಸಮಸ್ಯೆಗಳ ಬಗೆಗೆ ಗಂಟೆ ಗಟ್ಟಲೆ ಚರ್ಚಿಸುತ್ತಾರೆ. ಆದರೆ ಆ ಚರ್ಚೆಯಲ್ಲಿ ರೈತರೇ ಇರುವುದಿಲ್ಲ. ಸಮಸ್ಯೆಯ ಮೂಲವನ್ನು ಕಂಡುಕೊಳ್ಳುವ ಪ್ರಾಮಾಣಿಕ ಕಾಳಜಿಯೂ ಇರುವುದಿಲ್ಲ. ನಮ್ಮ ಬಜೆಟ್ ವಿಶ್ಲೇಷಣೆಗಳೂ ಕೂಡ ಇದೇ ದಾರಿಯಲ್ಲಿ ನಡೆದಿವೆ.

•

1997 ರಿಂದ 2007ರ ನಡುವಿನ ಅವಧಿಯಲ್ಲಿ ದೇಶದ ಕೃಷಿ ಉತ್ಪನ್ನಗಳ ಬೆಳವಣಿಗೆ ದರ 1.2 ರಿಂದ 1.9ರ ಮಟ್ಟಕ್ಕೆ ಕುಸಿದಿದೆ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಆಹಾರದ ಸ್ವಾವಲಂಬನೆ ಸರ್ಕಾರದ ಗುರಿ ಎಂದು ಚಿದಂಬರಂ ಘೋಷಿಸಿದ್ದಾರೆ. ಆದರೆ ಆಹಾರ ಸ್ವಾವಲಂಬನೆ ಸಾಧಿಸಿದ್ದ ಭಾರತ ಪರಾವಲಂಬಿಯಾದದ್ದು ಯಾಕೆ? ಜನಸಂಖ್ಯೆಯ ಬೆಳವಣಿಗೆ ದರಕ್ಕೆ ತಕ್ಕಂತೆ ಆಹಾರೋತ್ಪಾದನೆ ಹೆಚ್ಚಾಗುತ್ತಿಲ್ಲ. ನಾವು ಉತ್ತೇಜಿಸುತ್ತಿರುವ ಕೃಷಿ ನೀತಿಯಲ್ಲಿ ಗಂಭೀರ ದೋಷವಿದೆ. ಆಹಾರ ಬೆಳೆಗಳನ್ನು ಕೈಬಿಟ್ಟು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಪುಸಲಾಯಿಸಲಾಗುತ್ತಿದೆ. ದುಬಾರಿ ಹೂಡಿಕೆ ಮಾಡಿ ವಾಣಿಜ್ಯ ಬೆಳೆ ಬೆಳೆದು ಉತ್ಪನ್ನಗಳ ಬೆಲೆ ಕುಸಿದಾಗ ಕಂಗಾಲಾದ ರೈತರು ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಆಹಾರ ಭದ್ರತೆಗೂ ಅಪಾಯ ಬಂದಿದೆ.

•

1997ರ ಮೊದಲ ಭಾಗದಲ್ಲಿ ನಾಟಿ ಹತ್ತಿ ಬೀಜಗಳನ್ನು ಏಳು ರೂಪಾಯಿಗೆ ಕಿಲೋದಂತೆ ಮಾರಲಾಗುತ್ತಿತ್ತು. ಅದು ಸ್ಥಳೀಯ ಹವಾಗುಣಕ್ಕೆ ಹೊಂದಿಕೊಳ್ಳುವ ಸದ್ಗುಣಗಳನ್ನೂ ಹೊಂದಿತ್ತು. ಆದರೆ ಅನಂತರ ಹೈಬ್ರಿಡ್ ಹತ್ತಿ ತಳಿ ಬೊಲ್ಲಾರ್ಡ್ ಸಂಸ್ಥೆ ಅಧಿಕ ಇಳುವರಿಯ ಕುಲಾಂತರಿ ಹತ್ತಿ ಬೀಜಗಳನ್ನು ವಿತರಿಸಲು ಆರಂಭಿಸಿತು. ಇದರ ಬೆಲೆ ನಾನ್ನೂರು ಗ್ರಾಂಗೆ 1,800 ರೂಪಾಯಿ. ಅಧಿಕ ಇಳುವರಿಯ ಆಸೆಗೆ ರೈತ ಸಾಲಗಾರನಾಗಬೇಕಾಯಿತು. ಮುಂದೆ ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ಹವಾಮಾನ ಏರುಪೇರಾಗಿ ಇಳುವರಿ ಕಡಿಮೆಯಾದಾಗ ರೈತ ಆತ್ಮಹತ್ಯೆ ಮಾಡಿಕೊಳ್ಳಬೇಕಾಯ್ತು. ಅದು ಆತ್ಮಹತ್ಯೆಯೊ ಕೊಲೆಯೋ ಎಂಬ ಬಗ್ಗೆ ನನ್ನಲ್ಲಿ ಅನುಮಾನಗಳಿವೆ.

•

ಜಾಗತಿಕ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಕುಸಿದರೆ ಕಾರ್ಪೊರೇಟ್ ವಲಯ ಸರ್ಕಾರದ ಅನುದಾನ ಕೇಳುತ್ತದೆ. ಅವರ ಸಂಸ್ಥೆಗಳನ್ನು ಪ್ರಾರಂಭಿಸಿ ಹಣ ಮಾಡಿಕೊಳ್ಳಲು ಸರ್ಕಾರ ರಿಯಾಯ್ತಿ ದರದಲ್ಲಿ ಕೃಷಿ ಭೂಮಿ ಒದಗಿಸುತ್ತದೆ. ಆದರೆ ನಮ್ಮ ಬಡಪಾಯಿ ರೈತ ಹತ್ತು ವರ್ಷಗಳ ಕಾಲ ಸತತ ಬೆಳೆ ವೈಫಲ್ಯದಿಂದ ತತ್ತರಿಸಿದರೂ ಅವನಿಗೆ ಕಂದಾಯ ವಿನಾಯ್ತಿ ಸಿಗುವುದಿಲ್ಲ.

•

ಈ ದೇಶದ ಕಾನೂನಿನ ದೊಡ್ಡ ದುರಂತರವೆಂದರೆ ಭೂಮಿಯ ಖಾತೆ ಯಾರ ಹೆಸರಲ್ಲಿದೆಯೋ ಅವರು ಮಾತ್ರ ರೈತರು. ಆದರೆ ಅದು ಭೂಮಿಗೆ ದುಡಿಯುವ ಅವರ ಕುಟುಂಬ ವರ್ಗದ ಇತರ ಸದಸ್ಯರು ರೈತರ ಸಾಲಿಗೆ ಸೇರುವುದಿಲ್ಲ. ಅದರಲ್ಲಿ ರೈತನ ಮಡದಿ, ಹೆಣ್ಣು ಮಕ್ಕಳು, ಸೊಸೆಯಂದಿರೂ ಸೇರುತ್ತಾರೆ. ಹೀಗಾಗಿ ಈ ಆತ್ಮಹತ್ಯೆಯಿಂದ ಎಂಟು ಕೃಷಿ ವರ್ಗಗಳನ್ನು ಕೈ ಬಿಡಲಾಗಿದೆ. ಮನೆಯ ಹಿರಿಯನಿಗೆ 90 ವರ್ಷಗಳಾಗಿದ್ದು, ಆತನ ಹೆಸರಿನಲ್ಲಿ ಜಮೀನು ಇದೆ ಎಂದುಕೊಳ್ಳಿ. ಹಿರೀಮಗ ಕೃಷಿಕನಾಗಿ ದುಡಿಯುತ್ತಿದ್ದು ಆತ ಕೃಷಿಗಾಗಿ ಸಾಲ ಮಾಡಿ ತೀರಿಸಲಾಗದೆ ಸತ್ತರೆ ಅದು ರೈತನ ಆತ್ಮಹತ್ಯೆ ಎಂದಾಗುವುದಿಲ್ಲ.

ಶರತ್‌ಚಂದ್ರ

ಒಲಂಪಿಕ್ಸ್ ಮನೋಭಾವಕ್ಕೆ ಭಂಗ ತರುವ ಪ್ರಯತ್ನ

ನಾವು ಬೀಜಿಂಗ್ ಒಲಿಂಪಿಕ್ಸ್ ಗೆ ವಿರೋಧವಾಗಿಲ್ಲ. ಸ್ವತಂತ್ರ ಟಿಬೆಟ್ ಚಳುವಳಿ ಹಿಂಸೆಯ ದಾರಿ ಹಿಡಿಯುವುದಿಲ್ಲ. ಹಿಂಸೆಯ ಮೂಲಕ ಬೆಜಿಂಗ್ ಒಲಿಂಪಿಕ್ಸ್ ಗೆ ತೊಡಕು ಒಡ್ಡುವುದು ನಮ್ಮ ಉದ್ದೇಶ ಅಲ್ಲ. ಎಂದು ಪದೇ ಪದೇ ದಲೈ ಲಾಮಾ ಹೇಳುತ್ತಿದ್ದಾರೆ. ಆದರೆ ವಾಸ್ತವ ಅದಕ್ಕೆ ವಿರುದ್ಧವಾಗಿದೆ. ಅವರ ಬೆಂಬಲಿಗರು ಎಂದು ಹೇಳಿಕೊಳ್ಳುವವರು ಜಗತ್ತಿನಾದ್ಯಂತ ತೀವ್ರ ಹಿಂಸಾಚಾರ ನಡೆಸಿದ್ದಾರೆ. ಜಾಗತಿಕ ಸಾಮರಸ್ಯ ಬಾಂಧವ್ಯದ ಸಂಕೇತವಾದ ಒಲಿಂಪಿಕ್ಸ್ ಜ್ಯೋತಿಯ ಜಾಗತಿಕ ಪ್ರವಾಸಕ್ಕೆ ಎಲ್ಲಾ ಸಾಧ್ಯವಾದ ತೊಡಕುಗಳನ್ನು ಒಡ್ಡಿದ್ದಾರೆ. ಲಂಡನ್, ಪ್ಯಾರಿಸ್, ಸಾನ್ ಫ್ರಾನ್ಸಿಸ್ಕೊ ನಗರಗಳಲ್ಲಿ ತೀವ್ರ ಹಿಂಸಾಚಾರ ನಡೆಸಿದರು. ಪ್ಯಾರಿಸ್ ನಲ್ಲಿ ಒಲಿಂಪಿಕ್ಸ್ ಜ್ಯೋತಿಯನ್ನು ನಂದಿಸುವ ಹೇಯ ಕೆಲಸಕ್ಕೂ ಕೈ ಹಾಕಿದರು.

ಬಿಗಿಯಾದ ಭದ್ರತಾ ಕ್ರಮಗಳನ್ನು ಭೇಧಿಸಿ ಅವರು ನಡೆಸಿದ ಈ ಧಾಂಧಲೆಗಳ ಹಿಂದೆ ಬೀಜಿಂಗ್ ಒಲಿಂಪಿಕ್ಸ್ ನಡೆಯದಂತೆ ಮಾಡುವ ವ್ಯವಸ್ಥಿತ ಪ್ರಯತ್ನ ಇದೆ ಎಂಬ ಬಲವಾದ ಗುಮಾನಿಗೆ ಕಾರಣವಾಗಿದೆ. ಬೀಜಿಂಗ್ ಒಲಿಂಪಿಕ್ಸ್ ಕ್ರೀಡೆಯ ಸಂದರ್ಭದಲ್ಲೂ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಪಿತೂರಿಯ ಸುಳಿವು ಸಿಕ್ಕಿದೆ ಎಂದು ಚೀನಾ ಸರ್ಕಾರ ಹೇಳಿದೆ. ಚೀನಾ-ವಿರೋಧಿ 'ಸ್ವತಂತ್ರ ಟಿಬೆಟ್' ಚಳುವಳಿಗಳಿಗೆ ರಾಜಕೀಯ ಮತ್ತು ಇತರ ರೀತಿಯ ಬೆಂಬಲ-ಪೋಷಣೆ ನೀಡುತ್ತಾ ಬಂದಿರುವ ಪಾಶಿಮಾತ್ಯ ಸರ್ಕಾರಗಳಿಗೆ ಈ ಅಹಿತಕರ ಹಿಂಸಾಚಾರ ನಡೆಯದಂತೆ ಮಾಡುವ ಬಗೆ ಗೊತ್ತಿದೆ. ಸಾನ್ ಫ್ರಾನ್ಸಿಸ್ಕೊದ ಪ್ರಖ್ಯಾತ ಗೋಲ್ಡನ್ ಗೇಟ್ ಸೇತುವೆಗೆ ಟಿಬೆಟ್ ಪ್ರತಿಭಟನಾಕಾರ ಹತ್ತುವುದನ್ನು ತಡೆಯುವುದು ಸಾಧ್ಯವಿರಲಿಲ್ಲ ಎಂಬುದನ್ನು ಯಾರೂ ನಂಬಲು ಸಾಧ್ಯವಿಲ್ಲ. ಇದು ಭಯೋತ್ಪಾದಕತೆಗೆ ಆಹ್ವಾನ. ಯುದ್ಧ ಮತ್ತು ಜಾಗತೀಕರಣ ವಿರೋಧಿ ಚಳುವಳಿಗಾರರ ಮೇಲೆ ಈ ದೇಶಗಳಲ್ಲಿ ಪೋಲಿಸ್ ಕಾರ್ಯಾಚರಣೆಯ ಭೀಕರತೆ ನೋಡಿದವರಿಗೆ ಇದು ಆ ಸರ್ಕಾರಗಳ ಇಬ್ಬಗೆ ನೀತಿಯ ಭಾಗ ಎಂದು ಸ್ಪಷ್ಟವಾಗಿ


ಒಲಿಂಪಿಕ್ಸ್ ಜ್ಯೋತಿ

ತಿಳಿಯುತ್ತದೆ.

ಈ ತೀವ್ರ ಸವಾಲುಗಳನ್ನು ಎದುರಿಸಿ ಒಲಿಂಪಿಕ್ಸ್ ಜ್ಯೋತಿಯ ಜಾಗತಿಕ ಪ್ರವಾಸ ಮುಂದುವರೆಸಲು ಒಲಿಂಪಿಕ್ಸ್ ಸಮಿತಿ ನಿರ್ಧರಿಸಿದೆ. ಜ್ಯೋತಿ ಅರ್ಜೆಂಟಿನಾ, ಆಸ್ಟ್ರೆಲಿಯಾ, ಇಂಡೋನೇಶ್ಯಾ, ಭಾರತ ಮುಂತಾದ ದೇಶಗಳನ್ನು ಹಾದು ಮುಂದುವರೆಯಲಿದೆ. ಈ ನಡುವೆ ದಲೈ ಲಾಮಾ ಜತೆ ಮಾತುಕತೆ ನಡೆಸಲು ಹಲವರು ಉಪದೇಶ ನೀಡುತ್ತಿದ್ದಾರೆ. ಈ ಹಿಂಸಾಚಾರ ಖಂಡಿಸುವಂತೆ ಮತ್ತು ದಲೈ ಲಾಮಾಗೆ ಹಿಂಸಾಚಾರ ನಿಲ್ಲಿಸುವಂತೆ ಒತ್ತಡ ಹಾಕಲು ಚೀನಾ ಸರ್ಕಾರ ತನ್ನ ಪ್ರತ್ಯುತ್ತರದಲ್ಲಿ ಹೇಳಿದೆ. ಈ ನಡುವೆ ಒಲಿಂಪಿಕ್ಸ್ ಸಮಿತಿಯ ಅಧ್ಯಕ್ಷ ಸಹ ಸಾರ್ವಜನಿಕವಾಗಿ ದಲೈ ಲಾಮಾ ಜತೆ ಮಾತುಕತೆ ನಡೆಸಬೇಕೆಂದು ಹೇಳಿದ್ದಾರೆ. ಚೀನಾ ಸರ್ಕಾರ ಈ ಹೇಳಿಕೆ ಮೂಲಕ 'ಕ್ರೀಡೆಗೆ ಸಂಭಂಧವಿಲ್ಲದ ರಾಜಕೀಯ ವಿಷಯಗಳನ್ನು ಎತ್ತುವುದು' ಒಲಿಂಪಿಕ್ಸ್ ಮನೋಭಾವಕ್ಕೆ ಅನುಗುಣವಾಗಿಲ್ಲ ಎಂದು ಹೇಳಿದೆ. ಈ ನಡುವೆ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ, ಬ್ರಿಟಿಷ್ ಪ್ರಧಾನಿ, ಜರ್ಮನ್ ಛಾನ್ಸಲರ್ ಒಲಿಂಪಿಕ್ಸ್ ಉದ್ಘಾಟನೆಯಲ್ಲಿ ಭಾಗವಹಿಸುವುದಿಲ್ಲ ಎಂದಿದ್ದಾರೆ. ಫ್ರೆಂಚ್ ಅಧ್ಯಕ್ಷರೂ ಅದನ್ನೇ ಮಾಡುವ ಸಾಧ್ಯತೆ ಇದೆ. ಕೊನೆಗಳಿಗೆಯಲ್ಲಿ ಬುಶ್ ಸಹ ಭಾಗವಹಿಸದಿದ್ದರೆ ಆಶ್ಚರ್ಯವೇನಿಲ್ಲ.

ಒಲಿಂಪಿಕ್ಸ್ ಮನೋಭಾವಕ್ಕೆ ಭಂಗಮಾಡುವ ಮತ್ತು ಕ್ರೀಡೆಯಲ್ಲಿ ರಾಜಕೀಯ' ತರುವ ಪಾಶಿಮಾತ್ಯ ದೇಶಗಳ ನೀತಿ ಹೊಸದೇನಲ್ಲ. ಹಿಂದೆ 1980ರ ದಶಕದಲ್ಲಿ ಅಫ್ಘಾನಿಸ್ತಾನದಲ್ಲಿ ಸೋವಿಯತ್ ಮಧ್ಯಪ್ರವೇಶದ ನೆಪದಲ್ಲಿ ಮಾಸ್ಕೋ ಒಲಿಂಪಿಕ್ಸ್ ಗೆ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ದೇಶಗಳು ಬಹಿಷ್ಕಾರ ಹಾಕಿದ್ದವು. ಇದಕ್ಕೆ ಸೋವಿಯತ್ ಕೂಟ ಲಾಸ್ ಎಂಜೆಲಿಸ್ ಒಲಿಂಪಿಕ್ಸ್ ಗೆ ಬಹಿಷ್ಕಾರ ಹಾಕಿತ್ತು. ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಜಾಗತಿಕ ಸಾಮರಸ್ಯ ಬಾಂಧವ್ಯದ ಸಂಕೇತವಾಗಿ ಒಲಿಂಪಿಕ್ಸ್ ನ್ನು ಅವು ನೋಡುವುದಿಲ್ಲ. ಒಲಿಂಪಿಕ್ಸ್ ಕ್ರೀಡೆಗಳು ತಮ್ಮ ಅಧಿಪತ್ಯ ಸ್ಥಾಪಿಸುವ ಇನ್ನೊಂದು ವೇದಿಕೆ ಎಂದುಕೊಂಡಿವೆ.

ದೋಹಾ ಸುತ್ತಿನ ಮಾತುಕತೆ ಮುಂದಕ್ಕೆ

ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯೂ.ಟಿ.ಓ.) ಜಿನೇವಾದಲ್ಲಿ ಈ ತಿಂಗಳು ನಡೆಯಬೇಕಾಗಿದ್ದ ದೋಹಾ ಸುತ್ತಿನ ಮಾತುಕತೆಗಳನ್ನು ರದ್ದು ಮಾಡಿದೆ. ಪ್ರಮುಖವಾಗಿ ಕೃಷಿ ಸಂಬಂಧಿತ ವಾಣಿಜ್ಯ ನೀತಿಗಳ ಬಗ್ಗೆ ಶ್ರೀಮಂತ ಮತ್ತು ಬಡ ದೇಶಗಳ ನಡುವೆ ತೀವ್ರ ಭಿನ್ನಾಭಿಪ್ರಾಯ ಮುಂದುವರೆದಿದ್ದು ಸಂವಾದ ಸಾಧ್ಯವಾಗಲಿಕ್ಕಿಲ್ಲ ಎಂಬುದು ಕಾರಣ ಎನ್ನಲಾಗಿದೆ. ಈ ನಡುವೆ ಆರು ಪ್ರಮುಖ ವಾಣಿಜ್ಯ ಶಕ್ತಿಗಳು ಚರ್ಚೆ ನಡೆಸಿ ಕೃಷಿ ಸಂಬಂಧಿತ ವಾಣಿಜ್ಯ ನೀತಿಗಳ ಬಗ್ಗೆ ಒಂದು ಫಾರ್ಮುಲಾ ರೂಪಿಸಿವೆ ಎನ್ನಲಾಗಿದೆ.

ಕಟಾರ್ ರಾಜಧಾನಿ ದೋಹಾದಲ್ಲಿ 2001 ರಲ್ಲಿ ನಡೆದ ವಿಶ್ವ ವಾಣಿಜ್ಯ ಸಂಸ್ಥೆಯ ಶೃಂಗಸಭೆ ಈ ಸುತ್ತಿನ ಮಾತುಕತೆಗಳನ್ನು ಆರಂಭಿಸಲಾಗಿತ್ತು. ಆ ನಂತರ ಕೃಷಿ, ಸೇವೆಗಳು ಮತ್ತು ಪೇಟೆಂಟ್ ಸಂಬಂಧಿತ ಶ್ರೀಮಂತ ಮತ್ತು ಬಡ ದೇಶಗಳ ನಡುವೆ (ಮತ್ತು ಅವುಗಳ ಒಳಗೆ ಕೂಡಾ) ಬಗೆಹರಿಯಲಾಗದ ವಿವಾದಗಳಿಂದಾಗಿ ಯಾವುದೇ ಒಪ್ಪಂದಕ್ಕೆ ಬರಲಾಗಿಲ್ಲ.

ಕೃಷಿ ಸಂಬಂಧಿತ ವಾಣಿಜ್ಯ ನೀತಿಗಳು ಜಗತ್ತಿನ ಬಡವರನ್ನು ನೇರವಾಗಿ ಬೇಗನೆ ತಟ್ಟುವವು. ಈಗಿನ ಜಾಗತಿಕ ಆರ್ಥಿಕ ಬಲಾಬಲದಲ್ಲಿ ಬಡದೇಶಗಳಿಗೆ ಅನುಕೂಲಕರವಾದ ನೀತಿಗಳು ಅಂಗೀಕಾರವಾಗುವ ಸಂಭವ ಕಡಿಮೆ. ಅದರಲ್ಲೂ ಬಡದೇಶಗಳ ನಡುವೆ ಐಕ್ಯತೆಯ ಅಭಾವ ಇರುವಾಗ. ಆಹಾರ ಬೆಲೆಗಳು ಜಾಗತಿಕವಾಗಿ ಏರುತ್ತಿರುವಾಗ, ಜಾಗತಿಕ ಆರ್ಥಿಕ ಸ್ಥಗಿತತೆಯ ಹಿನ್ನಲೆಯಲ್ಲಿ, ಬಡಜನರ ಸ್ಥಿತಿಯನ್ನು ಇನ್ನಷ್ಟು ಕೆಡಿಸಬಹುದಾದ ದೋಹಾ ಮಾತುಕತೆಗಳು ಮುಂದಕ್ಕೆ ಹೋಗಿರುವುದು ಸಕಾರಾತ್ಮಕ ಬೆಳವಣಿಗೆಯೇ.

ಜಿಂಬಾಬ್ವೆಯಲ್ಲಿ ಬಿಕ್ಕಟ್ಟು

ಸುಮಾರು ಎರಡು ವಾರಗಳ ನಂತರ ಜಿಂಬಾಬ್ವೆಯ ಚುನಾವಣಾ ಫಲಿತಾಂಶಗಳನ್ನು ಘೋಷಿಸಲಾಗಿಲ್ಲ. ಅಧ್ಯಕ್ಷ ಮುಗಾಬೆಯವರ ಪಕ್ಷ ಜಾನು-ಪಿ.ಎಫ್. (97 ಸೀಟು) ಬಹುಮತ ಗಳಿಸಿಲ್ಲ, 210 ಸೀಟುಗಳ ಪಾರ್ಲಿಮೆಂಟಿನಲ್ಲಿ 109 ಸೀಟು ಗಳಿಸಿದ ಎಂ.ಡಿ.ಸಿ.ಗೆ ಸರ್ಕಾರ ರಚಿಸಲು ಅವಕಾಶ ಕೊಡಲಾಗಿಲ್ಲ. ಅಧ್ಯಕ್ಷೀಯ ಚುನಾವಣೆಯಲ್ಲೂ ಮುಗಾಬೆ ಶೇ.42 ಮತ ಗಳಿಸಿ ಬಹುಮತದಿಂದ ದೂರ ಇದ್ದಾರೆ. ಎಂ.ಡಿ.ಸಿ. ಅಭ್ಯರ್ಥಿ ಸಹ ಶೇ.50 ಮತ ಗಳಿಸಿರದಿದ್ದರೆ ಎರಡನೇ ಸುತ್ತಿನ ಚುನಾವಣೆ ನಡೆಯಬೇಕು. ಯಾವುದಕ್ಕೂ ಚುನಾವಣಾ ಕಮಿಶನ್ ಫಲಿತಾಂಶ ಘೋಷಿಸಬೇಕು ಎಂದು ಎಂ.ಡಿ.ಸಿ. ಒತ್ತಾಯಿಸಿದೆ. ಈ ಒತ್ತಾಯವನ್ನು ಕೋರ್ಟಿಗೂ ತೆಗೆದುಕೊಂಡು ಹೋಗಿದೆ. ಮುಗಾಬೆಯವರ ಪಕ್ಷ ಜಾನು-ಪಿ.ಎಫ್. ಮತಗಳ ಎಣಿಕೆಯಲ್ಲಿ ಅಕ್ರಮಗಳಾಗಿವೆ ಎಂದು ಆಪಾದಿಸಿ, ಮರುಎಣಿಕೆಗೆ ಚುನಾವಣಾ ಕಮಿಶನನ್ನು ಒತ್ತಾಯಿಸಿದೆ.

ಚುನಾವಣಾ ಫಲಿತಾಂಶ ಘೋಷಿಸದೆ, ಮುಗಾಬೆ ತನ್ನ ಹಿನ್ನಡೆಯನ್ನು ಒಪ್ಪಿಕೊಳ್ಳದೆ ಜಿಂಬಾಬ್ವೆಯಲ್ಲಿ ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ಜಿಂಬಾಬ್ವೆಯ ವಸಾಹತುಶಾಹಿ-ವಿರೋಧಿ ಕ್ರಾಂತಿಯ ನಾಯಕತ್ವ ವಹಿಸಿದ ಮತ್ತು ಆ ದೇಶವನ್ನು ಆ ಮೇಲೆ ಬಹಳ ಕಾಲ ಮುನ್ನಡೆಸಿದ ಮುಗಾಬೆ ರಾಜಕೀಯ ಮುತ್ಸದ್ದಿತನ ತೋರಿಸಿ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಬೇಕು. ವಿರೋಧ ಪಕ್ಷವಾಗಿ ತಮ್ಮ ರಾಜಕೀಯವನ್ನು ಮುಂದು ವರೆಸಬೇಕು. ಇಲ್ಲದಿದ್ದರೆ ಜಿಂಬಾಬ್ವೆ ಅಂತರಿಕ ಯುದ್ಧ ಮತ್ತು ತೀವ್ರ ಹಿಂಸಾಚಾರಕ್ಕೆ ಗುರಿಯಾಗಬಹುದು.

ನೇಪಾಳದಲ್ಲಿ ಚುನಾವಣೆಗಳು

ಸಂವಿಧಾನ ಸಭೆಗೆ ಚುನಾವಣೆ ದೊಡ್ಡ ಹಿಂಸಾಚಾರವಿಲ್ಲದೆ ಶಾಂತಿಯುತವಾಗಿ ನಡೆದು ನೇಪಾಳ ಪ್ರಜಾಪ್ರಭುತ್ವದತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಚುನಾವಣೆ ಪ್ರಚಾರ ಸಂದರ್ಭದಲ್ಲಿ ಹಿಂಸಾಚಾರ ನಡೆದರೂ, ಅದು ಪ್ರಜಾಪ್ರಭುತ್ವದ ಈ ಚಾರಿತ್ರಿಕ ಪ್ರಕ್ರಿಯೆಗೆ ಅಪಚಾರ ತರುವಂತಹುದು ಆಗಿರಲಿಲ್ಲ. ಲಕ್ಷದಷ್ಟು ಭದ್ರತಾ ಸಿಬ್ಬಂದಿ, ಇನ್ನೊಂದು ಲಕ್ಷ ರಾಷ್ಟ್ರೀಯ ವೀಕ್ಷಕರು ಚುನಾವಣೆಯನ್ನು ಸಾಂಗವಾಗಿ ನೆರವೇರಲು ಸಹಾಯ ಮಾಡಿದರು. ಮಾಜಿ ಅಮೆರಿಕನ್ ರಾಷ್ಟ್ರಪತಿ ಕಾರ್ಟರ್, ಭಾರತದ ಚುನಾವಣಾ ಕಮೀಶನರ್ ಸೇರಿದಂತೆ ಎಂಟು ನೂರಕ್ಕೂ ಹೆಚ್ಚು ಅಂತರ್‍ರಾಷ್ಟ್ರೀಯ ವೀಕ್ಷಕರು ಚುನಾವಣೆ ಕ್ರಮಬದ್ಧವಾಗಿ ನಡೆದಿದೆ ಎಂದಿದ್ದಾರೆ. ಶೇ.60 ರಷ್ಟು ಮತದಾನ ನಡೆದಿದೆ ಎಂದು ಚುನಾವಣಾ ಕಮೀಶನ್ ಹೇಳಿದೆ.

ಮತ ಎಣಿಕೆ ಆರಂಭವಾಗಿದ್ದು ಮಾವೋವಾದಿಗಳು ಮುನ್ನಡೆ ಸಾಧಿಸಿದ್ದಾರೆ. ಮತ ಎಣಿಕೆ ಆರಂಭವಾಗಿರುವ 60 ಕ್ಷೇತ್ರಗಳಲ್ಲಿ 32 ರಲ್ಲಿ ಮಾವೋವಾದಿಗಳು ಮುಂದೆ ಇದ್ದಾರೆ. ಮೊದಲ ಎರಡು ಫಲಿತಾಂಶಗಳು ಮಾವೋವಾದಿ ಮತ್ತು ನೇಪಾಳಿ ಕಾಂಗ್ರೆಸ್ ಪಾಲಾಗಿವೆ. ಹಿಂದೆ ದೊಡ್ಡ ಪಕ್ಷವಾಗಿದ್ದ ನೇಪಾಳಿ ಕಮ್ಯೂನಿಸ್ಟ್ ಪಕ್ಷ (ಯು.ಎಂ.ಎಲ್.) ಅದರ ಸ್ಥಾನ ಕಳೆದುಕೊಳ್ಳುವ ಲಕ್ಷಣಗಳು ಕಂಡಿವೆ. ಮತ ಎಣಿಕೆ 2-3 ವಾರಗಳಷ್ಟು ಸಮಯ ತೆಗೆದುಕೊಳ್ಳುವ ಅಂದಾಜಿದೆ.

ಚುನಾವಣೆ 240 ಕ್ಷೇತ್ರಗಳಿಂದ ನೇರ ಪ್ರತಿನಿಧಿಗಳು ಮತ್ತು 335 ಅನುಪಾತ ಪಟ್ಟಿ ಪದ್ಧತಿ (ಪಕ್ಷದ ಒಟ್ಟು ರಾಷ್ಟ್ರೀಯ ಮತಗಳಿಕೆಯ ಆಧಾರದ ಮೇಲೆ ಅದರ ಪಟ್ಟಿಯ ಹೆಸರುಗಳ ಆಯ್ಕೆ) ಪ್ರಕಾರ ಆರಿಸಲು ನಡೆದಿದೆ. ಇನ್ನೂ 26 ಪ್ರತಿನಿಧಿಗಳನ್ನು ಮಂತ್ರಿಮಂಡಲ ನೇಮಿಸುತ್ತದೆ. ಸಂವಿಧಾನ ಸಭೆಯಲ್ಲಿ ಒಟ್ಟು 601 ಸದಸ್ಯರು ಇರುತ್ತಾರೆ. ನೇರ ಆಯ್ಕೆಗೆ 3700 ಮತ್ತು ಅನುಪಾತ ಪಟ್ಟಿಗೆ 5700 ಅಭ್ಯರ್ಥಿಗಳು ಸ್ಪರ್ಧಿಸಿದ್ದರು.


ಮಾವೋವಾದಿ ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಪ್ರಚಾರ

ನೋಟ

ಜಾಗತೀಕರಣದ ವಿಷವರ್ತುಲದಲ್ಲಿ ಶಿಕ್ಷಣ



ಡಾ. ಜಿ. ಭಾಸ್ಕರ ಮಯ್ಯ

"ವಿದೇಶಿ ವಿಶ್ವವಿದ್ಯಾಲಯಗಳು ಭಾರತಕ್ಕೆ ಬರುವುದು ಅನಿವಾರ್ಯ. ಉಚ್ಚ ಶಿಕ್ಷಣದ ಕ್ಷೇತ್ರದಲ್ಲಿ ನೇರ ವಿದೇಶೀ ಬಂಡವಾಳ ಹೂಡಿಕೆಯನ್ನು ಇಂದು ತಡೆಯಲಾಗುವುದಿಲ್ಲ. ಆದ್ದರಿಂದ, ನಾವು ಅದನ್ನು ನಿಯಂತ್ರಿಸಲಿಕ್ಕಷ್ಟೇ ಕಾನೂನುಗಳನ್ನು ರಚನೆ ಮಾಡಬಹುದಾಗಿದೆ" ಎನ್ನುತ್ತದೆ ಮಾನವ ಸಂಪನ್ಮೂಲ ವಿಕಾಸ ಸಚಿವಾಲಯ.

ಇದು ಭಾರತ ಸರಕಾರದಿಂದ ಆಯೋಜಿಸಲ್ಪಟ್ಟ ಶಿಕ್ಷಣಮಂತ್ರಿಗಳ ಸಮ್ಮೇಳನದಲ್ಲಿ 2005, ಜನವರಿ 10 - 11 ರಂದು ನೀಡಲಾದ ಅಧಿಕೃತ ಹೇಳಿಕೆ. ವಿದೇಶೀ ವಿಶ್ವವಿದ್ಯಾಲಯಗಳನ್ನು, ಅಂತೆಯೇ ವಿದೇಶೀ ನೇರ ಹೂಡಿಕೆಯನ್ನು ಭಾರತಕ್ಕೆ ತರಲು ಈಗಾಗಲೇ ನಿರ್ಣಯಿಸಿಯಾಗಿತ್ತು. ಆದರ ಒಂದು ಅನೌಪಚಾರಿಕ ಘೋಷಣೆಯಾಗಿಯಷ್ಟೇ ಮೇಲಿನ ಹೇಳಿಕೆಯನ್ನು ಪರಿಗಣಿಸಬಹುದು.

ಭಾರತಕ್ಕೆ ವಿದೇಶೀ ವಿಶ್ವವಿದ್ಯಾಲಯಗಳು ಅಂತೆಯೇ ವಿದೇಶೀ ಹೂಡಿಕೆ ಬರುವುದು ಭಾರತದ ಹಿತಕ್ಕೆ ಅನುಕೂಲಕರವೇ ಅಲ್ಲವೇ ಎಂಬ ಬಗ್ಗೆ ಚರ್ಚೆ ಕೂಡಾ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ನಡೆಯಲಿಲ್ಲ.

ಇಂದಿನ ಜಾಗತೀಕರಣಕ್ಕೂ 17-18ನೆಯ ಶತಮಾನದ ವಸಾಹತುಶಾಹಿ ವ್ಯವಸ್ಥೆಗೂ ಬಹಳ ನಿಕಟವಾದ ಸಂಬಂಧವಿದೆ. 'ಜಾಗತೀಕರಣ' ಕೆಲಸವು ಮಾಡುವ ವಿಧಾನವು ದೇಶಗಳ ನೀತಿನಿಯಮಾವಳಿಗಳನ್ನು ಪ್ರಭಾವಿಸುವ ಕಾರ್ಯತಂತ್ರಕ್ಕೂ ಕೂಡಾ ಪರಕೀಯವಾಗಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಶಿಕ್ಷಣ ಕ್ಷೇತ್ರವನ್ನು ಭಾರತದ ಪ್ರಮುಖ ಬಂಡವಾಳಗಾರರ ಮತ್ತು ಆಳುವ ವರ್ಗಗಳ ಹಿತಗಳಿಗೆ ಅನುಕೂಲಕರವಾಗುವಂತೆ ಅತ್ಯಂತ ಬುದ್ಧಿವಂತಿಕೆಯಿಂದ ಕಾರ್ಯಸೂಚಿಯನ್ನು (Agenda) ತಯಾರಿಸುವ ಕೆಲಸವನ್ನು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವಬ್ಯಾಂಕ್, ವಿಶ್ವವ್ಯಾಪಾರ ಸಂಘಟನೆಗಳು ಮಾಡುತ್ತವೆ. ಇಂತಹ ಹಲವಾರು ಸಂಸ್ಥೆಗಳು ಹೇಗೆ ತಮ್ಮ ವಿಶಿಷ್ಟ ಜಾಲಗಳಲ್ಲಿ ವಿಶ್ವದ ವಿಭಿನ್ನ ದೇಶಗಳ ಆರ್ಥಿಕ ವ್ಯವಸ್ಥೆಯನ್ನೇ ಸೆರೆಹಿಡಿಯುವ ಕೆಲಸವನ್ನು ಮಾಡುತ್ತವೆ. ಅಂತೆಯೇ ಶಿಕ್ಷಣ ಕ್ಷೇತ್ರವನ್ನೂ ಕೂಡಾ.

ಆದರೆ, ನಾಗರಿಕ ಸಮಾಜ, ಸರ್ಕಾರೇತರ ಸ್ವತಂತ್ರ ಸಂಘಟನೆ - ಇತ್ಯಾದಿ ನಾನಾ ಪರಿಕರಗಳನ್ನು ದಲ್ಲಾಳಿಗಳನ್ನಾಗಿಸಿ ಜಾಗತೀಕರಣ ತನ್ನ ವಿಕೃತ - ವಿಕಾರಗ್ರಸ್ತ ಮುಖವನ್ನು ಅಡಗಿಸಿಟ್ಟುಕೊಂಡಿರುತ್ತದೆ. ಅಂತೆಯೇ ತನ್ನ ಸ್ವೀಕಾರಾರ್ಹವೆಂದು ತೋರಿಸಿಕೊಡುವ ಮುಖವನ್ನು - ಸ್ವರೂಪವನ್ನು ಮಾತ್ರ ಪ್ರದರ್ಶಿಸುವ ಪ್ರಯತ್ನ ಮಾಡುತ್ತದೆ. ಇದರರ್ಥ ಇಷ್ಟೆ: ಜಾಗತೀಕರಣವೆನ್ನುವುದು ಅತ್ಯಂತ ಪರಿಷ್ಕೃತವಾದ, ಅತಿ ಹೆಚ್ಚು ವಿಕಸಿತವಾದ ಹಾಗೂ ಶಕ್ತಿಶಾಲಿಯಾದ ವಸಾಹತುಶಾಹಿಯ ಒಂದು ಹೊಸ ಪರಿಭಾಷೆ.

ಜ್ಞಾನವು ಮಾನವ ವಿಕಾಸಕ್ಕೆ ಒಂದು ಪ್ರಮುಖ ಸಾಧನ. ಆದರೆ ಜಾಗತೀಕರಣದ ಪ್ರಕಾರ ಆ ವಿಕಾಸವು ಮಾರುಕಟ್ಟೆಯ ಶಕ್ತಿಗಳ ಹಿತಸಾಧನೆಗಳಿಗೇ ಉಪಯೋಗ ವಾಗಬೇಕು. ಆ ನೆಲೆಯಲ್ಲಿಯೇ ಅದು ಸೃಜನಶೀಲವಾಗಿರಬೇಕು. ಇಲ್ಲಿ ನಾವು 19ನೆಯ ಶತಮಾನದಲ್ಲಿ ಮೆಕಾಲೆ ಇಂಗ್ಲೀಷ್ ಶಿಕ್ಷಣಕ್ಕೆ ಒತ್ತುಕೊಟ್ಟ ಪ್ರಸಂಗವನ್ನು ನೆನಪಿಸಿಕೊಳ್ಳಬಹುದು. ಅವರಿಗೆ ಭಾರತವನ್ನು ಆಳಲು ಒಂದು ತರಬೇತುದಾರರ, ಕಾರಕೂನರ ಆಡಳಿತ ನಿರ್ವಾಹಕರ (ತಮ್ಮಿಚ್ಛೆಯಂತೆ ಕುಣಿಯುವ ತಹಶೀಲ್ದಾರ, ಕಲೆಕ್ಟರ್ ಇತ್ಯಾದಿ) ಅಗತ್ಯತೆಯಿತ್ತು. 'ಪ್ರಗತಿಶೀಲ'ವೆಂಬ ಮುಖವಾಡವನ್ನು ಇಟ್ಟುಕೊಂಡು ಭಾರತದ ಸಂಪತ್ತನ್ನು ಲೂಟಿ ಮಾಡುವುದೇ ಅವರ ಮುಖ್ಯ ಗುರಿಯಾಗಿತ್ತು. ಭಾರತದ ಮೂರ್ಖ, ಸ್ವಾರ್ಥಪರ ಬುದ್ಧಿಜೀವಿಗಳಿಗೆ ಮಾತ್ರ ಬ್ರಿಟಿಷರ ಪ್ರಗತಿಶೀಲತೆ ಕಣ್ಣುಕುಕ್ಕಿಸುತ್ತದೆ! ಇಂದಿಗೂ ಅವರು ಆ ಗುಲಾಮಗಿರಿಯಿಂದ ಹೊರಬಂದಿಲ್ಲ. ಬದಲಿಗೆ ನವ ವಸಹಾತುಶಾಹಿಯ ತಾಳಕ್ಕೆ ತಕ್ಕಂತೆ ಕುಣಿಯುವ ಬುದ್ಧಿಜೀವಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಮೆಕಾಲೆಯ 'ಇಂಗ್ಲೀಷ್' ಗುರಿಯು ಭಾರತದ ಪ್ರಗತಿಗಾಗಿ ಎಂದೆಂದಿಗೂ ಇರಲಿಲ್ಲ. ಅದು ಬ್ರಿಟಿಷ್ ವಸಾಹತುಗಾರರ ರಣನೀತಿಯಾಗಿತ್ತು. ಅದರ ಉದ್ದೇಶ ವಸಾಹತುಗಳ ಶಕ್ತಿಯನ್ನು ವರ್ಧಿಸುವುದು. ಹೆಚ್ಚು ಹೆಚ್ಚು ಲಾಭ ಪಡೆಯಲು ಸುನಿಯೋಜಿತ ಮಾರ್ಗಗಳನ್ನು ರಚಿಸುವುದಾಗಿತ್ತು.

ಜಾಗತೀಕರಣದ ಈ ಸಂದರ್ಭವು ಆ ಕಾಲಕ್ಕಿಂತ ಭಿನ್ನವಾಗಿ ಕಾಣಿಸಿದರೂ ಅದರ ಒಳ ಉದ್ದೇಶ ಒಂದೇ. ಈ ತಿಳುವಳಿಕೆಯ ಆಧಾರದಲ್ಲಿಯೇ ಅಂಬಾನಿ - ಬಿರ್ಲಾ ವರದಿಯನ್ನು ಏಪ್ರಿಲ್ 2000ದಲ್ಲಿ ಪ್ರಧಾನಮಂತ್ರಿಯ 'ವ್ಯಾಪಾರ ಉದ್ಯೋಗ ಪರಿಷತ್ತಿ'ಗೆ ಒಪ್ಪಿಸಲಾಯಿತು. ಈ ರಿಪೋರ್ಟ್‌ನಲ್ಲಿ ವಿಜ್ಞಾನ, ಸಮಾಜವಿಜ್ಞಾನ, ಮನೋವಿಜ್ಞಾನ ಮತ್ತು ಇತಿಹಾಸಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ಏಕೆಂದರೆ ಅವುಗಳಿಗೆ ಮಾರುಕಟ್ಟೆ ಮೌಲ್ಯವಿದೆ. ಆದ್ದರಿಂದ ಅವುಗಳಿಗೆ ಸರಕಾರಿ ಸಹಕಾರಗಳನ್ನು ಕೊಡಕೂಡದು - ಅವು ಸ್ವತಂತ್ರವಾಗಿರಬೇಕು. ಅವುಗಳ ಖಾಸಗೀಕರಣವಾಗಬೇಕು. ಏಕೆ? ಏಕೆಂದರೆ ಅವುಗಳನ್ನು ಪಳಗಿಸಿ ತಮ್ಮ ಮಾರುಕಟ್ಟೆಯ ಹಿತಗಳನ್ನು ಸುಲಭವಾಗಿ ಸಾಧಿಸಬಹುದು.

ಹಾಗಾದರೆ ಪ್ರಾಚೀನ ಭಾಷೆಗಳು, ಪುರಾತತ್ವವಿಜ್ಞಾನ, ದರ್ಶನ/ತತ್ವಶಾಸ್ತ್ರ - ಇವುಗಳ ಗತಿಯೇನು? ಇವುಗಳಿಗೆ ಮಾರುಕಟ್ಟೆ ಬೆಲೆಯಿಲ್ಲ. ಆದ್ದರಿಂದ ಅವುಗಳನ್ನೆಲ್ಲಾ ಸರ್ಕಾರವೇ ಸಹಾಯ ಕೊಟ್ಟು ನಡೆಸಬೇಕು. ಮೆಕಾಲೆಯ ಪ್ರಪೌತ್ರರ ಬುದ್ಧಿವಂತಿಕೆ ಎಷ್ಟೊಂದು ಪ್ರಚಂಡವಿರಬೇಕು.

ಅಂಬಾನಿ - ಬಿರ್ಲಾ ವರದಿ ಸ್ಪಷ್ಟವಾಗಿ ತಿಳಿಸುವುದೇನೆಂದರೆ ಶಿಕ್ಷಣವು ಪ್ರತಿಯೊಂದು ಕ್ಷೇತ್ರದಲ್ಲೂ ಮಾರುಕಟ್ಟೆಯ ಶಕ್ತಿಯನ್ನು ಪರಿಗಣಿಸಿಯೇ ನಡೆಯತಕ್ಕದು. ಪ್ರಾಥಮಿಕ ಶಿಕ್ಷಣವೂ ಈ ನಿಟ್ಟಿನಲ್ಲಿಯೇ ತಯಾರಾಗಬೇಕು. ಆರಂಭದಿಂದಲೇ ಇಂಗ್ಲೀಷ್ ಕಲಿಕೆಯು ಅಗತ್ಯ. ಹೀಗೆ ಮಾಡಿದರೆ ಮಾತ್ರ ಅವರು ತಮ್ಮ ಸಾಂಸ್ಕೃತಿಕ, ಸಹಜ ಸ್ವಾಭಾವಿಕ, ಮಾನವೀಯ ಪ್ರಕೃತಿಗಳನ್ನೆಲ್ಲಾ ಜಾಡಿಸಿ ಹಾಕಿ 'ಟುಸ್ - ಪುಸ್' ಎನ್ನುತ್ತಾ, ಬಾಲ್ಯ ಕೌಮಾರ್ಯದ ಸುಖಗಳನ್ನೆಲ್ಲಾ ಗುಡಿಸಿ ಹಾಕಿ, ಹಿಪ್ನೋಟೈಸ್ ಆದಂತೆ ಗಿಳಿ ಪಾಠಮಾಡುತ್ತಾ ಯಂತ್ರ ಮಾನವರಾಗಬೇಕು. ಈ ಯಂತ್ರ ಮಾನವರ ಗುರಿ ಬಂಡವಾಳಗಾರರ ಬಂಡವಾಳ ಹೆಚ್ಚಿಸುವ ಕೈಂಕರ್ಯವಾಗಬೇಕು. ಇದನ್ನೆ ತಮ್ಮ ಜೀವನದ ಆತ್ಯಂತಿಕ ಗುರಿಯೆಂದು ಭಾವಿಸಿದ ನಮ್ಮ ಮಧ್ಯಮವರ್ಗದ ಸ್ತ್ರೀಪುರುಷರು ತಮ್ಮ ಒಬ್ಬನೇ ಮಗಳೊ ಮಗನೊ (ಅಪರೂಪಕ್ಕೆ ಇಬ್ಬರು) ಅವರನ್ನು 3ನೇ ವರ್ಷ ಪ್ರಾಯದಿಂದಲೇ ಟಂಕಸಾಲೆಯಲ್ಲಿ ಮುದ್ರಿಸಿ, ಇಂಗ್ಲೀಷ್ ಕುಡಿಸುತ್ತಾ 'ವಿಶೇಷ' ಅತ್ಯಾಧುನಿಕ' ಯಂತ್ರ ಮಾನವನ ನಿರ್ಮಾಣಕ್ಕಾಗಿ ಸುತ್ತಿ ಚೇಣು ಹಿಡಿದು ಹಗಲೂ ರಾತ್ರಿ ಶ್ರಮಿಸುತ್ತಿರುತ್ತಾರೆ. ಹೀಗೆ ತಯಾರಾದ ಯಂತ್ರಗಳು ಮಾರುಕಟ್ಟೆಯ ಅವಶ್ಯಕತೆಗಳನ್ನು ಪೂರೈಸುತ್ತಿರುತ್ತಾರೆ. ಆದರೆ, ಅವುಗಳಿಗೆ ಮುಂದೆ ತಮ್ಮನ್ನು ತಯಾರು ಮಾಡಿದ ತಂದೆ ತಾಯಿಗಳು ಕೂಡ ಕೇವಲ ಜಡಯಂತ್ರಗಳೇ. ಮಾರುಕಟ್ಟೆಯ ಹಿತಾಸಕ್ತಿಯ ಲಾಭದ ಎದುರಿಗೆ ಅಪ್ಪ ಅಮ್ಮಂದಿರೆಂಬ ಯಂತ್ರಗಳು ಅನುಪಯುಕ್ತ - 'ಗುಜರಿ'ಯಾಗಿ ಕಾಣಿಸುತ್ತವೆ. ಯಶೋಧೆಗೆ ಬಾಲಕೃಷ್ಣನ ಲೀಲೆಗಳ ಸುಖ ಸಂಭ್ರಮಗಳಿಲ್ಲ. ಬಾಲಕೃಷ್ಣನಿಗೆ ಸ್ವಚ್ಛಂದ ಸ್ವತಂತ್ರವಾಗಿ ಮಕ್ಕಳೊಡನೆ ಆಟವಾಡುತ್ತಾ ಬೆಣ್ಣೆ ಕದಿಯುವ ಸುಖವಿಲ್ಲ. ದನದ ಹಿಂಡುಗಳು ಸುಖವಾಗಿ ಮೇಯುತ್ತಿರುವಾಗ ಕೊಳಲೂದುವ ಆನಂದವಿಲ್ಲ. ಬಾಲಕೃಷ್ಣನ ಲೀಲೆಯಿಂದ ಯಾವ ಸುಖವನ್ನು ನಂದಭಾಮಿನಿ 'ಯಶೋಧೆ' ಪಡೆದಳೊ ಅದು ಸುರ, ಮುನಿಗಳಿಗೂ ಅಲಭ್ಯವೆಂದು ಸೂರದಾಸ ಹಾಡಿದ. ಆದರೆ ಇಂದಿನ ನಂದಭಾಮಿನಿಯರು ತಮಗರಿವಿಲ್ಲದೆಯೇ ಉಳಿ, ಚೇಣು, ಸುತ್ತಿಗೆ ಹಿಡಿದು ಗುಲಾಮಗಿರಿಯ ಬದುಕು ನಡೆಸುತ್ತಾ ಅದನ್ನೇ ತಮ್ಮ ಮಹಾನ್ ಸಾಮಾಜಿಕ ಪ್ರತಿಷ್ಠೆ ಎಂದು ಬಗೆಯುತ್ತಾರೆ. ನಂದರು ಕೂಡ ಅವರ ಹೆಗಲಿಗೆ ಹೆಗಲು ಕೊಟ್ಟು 'ಕಾಯಕ' ಮಾಡುತ್ತಾರೆ. ಇದು ಜಾಗತೀಕರಣದ ಮಾಯಾಕಾಲದಲ್ಲಿ ಸಿಲುಕಿದ ಮಧ್ಯಮವರ್ಗದವರ ಕತೆ. "ಇಂದು ಶಿಕ್ಷಣವು ಸಮಾಜದ ವಿಕಾಸದ ಒಂದು ಉಪಕರಣವಲ್ಲ; ಬದಲಿಗೆ ಮಾನವ ಸಂಪನ್ಮೂಲ ಮತ್ತು ಜಾಗತಿಕ ಮಾರುಕಟ್ಟೆಯ ಹೂಡಿಕೆಯಾಗಿದೆ" (ಅಂಬಾನಿ - ಬಿರ್ಲಾ ರಿಪೋರ್ಟ್‌ನ ಮುನ್ನುಡಿ, ಭಾರತ ಸರಕಾರ 2000)

ಈ ಜಾಗತಿಕ ಪರಿಸ್ಥಿತಿಯಲ್ಲಿ 'ಶಿಕ್ಷಣ'ದ ಸ್ಥಿತಿ ಹೀಗಿದೆ:

1. ಶಿಕ್ಷಣದ ಉದ್ದೇಶಗಳ ತುಚ್ಛೀಕರಣ.
2. ಜ್ಞಾನವನ್ನು ತುಂಡುತುಂಡು ಮಾಡಿ ಹಂಚುವುದು.
3. ಮಾರುಕಟ್ಟೆಯ ಸಾಮರ್ಥ್ಯವನ್ನವಲಂಭಿಸಿ ಜ್ಞಾನದ ಪ್ರಕೃತಿಯ ನಿರ್ಣಯ.
4. ಜಾಗತಿಕ ಶಕ್ತಿಗಳ ಆರ್ಥಿಕ, ಕೈಗಾರಿಕಾ ಮತ್ತು ಸಾಮಾಜಿಕ, ಸಾಂಸ್ಕೃತಿಕ ವರ್ಚಸ್ಸನ್ನು ಪಠ್ಯಕ್ರಮದಲ್ಲಿ ನೆಲೆಗೊಳಿಸುವುದು.
5. ಸಮಾನ ಮತ್ತು ಮೇಲು - ಕೀಳು ಇತ್ಯಾದಿಗಳನ್ನು ಪ್ರತ್ಯೇಪ್ರತ್ಯೇಕ ಶೈಕ್ಷಣಿಕ ವಿಚಾರಧಾರೆಗಳನ್ನು ಬೇರೆ ಬೇರೆ ಸಾಮಾಜಿಕ ಸಾಮುದಾಯಿಕ ವಲಯಗಳಲ್ಲಿ ನೆಲೆಗೊಳಿಸುವಂತೆ ಮಾಡುವುದು.
6. ದುರ್ಬಲ ಮಕ್ಕಳು ಮತ್ತು ಯುವಜನರನ್ನು ಅಂಚಿಗೆ ತಳ್ಳುವುದು.

ಈ ಶಿಕ್ಷಣ ವ್ಯವಸ್ಥೆಯಲ್ಲಿ ಚಿಂತನ, ಜ್ಞಾನ, ಮೌಲ್ಯ ಮತ್ತು ಸಂವೇದನೆಗಳಿಗೆ ಯಾವ ಬೆಲೆಯೂ ಇಲ್ಲ. ಇವುಗಳಿಗೆ ಬೆಲೆ ಕೊಟ್ಟರೆ ಅಥವಾ ಅವಕಾಶ ಕೊಟ್ಟರೆ ಸಮಾಜ ಕಲ್ಯಾಣ, ಸಮಾನತೆಗೆ ಅವಕಾಶ ಕೊಟ್ಟಂತಾಗುತ್ತದೆ. ಶಿಕ್ಷಣ ಏನಿದ್ದರೂ ಜಾಗತಿಕ ಬಂಡವಾಳದ ಸಂಕುಚಿತ ಸ್ವಾರ್ಥದ ಸಾಧನೆಗಾಗಿರಬೇಕು. ಆದ್ದರಿಂದ ಅದು ಸೀಮಿತ ಜನರಿಗಷ್ಟೇ ತಲುಪಬೇಕು. ಇದಕ್ಕೊಂದು ಉದಾಹರಣೆ: ವಿಶ್ವಬ್ಯಾಂಕ್‌ನಿಂದ ಪ್ರಾಥಮಿಕ ಶಿಕ್ಷಣಕ್ಕೆ ಕೊಡುವ ಅನುದಾನದ ಬಹುದೊಡ್ಡ ಪಾಲು ಮಧ್ಯಪ್ರದೇಶಕ್ಕೆ ಹೋಗುತ್ತಿತ್ತು. ಅಲ್ಲಿಯ ಹೋರಂಗಾಬಾದ್‌ನಲ್ಲಿ ವಿಜ್ಞಾನ ಶಿಕ್ಷಣ ಕಾರ್ಯಕ್ರಮವು 30 ವರ್ಷಗಳಿಂದ ನಡೆಯುತ್ತಿತ್ತು. ಅದರ ಪ್ರಯೋಗವು 14 ಜಿಲ್ಲೆಗಳ 1000 ಶಾಲೆಗಳಲ್ಲಿ ನಡೆಯುತ್ತಿತ್ತು. ವಿಶ್ವಬ್ಯಾಂಕಿನ 'ಜ್ಞಾನ'ದ ಹೊಸ ಡೆಫಿನೇಶನ್‌ಗೆ ಅದು ಸರಿಹೊಂದುತ್ತಿರಲಿಲ್ಲ. ಆದ್ದರಿಂದ 2002ರಲ್ಲಿ ಅದನ್ನು ಮುಚ್ಚಲಾಯಿತು.

ವ್ಯವಹಾರವಾದವೇ ಜಾಗತೀಕರಣದ ಮೂಲಮಂತ್ರ. ಪಶ್ಚಿಮ ದೇಶಗಳು ಅತ್ಯಂತ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದ 1930ರ ಕಾಲಘಟ್ಟದಲ್ಲಿ ಈ ಸಿದ್ಧಾಂತ ವಿಕಾಸಗೊಂಡಿತು. ಇದರ ಪರಿಣಾಮವಾಗಿ ಬಹುರಾಷ್ಟ್ರೀಯ ಬಂಡವಾಳ, ಉಪಗ್ರಹ ಸಂಚಾರ ಮಾಧ್ಯಮ. ಡಿಜಿಟಲ್ ಟೆಕ್ನಾಲಜಿ - ಇವು ಜ್ಞಾನವನ್ನು ನಿರ್ದೇಶಿಸುವ ಮೂಲಗಳಾದವು. ಇದುವೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾಲಯ ಸ್ತರದ ತನಕ ಸ್ಥಾಪಿಸಿದೆ. ಸಂವಿಧಾನ ಕೊಡಮಾಡಿದ ಸಮಾನತೆಯ ಮೌಲ್ಯವನ್ನು ಎತ್ತಿಹಿಡಿಯುವ ಸರಕಾರಿ ಶಿಕ್ಷಣವನ್ನು ಸಂಪೂರ್ಣವಾಗಿ ಕಡೆಗಣಿಸಲಾಯಿತು. 1990ರ ನಂತರ ಸಂವಿಧಾನದ ಬಗೆಗೆ ಯಾವ ಬದ್ಧತೆಯೂ ಉಳಿಯದಂತಹ ಪರಿಸ್ಥಿತಿ ನಿರ್ಮಾಣವಾಯಿತು. ವಿಶ್ವಬ್ಯಾಂಕ್‌ನಿಂದ ಪ್ರಾಯೋಜಿತವಾದ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು 1994 - 95ರಲ್ಲಿ ಆರಂಭವಾಯಿತು. ಇದು 18 ರಾಜ್ಯಗಳ 275 ಜಿಲ್ಲೆಗಳಲ್ಲಿ ಜಾರಿಗೆ ಬಂತು. ಸರಿಸುಮಾರು ಅರ್ಧಾಂಶ ದೇಶವೇ ಈ ಬಕಾಸುರನ ಹೊಟ್ಟೆಯಲ್ಲಿ ಸೇರಿ ಹೋಗಿದೆ. ಹೊರಗಿನ ಅನುದಾನ ದೇಶದ ರಾಜಕೀಯ ಇಚ್ಛಾಶಕ್ತಿಯನ್ನು ಕೊಂದು ಹಾಕುತ್ತದೆ. ಇದರ ಪರಿಣಾಮವಾಗಿ ಶಿಕ್ಷಣ ವ್ಯವಸ್ಥೆ ಇಂದು ತೀವ್ರವಾಗಿ ಕೋಮುವಾದೀಕರಣಕ್ಕೊಳಗಾಗಿದೆ. ಪುನರುತ್ಥಾನವಾದಿ ಶಕ್ತಿಗಳು ಉಲ್ಬಣಿಸುತ್ತಿವೆ. ಇಂದಿನ ಶಿಕ್ಷಣ ವ್ಯವಸ್ಥೆ ಗೌರವ ಕೊಡುವುದು ಇತಿಹಾಸ ವಿರುದ್ಧ, ವಿಮರ್ಶೆ ವಿರುದ್ಧ ಪ್ರತಿಗಾಮಿ ಶಕ್ತಿಗಳಿಗೆ ಮಾತ್ರ.

ಮಾರುಕಟ್ಟೆಯ ಶಕ್ತಿಗಳು ಶಿಕ್ಷಣದ ಮೇಲೆ ಮಾಡುತ್ತಿರುವ ಅತ್ಯಾಚಾರವೆಂದರೆ ಅದು ಜ್ಞಾನದ ಪ್ರಕೃತಿಯ ಮೇಲೆಯೇ ನಡೆಸುತ್ತಿರುವ ಅತ್ಯಾಚಾರ. ಜ್ಞಾನದ ಮೇಲೆ ಜಾಗತೀಕರಣದ ಹಲ್ಲೆ ಅತ್ಯಂತ ಸೂಕ್ಷ್ಮವಾಗಿ ಮಾನವ ಸಮುದಾಯವನ್ನು ಬರ್ಬರ ಜಗತ್ತಿನೆಡೆಗೆ ತಳ್ಳಲು ನಡೆಸುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳ ಅಭಿಯಾನವಾಗಿದೆ.

ಶಿಕ್ಷಕರಿಲ್ಲದಿದ್ದರೆ ಏನಾಯ್ತು? ಲ್ಯಾಪ್‌ಟಾಪ್ ಇದ್ದರೆ ಸಾಕು.

ಬ್ಲಾಕ್‌ಬೋರ್ಡ್ ಇಲ್ಲದಿದ್ದರೇನಾಯ್ತು? ಶಾಲೆಗಳಲ್ಲಿ ಕುಡಿಯುವ ನೀರಿಲ್ಲದಿದ್ದರೆ ಏನಾಯ್ತು? ಅಧ್ಯಾಪಕರಿಲ್ಲದಿದ್ದರೇನಾಯ್ತು? (1032 ಲಕ್ಷ ಶಾಲೆಗಳಿಗೆ ಮಾಡಿಲ್ಲ, ಗೋಡೆಯಿಲ್ಲ, 2.01 ಲಕ್ಷ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ) ತೊಂದರೆಯಿಲ್ಲ. ಲ್ಯಾಪ್‌ಟಾಪ್ ಇದ್ದರೆ ಸಾಕು. ಲ್ಯಾಪ್‌ಟಾಪಿಗೆ ಯೋಜನಾ ಆಯೋಗ 500 ಕೋಟಿಯ ಯೋಜನೆಯನ್ನು ಸಿದ್ಧಪಡಿಸಿದೆ.

ಸರ್ಕಾರದ ಪ್ರಾಥಮಿಕ ಶಿಕ್ಷಣ ಮುಕ್ತ ಮತ್ತು ಅನಿವಾರ್ಯ ಎಂಬ ಕಾನೂನನ್ನೆ ಇಂದಿನ ಸರಕಾರ ಬದಿಗಿರಿಸಿದೆ. ಹೂತು ಹಾಕಲು ಪ್ರಯತ್ನಿಸಿದೆ. ಆದರೆ ಅದೇ ಸರ್ಕಾರ (ಈ ಹಿಂದಿನ ಎನ್.ಡಿ.ಎ) ಭಾರತದ 10 ಲಕ್ಷ ಮಕ್ಕಳಿಗೆ ಅಮೇರಿಕಾದ ಬೋಸ್ಟನ್‌ನಲ್ಲಿರುವ MIT Media Lab ನಿಂದ ಲಾಪ್‌ಟಾಪ್ ಒದಗಿಸುವ ಯೋಜನೆ ತಯಾರಿಸಿ ಜಾರಿ ಮಾಡಿತು.

ಆದರೆ ಶಾಲೆಗೆ ಹೋಗಬೇಕಾದ 17 ಕೋಟಿ ಮಕ್ಕಳನ್ನು ಶಾಲೆಗೆ ಕಳುಹಿಸುವ ಯೋಜನೆ ಇನ್ನೂ ಗೆದ್ದಲು ತಿನ್ನುತ್ತಾ ಇದೆ. ಇಂದು ಭಾರತದಲ್ಲಿ ಶಾಲೆಗಳ ಪರಿಸ್ಥಿತಿ ಹೀಗಿದೆ:

1. 2.64% ಪಟ್ಟಣದ ಮತ್ತು 1.49 ಗ್ರಾಮೀಣ ಪ್ರದೇಶಗಳ ಶಾಲೆಗಳಲ್ಲಿ ಒಬ್ಬರೇ ಒಬ್ಬ ಅಧ್ಯಾಪಕರಿಲ್ಲ.
2. 81,617 ಶಾಲೆಗಳಲ್ಲಿ ಬ್ಲಾಕ್‌ಬೋರ್ಡ್ ಇಲ್ಲ.
3. 1,07,842 ಶಾಲೆಗಳಲ್ಲಿ ಕೇವಲ ಒಂದು ಕ್ಲಾಸ್ ರೂಮ್ ಇದೆ.
4. 10,37,813 ಶಾಲೆಗಳಿಗೆ ನಾಲ್ಕು ಗೋಡೆಗಳು ಇಲ್ಲ.
5. 2,01,292 ಶಾಲೆಗಳಲ್ಲಿ ಕುಡಿಯುವ ನೀರಿಲ್ಲ.
6. 28.37% ಶಾಲೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ

(ಸರಕಾರವೇ ಒದಗಿಸಿದ ಅಂಕಿ ಅಂಶಗಳು)



ಅದೇ ಸೇಡಿನ ಜಾಡು

ಕನ್ನಡ ಚಿತ್ರರಂಗದಲ್ಲಿ ಸಸ್ಪೆನ್ಸ್ ಸಿನೆಮಾಗಳಿಗೆ ಒಂದು ಇತಿಹಾಸವೇ ಇದೆ. ಕುತೂಹಲಕಾರಿ ಕಥೆಯುಳ್ಳ ಸಸ್ಪೆನ್ಸ್ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಗೆದ್ದದ್ದೂ ಇದೆ.

ಶ್..., ಪ್ರತ್ಯರ್ಥ, ನಿಷ್ಕರ್ಷ, ಆಪದ್ಬಾಂಧವ ಹೀಗೆ ಕನ್ನಡದ ಕೆಲ ಸಸ್ಪೆನ್ಸ್ ಚಿತ್ರಗಳನ್ನು ಪಟ್ಟಿ ಮಾಡಬಹುದು. ಇಂಥ ಚಿತ್ರಗಳ ಸಾಲಿಗೆ ಈಗ ತೆರೆ ಕಂಡ ಆಕ್ಸಿಡೆಂಟ್ ಕೂಡ ಸೇರುತ್ತದೆ.

ನಟನಾಗಿ ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ರಮೇಶ್ ಅರವಿಂದ್ ಈ ಚಿತ್ರದ ನಿರ್ದೇಶಕ. ಒಂದು ಸಾಮಾನ್ಯ ಕಥೆಯಾದರೂ ಲವಲವಿಕೆಯ ನಿರೂಪಣೆಯಿದೆ.

ಚಿತ್ರ ಆರಂಭವಾಗುವುದೇ ಆರು ಮಂದಿಯ ಫ್ರೆಂಡ್‌ಶಿಪ್ ಟೂರ್ ಮೂಲಕ. ತುಂಬಾ ಹಳೆಯ ಸ್ನೇಹವಲ್ಲದಿದ್ದರೂ ಅವರೆಲ್ಲ ಆತ್ಮೀಯ ಮಿತ್ರರು. ಆರು ಮಂದಿಯಲ್ಲಿ ನಾಯಕ ಸಾವಂತ್ (ರಮೇಶ್) ಹಾಗೂ ಗೆಳತಿ ಪೂಜಾ ಗಾಂಧಿ ರೇಡಿಯೋ ಜಾಕಿ. ನಾಲ್ಕು ದಿನದ ತರಬೇತಿಗೆಂದು ವಿದೇಶಕ್ಕೆ ಹೋಗಿ ಬರುವಾಗ ಆರು ಮಂದಿ ಸ್ನೇಹಿತರಲ್ಲಿ ಒಬ್ಬಳಾಗಿರುವ ಸಾವಂತ್ ಪತ್ನಿ ವಸು (ರೇಖಾ) ಮೃತಳಾಗುತ್ತಾಳೆ. ಆಕ್ಸಿಡೆಂಟ್‌ನಿಂದ ಆಕೆಯ ಸಾವು ಸಂಭವಿಸಿದೆ ಎಂದು ಪೊಲೀಸರು ಪ್ರಕರಣ ದಾಖಲಿಸಿಕೊಳ್ಳುತ್ತಾರೆ. ಸಾಯುವಾಗ ಆಕೆಯ ಜೊತೆ ಗಂಡಸಿನ ದೇಹವೊಂದು ಪತ್ತೆಯಾಗುವ ಮೂಲಕ ಸಸ್ಪೆನ್ಸ್ ಆರಂಭವಾಗುತ್ತದೆ. ಅವರಿಬ್ಬರೂ ಕುಡಿದಿದ್ದರು, ಅವರಿಬ್ಬರ ಮಧ್ಯೆ ಸಂಬಂಧ ಇತ್ತು... ಹೀಗೆ ವಿಚಿತ್ರ ಸಂಗತಿಗಳ ಬೆನ್ನತ್ತಿ ಹೋಗುವ ನಾಯಕನಿಗೆ ಕೊನೆಗೆ ಸತ್ಯದ ಅರಿವಾಗುತ್ತದೆ.

ತನ್ನ ಪತ್ನಿ ಸಾವು ಆಕ್ಸಿಡೆಂಟ್‌ನಿಂದ ಅಲ್ಲ, ಬದಲಾಗಿ ಅದು ಸಮಾಜ ಬಾಹಿರ ವ್ಯಕ್ತಿಗಳ ಕೃತ್ಯ ಎಂಬುದು ಅರಿವಾಗುತ್ತದೆ. ಆ ವ್ಯಕ್ತಿಗಳ ವಿರುದ್ಧ ಹೋರಾಡುವ ನಾಯಕ ಸಾವಂತ್,



ಅವರೆಲ್ಲರನ್ನೂ ಮುಗಿಸುತ್ತಾನೆ.

ಆರಂಭದಿಂದ ಕೊನೆವರೆಗೂ ಸಸ್ಪೆನ್ಸನ್ನೇನೋ ಕಾಯ್ದುಕೊಳ್ಳುವಲ್ಲಿ ಚಿತ್ರ ಯಶಸ್ವಿಯಾಗಿದೆ. ಗೆಸ್ಟ್ ಎಪಿಯರೆನ್ಸ್‌ನಲ್ಲಿ ಎರಡು ಸೀನ್‌ಗಳಿಗೆ ಸೀಮಿತರಾಗಿರುವ ನಟಿ ಸುಧಾರಾಣಿ ತಮ್ಮ ಉತ್ತಮ ಅಭಿನಯದಿಂದ ಚಿತ್ರಕ್ಕೆ ಜೀವ ತುಂಬಿದ್ದಾರೆ.

ಆದರೆ, ಹಾಡುಗಳು ಪ್ರೇಕ್ಷಕನ ಮೇಲೆ ಪರಿಣಾಮ ಬೀರುವಲ್ಲಿ ಸಿನಿಮಾ ವಿಫಲವಾಗಿದೆ. ಸಂಗೀತವೂ ಅಷ್ಟಕ್ಕಷ್ಟೇ. ಹೊರಾಂಗಣ ಚಿತ್ರೀಕರಣ ಅಲ್ಲಲ್ಲಿ ಮಾತ್ರ ಗಮನ ಸೆಳೆಯುತ್ತದೆ.

ನಾಯಕ ಹಾಗೂ ನಿರ್ದೇಶಕ ರಮೇಶ್ ಉತ್ತಮ ನಟನೆ ಮೂಲಕ ನೋಡುಗರ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಆದರೆ, ನಾಯಕಿ ನಟಿ ರೇಖಾಳ ಪೇಲವ ಅಭಿನಯ ಚಿತ್ರದ ಮೈನಸ್ ಪಾಯಿಂಟ್. ಇದ್ದುದರಲ್ಲಿ ಪೂಜಾ ಗಾಂಧಿ ಪರವಾಗಿಲ್ಲ.

ಇದೆಲ್ಲಕ್ಕಿಂತ ಮುಖ್ಯವಾದ ಅಂಶ ಏನೆಂದರೆ ತನ್ನ ಪತ್ನಿಯನ್ನು ಕೊಂದವರನ್ನು ನಾಯಕ ತಾನೇ ಕಾನೂನು ಕೈಗೆ ಎತ್ತಿಕೊಂಡು ಅವರನ್ನು ಕೊಲ್ಲುವುದು ಅದೇ ಅರಾಜಕ ಸೇಡಿನ ಮಾಮೂಲಿ ಸೂತ್ರ. ಮನರಂಜನೆ ಹೆಸರಿನಲ್ಲಿ ಎಷ್ಟೆಂದು ಇಂಥದ್ದನ್ನೇ ನೋಡುತ್ತಾ ಹೋಗುವುದು?



ಜೈವಿಕ ಇಂಧನದ ಜಪ : ಗೋವು ಮಾತ್ರವೇ ಪವಿತ್ರವಲ್ಲ, ಎಮ್ಮೆ, ಕುರಿ, ಮೇಕೆಗಳೂ ಕೂಡ !

ಅಮೇರಿಕಾ ಆದಿಯಾಗಿ ಇಡೀ ವಿಶ್ವವೆಲ್ಲ ಜೈವಿಕ ಇಂಧನದ ಜಪ ಮಾಡಲಾರಂಭಿಸಿವೆ. ಸಾಮಾನ್ಯವಾಗಿ ಸಸ್ಯಗಳಿಂದ ಜೈವಿಕ ಇಂಧನಗಳನ್ನು ತಯಾರಿಸುವುದರಿಂದ ಇದನ್ನು ಕೃಷಿ ಇಂಧನಗಳೆಂದೂ ಕರೆಯಲಾಗುತ್ತದೆ. ಪೆಟ್ರೋಲಿಯಂ ತೈಲೋತ್ಪನ್ನಗಳ ಬೆಲೆ ದಿನೇ ದಿನೇ ಗಗನಕ್ಕೇರುತ್ತಿದೆ. ಜೊತೆಗೆ ಈ ತೈಲೋತ್ಪನ್ನಗಳನ್ನು ಭೂಗರ್ಭದಿಂದ ಶೋಧಿಸಿ ಹೊರತೆಗೆದು ಸಂಸ್ಕರಿಸುವುದರಿಂದ ಇದರ ಬೆಲೆ ಮತ್ತು ಶ್ರಮ ಇನ್ನಷ್ಟು ಹೆಚ್ಚು. ಈ ಹಿನ್ನೆಲೆಯಲ್ಲಿ ಎಣ್ಣೆ ಕಾಳುಗಳು, ಮುಸುಕಿನ ಜೋಳ ಇಂತಹ ಬೆಳೆಗಳನ್ನೇ ಉಪಯೋಗಿಸಿಕೊಂಡು ಎಥೆನಾಲ್ ಆಗಿ ಪರಿವರ್ತಿಸಿದಲ್ಲಿ ಇದನ್ನು ಸ್ವಲ್ಪ ಸ್ವಲ್ಪವೇ ಪೆಟ್ರೋಲಿಯಂ ತೈಲೋತ್ಪನ್ನಗಳ ಜೊತೆ ಮಿಶ್ರಣ ಮಾಡಿದಲ್ಲಿ ವೆಚ್ಚದಲ್ಲಿ ಸ್ವಲ್ಪ ಉಳಿತಾಯ ಮಾಡಬಹುದು ಎಂಬ ಆಲೋಚನೆ. ಸದ್ಯಕ್ಕೆ ಹೆಚ್ಚೆಂದರೆ ಶೇ. 10ರಷ್ಟು ಎಥೆನಾಲ್‌ನ್ನು ಪೆಟ್ರೋಲಿಯಂನೊಂದಿಗೆ ಸೇರಿಸಬಹುದು. ಇದಕ್ಕೆ ಅತೀ ಪ್ರಚಾರ ಕೊಟ್ಟಿರುವುದು ಬಹುರಾಷ್ಟ್ರೀಯ ಕಂಪನಿಗಳು ವಿಶೇಷವಾಗಿ ಮೋಟಾರು-ಕಾರು ತಯಾರಿಕಾ ಕಂಪನಿಗಳು. ಅಮೇರಿಕಾದ ಬಂಡವಾಳಶಾಹಿಗೆ ನಾಯಕತ್ವ ಕೊಟ್ಟಿರುವಲ್ಲಿ ಅಲ್ಲಿನ ಮೋಟಾರು-ಕಾರು ವಾಹನ ತಯಾರಿಕಾ ಕಂಪನಿಗಳದು ಒಂದು ದೊಡ್ಡ ಪಾಲು. ಅವು ತಮ್ಮ ವ್ಯಾಪಾರ ವಹಿವಾಟು ಹೆಚ್ಚುಗೊಳಿಸಲು ಹೆಚ್ಚೆಚ್ಚು ವಾಹನ ತಯಾರಿಸಬೇಕು ಹಾಗೂ ಆ ವಾಹನಗಳಿಗೆ ಸುಲಭವಾಗಿ ಇಂಧನ ಸಿಗುವಂತೆ ಮಾಡಬೇಕು. ಆದ್ದರಿಂದ ಜೈವಿಕ ಇಂಧನವನ್ನು ಸಾಂಪ್ರದಾಯಿಕ ಪೆಟ್ರೋಲ್ ಮತ್ತು ಡೀಸೆಲ್‌ಗಳಿಗೆ ಪರ್ಯಾಯವೆಂದು ಬಿಂಬಿಸಲು ಅವು ಕಸರತ್ತು ನಡೆಸಿವೆ.

ಎಥೆನಾಲ್ ತಯಾರಿಕೆ

ಎಥೆನಾಲ್ ಎಂಬುದು ಈಥೈಲ್ ಆಲ್ಕೋಹಾಲ್‌ನ ಸಂಕ್ಷಿಪ್ತ ರೂಪ. ಮದ್ಯಪಾನೀಯಗಳಲ್ಲಿ ಉಪಯೋಗಿಸುವುದು ಇದನ್ನೇ. ಇದನ್ನು ಇಂಧನವಾಗಿಯೂ ಕೂಡ ವಾಹನಗಳಲ್ಲಿ ಬಳಸಬಹುದು. ಬ್ರೆಜಿಲ್‌ನಲ್ಲಿ ಹೆಚ್ಚಾಗಿ ಇದನ್ನು ಇಂಧನವಾಗಿ ಬಳಸಲಾಗುತ್ತಿದೆ. ಎಥೆನಾಲ್‌ನ್ನು ಹಲವು ವಿಧಾನಗಳಿಂದ ತಯಾರಿಸಬಹುದು. ಪ್ರಸ್ತುತ ಸುಲಭ ವಿಧಾನವಾದ ಸಕ್ಕರೆಯಿಂದ ತಯಾರಿಸಲು ಸಂಶೋಧನೆಗಳು ಹೆಚ್ಚು ಆಸಕ್ತಿವಹಿಸಿವೆ. ಸಕ್ಕರೆ ತಯಾರಿಕೆಯಲ್ಲಿ ಉಪಉತ್ಪನ್ನವಾಗಿ ಬಿಡುಗಡೆಯಾಗುವ ಮಡ್ಡಿ ಅಥವಾ ಮೊಲಾಸಸ್‌ನಲ್ಲಿ ಅಪಾರ ಸಕ್ಕರೆ ಅಂಶವಿರುತ್ತದೆ. ಈ ಸಕ್ಕರೆಯನ್ನು ಡಿಸ್ಟಿಲರ್ ಕೈಗಾರಿಕೆಗಳಲ್ಲಿ ಹುಳಿಬರುವಂತೆ ಮಾಡಿ (ಫರ್ಮೆಂಟೇಷನ್ ಪ್ರೋಸೆಸ್) ನಂತರ ಅದನ್ನು ಹೆಚ್ಚು ಉಷ್ಣಾಂಶವಿರುವ ಬಾಷ್ಪೀಕರಣ ಘಟಕಗಳಲ್ಲಿ (ಡಿಸ್ಟಿಲೇಷನ್ ಕಾಲಮ್) ಕುದಿಸಿ ಆವಿಗೊಳಿಸಲಾಗುತ್ತದೆ. ಹೀಗೆ ಆವಿಯಾಗಿ ಹೊರಬರುವುದೇ ಎಥೆನಾಲ್. ಇದನ್ನು ಮತ್ತಷ್ಟು



ಸಂಸ್ಕರಿಸಿ ಶೇಖರಿಸಿಡಲಾಗುತ್ತದೆ.

ಅನ್ನ ಕಿತ್ತುಕೊಳ್ಳುವ ಜೈವಿಕ ಇಂಧನ:

ಕಬ್ಬಿಗೆ ಬೆಲೆ ಇಲ್ಲವಾ? ಭತ್ತ, ರಾಗಿಗೆ ಬೆಲೆ ಇಲ್ಲವಾ? ಚಿಂತೆ ಬೇಡ, ಎಥೆನಾಲ್ ತಯಾರಿಸಲು



ಅವಶ್ಯವಾದ ಎಣ್ಣೆಕಾಳುಗಳ ಬೆಳೆ ಬೆಳೆಯಿರಿ, ಉತ್ತಮ ಬೆಲೆಗೆ ನಾವು ಕೊಂಡುಕೊಳ್ಳುತ್ತೇವೆ ಎನ್ನುತ್ತವೆ ಬಹು ರಾಷ್ಟ್ರೀಯ ಕಂಪನಿಗಳು. ಹೀಗೆ ಆಹಾರ ಧಾನ್ಯಗಳನ್ನು ಬೆಳೆಯುವ ಹೊಲಗದ್ದೆಗಳಲ್ಲಿ ಜೈವಿಕ ಇಂಧನಕ್ಕಾಗಿ ಎಣ್ಣೆಕಾಳುಗಳನ್ನು ಬೆಳೆಯಲಾರಂಭಿಸಿದಲ್ಲಿ, ಈಗಾಗಲೇ ಹಸಿವಿನಿಂದ ತತ್ತರಿಸುತ್ತಿರುವ ಬಡರಾಷ್ಟ್ರಗಳು ಒಂದೆಡೆ ಇನ್ನಷ್ಟು ಭೀಕರ ಹಸಿವು ಸಾವುಗಳನ್ನು ಕಾಣುವುದಿದ್ದರೆ, ಇನ್ನೊಂದೆಡೆ ನಮ್ಮ ಹೊಲಗದ್ದೆಗಳಲ್ಲಿ ಶ್ರೀಮಂತ ರಾಷ್ಟ್ರಗಳ ಮೋಟಾರು-ವಾಹನಗಳಿಗೆ ಇಂಧನಕ್ಕಾಗಿ ಎಣ್ಣೆಕಾಳುಗಳನ್ನು ಬೆಳೆದು ರಫ್ತು ಮಾಡುತ್ತಿರುತ್ತಾರೆ. 2007-08 ರಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಮುಖ ಏಳು ಎಣ್ಣೆಕಾಳುಗಳನ್ನು ಜೈವಿಕ ಇಂಧನಕ್ಕಾಗಿ ಬಳಸಿದ್ದರಿಂದ ಆಹಾರಕ್ಕಾಗಿ ಅವಶ್ಯವಿರುವ ಎಣ್ಣೆಕಾಳುಗಳಲ್ಲಿ ಕೊರತೆಯುಂಟಾದದ್ದು ಸುಮಾರು 2 ಕೋಟಿ ಟನ್‌ಗಳಷ್ಟು.

'ಮೃತ್ಯುಕೂಪ' ದೊಳಕ್ಕೆ ತಳ್ಳಬಲ್ಲ ಜೈವಿಕ ಇಂಧನ:

ಸಸ್ಯಗಳಿಂದ ತಯಾರಿಸಲ್ಪಟ್ಟ ಎಥೆನಾಲ್ ಮತ್ತು ಡೀಸೆಲ್‌ಗಳನ್ನು ವಾಹನಗಳಲ್ಲಿ ಬಳಸಿದಾಗ ಅವು ಉಗುಳುವ ಹೊಗೆಯಿಂದ ಹೆಚ್ಚಿನ ಮಟ್ಟದ ಮಾಲಿನ್ಯ ವುಂಟಾಗುವುದೆಂದು ವಿಜ್ಞಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಅಮೇರಿಕಾದ ಮೆಕ್ಸಿಕೋ ಕೊಲ್ಲಿ ಪ್ರದೇಶದಲ್ಲಿ ಮುಸುಕಿನ ಜೋಳದಿಂದ ತಯಾರಿಸಿದ ಎಥೆನಾಲ್‌ನ್ನು ಪರ್ಯಾಯ ಇಂಧನವಾಗಿ ಬಳಸಿರುವುದರಿಂದ ಅಲ್ಲಿನ ಮಲಿನತೆಯ ಮಟ್ಟ ತೀವ್ರಗೊಂಡಿದ್ದು, ಅಲ್ಲಿ 'ಮೃತ್ಯು ವಲಯ'ವನ್ನು ಹೆಚ್ಚು ಮಾಡಿದೆ. ಕೆರೆ, ನದಿ, ಸಮುದ್ರದಂತಹ ಯಾವೊಂದು ಜಲಮೂಲದಲ್ಲಿ ಜೀವಿಗಳು ಉಸಿರಾಡಲು ಅವಶ್ಯವಿರುವಷ್ಟು ಆಮ್ಲಜನಕದ ಕೊರತೆಯಿದ್ದು ಅಲ್ಲಿ ಜೀವಿಗಳು ವಾಸಿಸಲು ಸಾಧ್ಯವಿಲ್ಲವೋ ಅಂತಹ ಪ್ರದೇಶವನ್ನು 'ಮೃತ್ಯು ವಲಯ' ಎಂದು ಕರೆಯಲಾಗುತ್ತದೆ. ಅಲ್ಲದೆ ಅಮೇರಿಕಾ ತಾನು 2006ರಲ್ಲಿ ತಯಾರುಮಾಡಿದ್ದಕ್ಕಿಂತ ಮೂರು ಪಟ್ಟು ಹೆಚ್ಚು ಎಥೆನಾಲ್‌ನ್ನು 2022ರ ಹೊತ್ತಿಗೆ ತಯಾರುಮಾಡಲು ನೀಲಿನಕ್ಷೆ ರೂಪಿಸಿದೆ. ಮುಸುಕಿನ ಜೋಳ ತಯಾರಿಕೆಗೆ ಹೆಚ್ಚಾಗಿ ಸಾರಜನಕ ಹೊಂದಿರುವ ರಾಸಾಯನಿಕ ಗೊಬ್ಬರಗಳನ್ನು ಹೊಲಗದ್ದೆಗಳಲ್ಲಿ ಬಳಸಲಾಗುತ್ತದೆ. ಇದರಿಂದ ಅಮೇರಿಕಾದ ಮಿಸಿಸಿಪ್ಪಿ ನದಿಯಿಂದ ಮೆಕ್ಸಿಕೋ ಕೊಲ್ಲಿಯೊಳಕ್ಕೆ ಪ್ರವೇಶಿಸುವ ಮಲಿನ ನೀರಿನಿಂದ ಸಾರಜನಕದ ಪ್ರಮಾಣವು ಶೇ.19ರಷ್ಟು ಹೆಚ್ಚಾಗುವುದಿದೆ ಎಂದು ಅಮೇರಿಕಾದ ವಿಸ್‌ಕಾನ್ಸಿನ್ ವಿಶ್ವವಿದ್ಯಾಲಯದ ವರದಿಗಳು ಹೇಳುತ್ತವೆ.

ಜೈವಿಕ ಇಂಧನಕ್ಕಾಗಿ ಅವಶ್ಯವಿರುವ ಬೆಳೆಗಳನ್ನು ಬೆಳೆಯಲು ಎಲ್ಲರೂ ಮುಗಿಬೀಳುತ್ತಿರುವುದರಿಂದ ಅರಣ್ಯನಾಶ, ಹುಲ್ಲುಗಾವಲುಗಳ ನಾಶ, ಆಹಾರಧಾನ್ಯ ಪ್ರದೇಶಗಳ ನಾಶ ಉಂಟಾಗುತ್ತಿದೆ. ಇದರಿಂದ ವಾತಾವರಣದಲ್ಲಿ ಉತ್ಪತ್ತಿಯಾಗುವ ಇಂಗಾಲವನ್ನು ಹೀರಿಕೊಳ್ಳುತ್ತಿರುವ ಮರಗಿಡಗಳು ಒಮ್ಮೆಲೆ ನಾಶಗೊಂಡು ವನ್ಯಜೀವಿಗಳು ವಿನಾಶವಾಗಿ, ವಾತಾವರಣದಲ್ಲಿ ಇಂಗಾಲದ ಪ್ರಮಾಣವು ಹೆಚ್ಚಾಗಿ ವಾಯುಮಾಲಿನ್ಯದ ಸವಾಲೊಡ್ಡುತ್ತದೆ.

ಗೋವು ಮಾತ್ರವೇ ಪವಿತ್ರವಲ್ಲ, ಎಮ್ಮೆ ದನಗಳೂ ಕೂಡ!

ಪುಟ 11 ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE-560027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURUSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH